## ಅಧ್ಯಾಯ 3

# ಮನುಷ್ಯನ ಬೀಳುವಿಕೆ

ಮಾನವ ಜನಾಂಗದ ನಾಟಕದಲ್ಲಿನ ಎರಡನೆಯ ದೃಶ್ಯವು ದುರಂತಕರವಾಗಿದೆ. ಅದು ಒಬ್ಬ ಹೊಸ ನಟನೆಗಾರನಾದ ಒಂದು ಸರ್ಪದ ಪ್ರವೇಶದ ಮೂಲಕವಾಗಿ ಆರಂಭಗೊಳ್ಳುತ್ತದೆ; ಮತ್ತು ಅದು ಮಾನವ ಜನಾಂಗವು ಮುಗ್ಧತೆಯ ಹಾಗೂ ದೇವರೊಂದಿಗೆ ಇದ್ದ ಒಂದು ಪರಿಪೂರ್ಣವಾದ ಸಂಬಂಧದ ಮಟ್ಟದಿಂದ ಬಿದ್ದು ಹೋಗುವದನ್ನು ಚಿತ್ರಿಸುತ್ತದೆ.

## ಶೋಧನೆ ಮತ್ತು ಬೀಳುವಿಕೆ (3:1-7)

**1ಯೆಹೋವದೇವರು ಉಂಟುಮಾಡಿದ ಎಲ್ಲಾ ಭೂಜಂತುಗಳಲ್ಲಿ ಸರ್ಪವು
ಯುಕ್ತಿಯುಳ್ಳದ್ದಾಗಿತ್ತು. ಅದು ಸ್ತ್ರೀಯ ಬಳಿಗೆ ಬಂದು - ಏನವ್ವಾ, ತೋಟದಲ್ಲಿರುವ ಯಾವ ಮರದ
ಹಣ್ಣನ್ನೂ ನೀವು ತಿನ್ನಬಾರದೆಂದು ದೇವರು ಅಪ್ಪಣೆಕೊಟ್ಟಿರುವದು ನಿಜವೋ ಎಂದು ಕೇಳಲು
ಸ್ತ್ರೀಯು - 2ತೋಟದಲ್ಲಿರುವ ಮರಗಳ ಹಣ್ಣುಗಳನ್ನು ನಾವು ತಿನ್ನಬಹುದು; 3ಆದರೆ ತೋಟದ
ಮಧ್ಯದಲ್ಲಿರುವ ಈ ಮರದ ಫಲದ ವಿಷಯವಾಗಿ - ಇದನ್ನು ತಿನ್ನಲೂ ಕೂಡದು, ಮುಟ್ಟಲೂ
ಕೂಡದು; ತಿಂದರೆ ಸಾಯುವಿರಿ ಎಂದು ದೇವರು ಹೇಳಿದ್ದಾನೆ ಅಂದಳು. 4ಆಗ ಸರ್ಪವು ಸ್ತ್ರೀಗೆ -
ನೀವು ಹೇಗೂ ಸಾಯುವದಿಲ್ಲ; 5ನೀವು ಇದರ ಹಣ್ಣನ್ನು ತಿಂದಾಗಲೇ ನಿಮ್ಮ ಕಣ್ಣುಗಳು
ತೆರೆಯುವವು; ನೀವು ದೇವರಂತೆ ಆಗಿ ಒಳ್ಳೇದರ ಕೆಟ್ಟದ್ದರ ಭೇದವನ್ನು ಅರಿತವರಾಗುವಿರಿ;
ಇದು ದೇವರಿಗೆ ಚೆನ್ನಾಗಿ ಗೊತ್ತುಂಟು ಅಂದಿತು. 6ಆಗ ಸ್ತ್ರೀಯು - ಆ ಮರದ ಹಣ್ಣು ತಿನ್ನುವದಕ್ಕೆ
ಉತ್ತಮವಾಗಿಯೂ ನೋಡುವದಕ್ಕೆ ರಮ್ಯವಾಗಿಯೂ ಜ್ಞಾನೋದಯಕ್ಕೆ
ಅಪೇಕ್ಷಿಸತಕ್ಕದ್ದಾಗಿಯೂ ಇದೆ ಎಂದು ತಿಳಿದು ಅದನ್ನು ತೆಗೆದುಕೊಂಡು ತಿಂದಳು. ಸಂಗಡ ಇದ್ದ
ಗಂಡನಿಗೂ ಕೊಡಲು ಅವನೂ ತಿಂದನು. 7ಕೂಡಲೆ ಅವರಿಬ್ಬರ ಕಣ್ಣುಗಳು ತೆರೆದವು; ತಾವು
ಬೆತ್ತಲೆಯಾಗಿದ್ದೇವೆಂದು ತಿಳಿದು ಅಂಜೂರದ ಎಲೆಗಳನ್ನು ಹೊಲಿದು ಉಟ್ಟುಕೊಂಡರು.**

**ವಚನ 1. ಸರ್ಪವು** ದೇವರು ಆದಾಮ ಮತ್ತು ಹವ್ವಳನ್ನು ಇಟ್ಟಿದ್ದ ತೋಟದೊಳಗೆ ಪ್ರವೇಶಿಸಿತು. ಇಲ್ಲಿ ಒಂದು ನಿಜವಾದ ಸರ್ಪದ ಕುರಿತಾಗಿ ಮಾತಾಡತಕ್ಕದ್ದಾಗಿದೆ ಯಾಕೆಂದರೆ ಲೇಖಕನು ಅದನ್ನು **ಯೆಹೋವದೇವರು ಉಂಟುಮಾಡಿದ** ಜೀವಿಗಳಲ್ಲೊಂದು ಎಂಬುದಾಗಿ ಗುರುತಿಸುತ್ತಾನೆ. ಅಲ್ಲದೆ, ಆತನು "ಸರ್ಪ" ಎಂಬುದಕ್ಕೆ ಸಾಮಾನ್ಯವಾಗಿ ರೂಢಿಯಲ್ಲಿದ್ದ ಇಬ್ರಿಯ ಪದವನ್ನು (נָחָשׁ, *ನಚಾಶ್*) ಎಂಬ ಪದವನ್ನು ಬಳಕೆ ಮಾಡುತ್ತಾನೆ, ಅದು ಆದಿಕಾಂಡ 3ನೇ ಅಧ್ಯಾಯದಲ್ಲಿ ಮೂರು ಸಾರಿ ಕಾಣಿಸಿಕೊಳ್ಳುತ್ತದೆ ಮತ್ತು ಹಳೆಯ ಒಡಂಬಡಿಕೆಯಲ್ಲಿ ಮೂವತ್ತೊಂದು ಸಾರಿ ಕಾಣಿಸಿಕೊಳ್ಳುತ್ತದೆ. *ನಚಾಶ್* ಎಂಬುದು ಮೋಶೆಯು ನೆಲದ ಮೇಲೆ ಹಾಕಿದ ಕೂಡಲೆ ಸರ್ಪವಾಗಿ ಮಾರ್ಪಟ್ಟಂಥ ಆತನ ಕೋಲನ್ನು ಸೂಚಿಸುವದಕ್ಕೆ ಬಳಸಲ್ಪಟ್ಟಿರುತ್ತದೆ (ವಿಮೋಚನಕಾಂಡ 4:3; 7:15), ಮತ್ತು ಅವು ಅರಣ್ಯದಲ್ಲಿ ಅವಿಧೇಯರಾದ ಇಸ್ರಾಯೇಲ್ಯರ ಮೇಲೆ ಯೆಹೋವನು ಕಳುಹಿಸಿಕೊಟ್ಟ "ಉರಿ ಸರ್ಪಗಳನ್ನು" ಬಣ್ಣಿಸುತ್ತದೆ.

ಅಷ್ಟುಮಾತ್ರವಲ್ಲದೆ, ದೇವರು ಮೋಶೆಗೆ ಒಂದು ತಾಮ್ರದ ಸರ್ಪವನ್ನು ಮಾಡಿ ಅದನ್ನು ಎತ್ತರದಲ್ಲಿ ಕಂಬದಲ್ಲಿ ನಿಲ್ಲಿಸು; ಸರ್ಪದಿಂದ ಕಚ್ಚಲ್ಪಟ್ಟಿರುವವರು ಅದನ್ನು ನೋಡಿ ಸ್ವಸ್ಥತೆಯನ್ನು ಹೊಂದಿಕೊಳ್ಳುವರು ಎಂದು ಹೇಳಿದ ಸಂದರ್ಭದಲ್ಲಿ ಈ ಪದವು ಬಳಸಲ್ಪಟ್ಟಿದೆ (ಅರಣ್ಯಕಾಂಡ 21:6, 7, 9).[1]

ಇದರರ್ಥವು *The Epic of Gilgamesh*[2] ರಂತಹ ಪ್ರಾಚೀನ ಮಧ್ಯಪ್ರಾಚ್ಯದ ಸಾಹಿತ್ಯದಲ್ಲಿ ಬಣ್ಣಿಸಲ್ಪಟ್ಟಿರುವ, ಈ ಸರ್ಪವು ಒಂದು ಪೌರಾಣಿಕ ದೇವರು ಅಥವಾ ಅರೆ-ದೈವಿಕ ಜೀವಿಯಾಗಲಿ ಆಗಿರುವದಿಲ್ಲ ಎಂದಾಗಿರುತ್ತದೆ. ಈ ದಂತಕಥೆಯನ್ನು ಕೆಲವು ಸಾರಿ ಬೈಬಲಿನ ಕಥೆಗೆ ಮೂಲವೆಂಬುದಾಗಿ ಭಾವಿಸಿಕೊಳ್ಳಲ್ಪಡುತ್ತಾದರೂ, ಆದಿಕಾಂಡದ ಲೇಖಕನು ಮೆಸಪೋತಾಮ್ಯದ ದಂತಕಥೆಯನ್ನು ಬಳಸಿದನೆಂಬುದನ್ನು ವಾಸ್ತವಿಕದಲ್ಲಿ ಯಾವದೂ ಸೂಚಿಸುವದಿಲ್ಲ.

ಅನಂತರದ ಯೆಹೂದಿ ಅರ್ಥನಿರೂಪಕರು ಆದಿಕಾಂಡದ ಸರ್ಪವನ್ನು ಪ್ರಥಮ ಮನುಷ್ಯನಾದ ಆದಾಮ ಹಾಗೂ ಹವ್ವಳರನ್ನು ಶೋಧಿಸುವದಕ್ಕೋಸ್ಕರ ಸೈತಾನನು ಬಳಸಿಕೊಂಡ ಸಾಧನವೆಂಬುದಾಗಿ ಅರ್ಥಮಾಡಿಕೊಂಡರು. ಪ್ರೇರಿತವಲ್ಲದ ಸೊಲೊಮೋನನ ಜ್ಞಾನ ಎಂಬ ಪುಸ್ತಕದ ಲೇಖಕನು ಹೇಳಿದ್ದೇನೆಂದರೆ, "ದೇವರು ನಮ್ಮನ್ನು ನಿಷ್ಕಳಂಕತೆಗಾಗಿ ಉಂಟು ಮಾಡಿದನು; ... ಆದರೆ ಸೈತಾನನ ಹೊಟ್ಟೆಕಿಚ್ಚಿನ ಮೂಲಕವಾಗಿ ಮರಣವು ಲೋಕದೊಳಗೆ ಪ್ರವೇಶಿಸಿತು, ಮತ್ತು ಆತನ ತಂಡಕ್ಕೆ ಸೇರಿದವರು ಇದನ್ನು ಅನುಭವ ಮಾಡಿದರು."[3]

ಸೈತಾನನು ಸರ್ಪದ ಮೂಲಕವಾಗಿ ಮಾತಾಡಿ, ಏದೆನ್ ತೋಟದಲ್ಲಿದ್ದ ಮಾನವರ ತಂದೆತಾಯಿಗಳನ್ನು ವಂಚಿಸಿದನೆಂದು ಹೊಸ ಒಡಂಬಡಿಕೆಯ ಲೇಖಕರು ನಂಬಿದರು. ಯೋಹಾನನು ಯೇಸುವಿನ ಮಾತುಗಳನ್ನು ಈ ಕೆಳಗಿನಂತೆ ಬರೆದಿಟ್ಟಿರುತ್ತಾನೆ, "ಸೈತಾನನು ನಿಮ್ಮ ತಂದೆ; ... ಅವನು ಆದಿಯಿಂದಲೂ ಕೊಲೆಗಾರನಾಗಿದ್ದು ... ಅವನು ಸುಳ್ಳಾಡುವಾಗ ಸ್ವಭಾವಾನುಸಾರವಾಗಿ ಆಡುತ್ತಾನೆ; ಅವನು ಸುಳ್ಳುಗಾರನೂ ಸುಳ್ಳಿಗೆ ಮೂಲಪುರುಷನೂ ಆಗಿದ್ದಾನೆ" (ಯೋಹಾನ 8:44). ಕೊರಿಂಥದಲ್ಲಿ ಕೆಲವರನ್ನು ಸುಳ್ಳು ಬೋಧಕರು ವಂಚಿಸುತ್ತಿದ್ದಾರೆಂಬ ಕಳವಳವು ಪೌಲನಿಗಿತ್ತು, ಮತ್ತು ಆತನು ಈ ಮಾತುಗಳನ್ನು ಬರೆಯುತ್ತಾನೆ: "ಆದರೆ ಹೇಗೆ ಹವ್ವಳು ಸರ್ಪದ ಕುಯುಕ್ತಿಗೆ ಒಳಬಿದ್ದು ಮೋಸಹೋದಳೋ ಹಾಗೆಯೇ ನಿಮ್ಮ ಮನಸ್ಸು ಕ್ರಿಸ್ತನ ವಿಷಯದಲ್ಲಿರಬೇಕಾದ ಯಥಾರ್ಥತ್ವವನ್ನೂ ಪಾತಿವ್ರತ್ಯವನ್ನೂ ಬಿಟ್ಟು ಕೆಟ್ಟುಹೋದೀತೆಂದು ನನಗೆ ಭಯವುಂಟು" (2 ಕೊರಿಂಥ 11:3). ಅಪೊಸ್ತಲನು ದೃಢಪಡಿಸಿದ್ದೇನೆಂದರೆ "ಸೈತಾನನು ತಾನೇ ಪ್ರಕಾಶರೂಪವುಳ್ಳ ದೇವದೂತನ ವೇಷವನ್ನು ಹಾಕಿಕೊಳ್ಳುವಾಗ ಅವನ ಸೇವಕರು ಸಹ ನೀತಿಗೆ ಸೇವಕರಾಗಿ ಕಾಣಿಸುವದಕ್ಕೆ ವೇಷಹಾಕಿಕೊಳ್ಳುವದು ದೊಡ್ಡದಲ್ಲ" (2 ಕೊರಿಂಥ 11:14, 15). ಜನರನ್ನು ವಂಚಿಸುವದಕ್ಕೋಸ್ಕರ ಸೈತಾನನು ವೇಷಹಾಕಿಕೊಳ್ಳಲು ಶಕ್ತನಾಗಬಹುದೆಂದು ಪೌಲನು ನಂಬಿದ್ದನು. ಆದಿಯಲ್ಲಿ ಆತನು ಇದನ್ನೇ ಮಾಡಿದನೆಂಬುದು ಸ್ಪಷ್ಟವಾಗುತ್ತದೆ, ಸರ್ಪವನ್ನು ತನ್ನ ಸಾಧನವನ್ನಾಗಿ ಬಳಸಿಕೊಂಡು ಅವರ ಭೂಲೋಕದ ಪರದೈಸಿನಲ್ಲಿ ಪ್ರಥಮ ಪುರುಷ ಮತ್ತು ಸ್ತ್ರೀಯನ್ನು ಶೋಧನೆ ಮಾಡಿದನು (ನೋಡಿರಿ ಪ್ರಕಟನೆ 12:9, 15; 20:2).

ವಾಚಕನು ಕಥೆಯನ್ನು ಈಗಾಗಲೇ ತಿಳಿದುಕೊಂಡಿಲ್ಲವಾದರೆ ಬೈಬಲಿನ ಕಥನದಲ್ಲಿ ಸರ್ಪವು ಏಕಾಏಕಿ ಕಾಣಿಸಿಕೊಳ್ಳುವಿಕೆಯು ಆತನನ್ನು ಆಶ್ಚರ್ಯಗೊಳಿಸಬಹುದಾಗಿದೆ. ಹೇಗೂ, ಆ ಆಘಾತವು ಆಮಾಯಕಳಾಗಿದ್ದ ಸ್ತ್ರೀಗೆ ಆಗಿದ್ದಷ್ಟು ದೊಡ್ಡದೇನೂ ಆಗಿರಲಾರದು. ಏಕಾಏಕಿ,

ಆಕೆಯು ತನಗೆ ಅರಿವಿಲ್ಲದೆಯೇ ದೇವರು ಉಂಟು ಮಾಡಿದ್ದ **ಎಲ್ಲಾ** [ಯಾವದೇ] **ಭೂಜಂತುಗಳಲ್ಲಿ ಸರ್ಪವು ಯುಕ್ತಿಯುಳ್ಳ** ಜೀವಿಯೊಂದಿಗೆ ಒಂದು ಚರ್ಚೆಯಲ್ಲಿ ತೊಡಗಿಸಿಕೊಂಡಿದ್ದಳು. "ಯುಕ್ತಿಯುಳ್ಳ" (ערוּם, *ಅರುಮ್*) ಎಂಬ ಪದವನ್ನು "ಪರಿಜ್ಞಾನವುಳ್ಳ" ಅಥವಾ "ವಿವೇಕಯುತ" (ಜ್ಞಾನೋಕ್ತಿ 12:16, 23; 13:16; 14:8, 15, 18; 22:3; 27:12) ಎಂಬುದಾಗಿ ಅನುವಾದಿಸುವದಾದರೆ ಒಂದು ಸಕಾರಾತ್ಮಕ ಸದ್ಗುಣ ಎಂಬುದಾಗಿ ಅರ್ಥಮಾಡಿಕೊಳ್ಳಲ್ಪಡಬಲ್ಲದು. ಹೇಗೂ, ಇದು "ಯುಕ್ತಿಯುಳ್ಳದ್ದು" "ಚಾಣಕ್ಷ್ಯ" ಎಂಬುದಾಗಿ ಅನುವಾದಿಸಲ್ಪಡುವದಾದರೆ ಒಂದು ನಕಾರಾತ್ಮಕ ಸೂಚ್ಯಾರ್ಥವನ್ನು ಹೊಂದಿರುತ್ತದೆ (ಯೋಬ 5:12; 15:5; ನೋಡಿರಿ ವಿಮೋಚನಕಾಂಡ 21:14; ಯೆಹೋಶುವ 9:4; ಕೀರ್ತನೆ 83:3). ಖಂಡಿತವಾಗಿಯೂ, ಇದರ ಅತ್ಯಂಥ ಮಹತ್ವಪೂರ್ಣವಾದ ಬಳಕೆಯೆಂದರೆ ಆದಿಕಾಂಡ 3:1ರಲ್ಲಿ ಸರ್ಪನನ್ನು ಕುರಿತು ಉಲ್ಲೇಖಿಸಿದ್ದರಲ್ಲಿಯೇ ಆಗಿದೆ. 3:1-5ರಲ್ಲಿ, ಸರ್ಪದ ದುದ್ದೇಶದ ಅಂತರ್ದೃಷ್ಟಿ ಮತ್ತು 2:25ರಲ್ಲಿನ ಆದಾಮ ಹಾಗೂ ಹವ್ವಳರ ಮುಗ್ಧತೆಯ ನಡುವಿನ ವಿರುದ್ಧ ಹೋಲಿಕೆಯನ್ನು ಕಾಣುತ್ತೇವೆ.[4]

ಈ ಚರಿತ್ರೆಯಲ್ಲಿ ಸರ್ಪವು ಪುರುಷನನ್ನು ಬಿಟ್ಟು ಸ್ತ್ರೀಯೊಂದಿಗೆ ಏಕೆ ಮಾತಾಡಿತೆಂಬುದು ಅಸ್ಪಷ್ಟವಾಗಿರುತ್ತದೆ. ಪುರುಷರಿಗಿಂತಲೂ ಸ್ತ್ರೀಯರು ಬಹಳ ಸುಲಭವಾಗಿ ಮೋಸಕ್ಕೊಳಗಾಗಬಲ್ಲರು ಎಂಬುದಾಗಿ ಕೆಲವರು ಹೇಳಿರುತ್ತಾರೆ. ಪೌಲನು ವಿವರಿಸಿದ್ದೇನೆಂದರೆ "ಇದಲ್ಲದೆ ಆದಾಮನು ವಂಚನೆಗೆ ಒಳಬೀಳಲಿಲ್ಲ, ಸ್ತ್ರೀಯು ವಂಚನೆಗೆ ಒಳಬಿದ್ದು ಅಪರಾಧಿಯಾದಳು" ಎಂಬುದೆ (1 ತಿಮೊಥೆ 2:14). ಇನ್ನೊಂದೆಡೆಯಲ್ಲಿ, ಹವ್ವಳ ಸ್ವಭಾವದ ವಿಷಯದಲ್ಲಿ, ಆಕೆಯು ಆದಾಮನಿಗಿಂತ ಹೆಚ್ಚು ಮುಗ್ಧಳೆನೋ ಎಂಬಂತೆ ಪೌಲನು ಏನನ್ನೂ ಹೇಳಿರುವದಿಲ್ಲ. ಆಕೆಯ ಗಂಡನಿಗೆ ತದ್ವಿರುದ್ಧವಾದವಳಾಗಿ, ಆಕೆಯು ಕಣ್ಣುಗಳನ್ನು ಅಗಲಿಸಿ ತೆರೆದವಳಾಗಿ ವಂಚಿಸಲ್ಪಟ್ಟಳು ಎಂದಷ್ಟೇ ಆತನು ಹೇಳಿರುತ್ತಾನೆ.[5] ಆದಾಮನು "ಒಳ್ಳೇದರ ಕೆಟ್ಟದ್ದರ ಅರುಹನ್ನು ಹುಟ್ಟಿಸುವ ಮರದ ಹಣ್ಣನ್ನು" ತಿಂದರೆ ಸಾಯುವಿ (2:17) ಎಂಬುದಾಗಿ ದೇವರು ಆತನಿಗೆ ಹೇಳಿದ ಸಂದರ್ಭದಲ್ಲಿ ಹವ್ವಳು ಇನ್ನೂ ಉಂಟು ಮಾಡಲ್ಪಟ್ಟಿರಲಿಲ್ಲ. ಇದರರ್ಥವು ನಿಷೇಧಿಸಲ್ಪಟ್ಟಿದ್ದ ಮರದ ಕುರಿತಾಗಿ ಆಕೆಗೆ ಆದಾಮನಿಂದ ಕೇಳಿ ತಿಳಿದುಕೊಂಡ ಜ್ಞಾನವಷ್ಟೇ ಇತ್ತು ಎಂದಾಗುತ್ತದೆ. ಬಹುಶಃ ಸರ್ಪಕ್ಕೆ ಇದು ತಿಳಿದಿತ್ತೆಂದು ಕಾಣಿಸುತ್ತದೆ, ಯಾಕೆಂದರೆ ಆತನು ದೇವರ ನಿಷೇಧಾಜ್ಞೆಯನ್ನು ಮತ್ತು ಆತನ ಗುಣಸ್ವಭಾವವನ್ನು ಅಪಾರ್ಥಮಾಡಿಕೊಳ್ಳುವಂತ ಮಾತುಗಳಲ್ಲಿ ಪ್ರಶ್ನೆಯನ್ನು ಆಕೆಯ ಮುಂದಿಡುತ್ತಾನೆ.

ಶೋಧನೆಯು ಒಂದು ಮುಗ್ಧವಾಗಿ ತೋರುವಂಥ ಪ್ರಶ್ನೆಯೊಂದಿಗೆ ಆರಂಭಗೊಂಡಿತ್ತು: **ಏನವ್ವಾ, ತೋಟದಲ್ಲಿರುವ ಯಾವ ಮರದ ಹಣ್ಣನ್ನೂ ನೀವು ತಿನ್ನಬಾರದೆಂದು ದೇವರು ಅಪ್ಪಣೆಕೊಟ್ಟಿರುವದು ನಿಜವೋ.** ಸರ್ಪವು ನೇರವಾಗಿ ದೇವರ ಆಜ್ಞೆಯನ್ನು ಉತ್ಪ್ರೇಕ್ಷೆ ಪಡಿಸಿ ಕೇಳುತ್ತಾನೆ, ಆತನು ತೋಟದಲ್ಲಿರುವ ಯಾವದೇ ಮರದ ಹಣ್ಣನ್ನಾಗಲಿ ಸಹ ತಿನ್ನುವಂತೆ ಪುರುಷ ಹಾಗೂ ಸ್ತ್ರೀಗೆ ಅನುಮತಿಸುವದಿಲ್ಲ ಎಂಬಂತೆ ತಿರುಚಿ ಹೇಳುತ್ತಾನೆ. ಖಂಡಿತವಾಗಿಯೂ, ಇದೊಂದು ಸಂಪೂರ್ಣ ಮಿಥ್ಯಾ ನಿರೂಪಣೆಯಾಗಿತ್ತು ಯಾಕೆಂದರೆ ಒಂದು ಮರವನ್ನು ಹೊರತು ಪಡಿಸಿ ಎಲ್ಲಾ ಮರಗಳ ಹಣ್ಣನ್ನು ತಿನ್ನಬಹುದೆಂದು ದೇವರು ಹೇಳಿದ್ದನಷ್ಟೆ; ಆ ಮರವನ್ನು ಮಾತ್ರವೇ ಅವರಿಂದ ದೂರವಿಡಲಾಗಿತ್ತು. ಈ ವಿಧದಲ್ಲಿ ಪ್ರಶ್ನೆಯನ್ನು ಕೇಳುವ ಮೂಲಕ, ದೇವರ ಗುಣಸ್ವಭಾವದ ವಿಷಯವಾಗಿ ಹವ್ವಳ ಮನಸ್ಸಿನಲ್ಲಿ ಸಂದೇಹವನ್ನುಂಟು ಮಾಡುವದೇ ಸರ್ಪದ ತಂತ್ರವಾಗಿತ್ತು.

**ವಚನಗಳು 2, 3.** ಆಗ **ಸ್ತ್ರೀಯು** ನೀಡಿದ ಪ್ರತ್ಯುತ್ತರವು ದೇವರ ಹೇಳಿಕೆಯನ್ನು ಜ್ಞಾಪಕಪಡಿಸುವ ಮೂಲಕ **ಸರ್ಪನ** ಮಾತನ್ನು ತಿದ್ದುವುದೇ ಆಗಿತ್ತು; ಹೇಗೂ, ಹಾಗೆ ಮಾಡುವದಕ್ಕೆ ಹೋಗಿ, ಅವಳೇ ಸ್ವತಃ ಅದನ್ನು ಅತಿಶಯಗೊಳಿಸಿ ಹೇಳಿ ಬಿಟ್ಟಿದ್ದಳು. ಮೊದಲನೆಯದಾಗಿ, ದೇವರು ಅವರಿಗೆ **ತೋಟದಲ್ಲಿರುವ ಮರಗಳ ಹಣ್ಣುಗಳನ್ನು ನಾವು ತಿನ್ನಬಹುದು** ಎಂದು ಅನುಮತಿಸಿರುತ್ತಾನೆ, ಆದರೆ **ತೋಟದ ಮಧ್ಯದಲ್ಲಿರುವ ಈ ಮರದ ಫಲವನ್ನು** ತಿನ್ನಬಾರದೆಂದು ಹೇಳಿದ್ದಾನೆ ಎಂಬುದಾಗಿ ನಿಖರವಾಗಿ ವಿವರಿಸಿದಳು. ಆ ಮರದ ಫಲವನ್ನು **ತಿನ್ನಲೂ ಕೂಡದು** ಎಂದಷ್ಟೆ ಹೇಳುವದರ ಬದಲಾಗಿ. ಆಕೆಯು ಅದಕ್ಕೆ ಇನ್ನಷ್ಟು ಕೂಡಿಸಿ **ಮುಟ್ಟಲೂ ಬಾರದು**, ಇಲ್ಲವಾದರೆ ಅದರ ಫಲಿತವು ಮರಣವೇ ಆಗಿರುತ್ತದೆಂದು ಹೇಳಿದ್ದಾನೆಂಬುದಾಗಿ ಹೇಳಿದಳು.[6] ದೇವರು ಅಂಥ ಮರವೊಂದನ್ನು ತೋಟದಲ್ಲಿಟ್ಟರೂ ಅದನ್ನು ಸವಿಯದಂತೆ ನಿಷೇಧಿಸುವದರಲ್ಲಿ ಕಠೋರತೆ ಹಾಗೂ ನಿರಂಕುಶವಾದಿಯಂತೆ ಇದ್ದಾನೆಂಬುದಾಗಿ ಅವಳ ಯೋಚನೆಯಾಗಿತ್ತೇನೋ ಎಂಬ ಸೂಚ್ಯಾರ್ಥವು ಬರುವಂತೆ ಅವಳ ಹೇಳಿಕೆಯು ಇರುವಂತೆ ಕಾಣಿಸುತ್ತದೆ.

**ವಚನಗಳು 4, 5.** ಈ ಹಂತದಲ್ಲಿ, ದೇವರು ಸುಳ್ಳು ಹೇಳಿದ್ದೇನೆಂಬುದಾಗಿ ಆತನ ಗುಣಸ್ವಭಾವವನ್ನು ಖಂಡನಾರ್ಹಗೊಳಿಸುವದಕ್ಕೆ **ಸರ್ಪವು** ಒಂದು ಅವಕಾಶವನ್ನು ಕಂಡಿತು. ಅದು ಹವ್ವಳಿಗೆ ಹೀಗೆ ಹೇಳಿತು, **ನೀವು ಹೇಗೂ ಸಾಯುವದಿಲ್ಲ; ನೀವು ಇದರ ಹಣ್ಣನ್ನು ತಿಂದಾಗಲೇ ನಿಮ್ಮ ಕಣ್ಣುಗಳು ತೆರೆಯುವವು; ನೀವು ದೇವರಂತೆ ಆಗಿ ಒಳ್ಳೇದರ ಕೆಟ್ಟದ್ದರ ಭೇದವನ್ನು ಅರಿತವರಾಗುವಿರಿ; ಇದು ದೇವರಿಗೆ ಚೆನ್ನಾಗಿ ಗೊತ್ತುಂಟು.** ಸರಳವಾಗಿ ಹೇಳುವದಾದರೆ, ದೇವರು ಒಳ್ಳೇವನಾಗಲಿ ಅಥವಾ ಕೃಪಾಭರಿತನಾಗಲಿ ಆಗಿರುವದಿಲ್ಲ, ಆತನಿಗೆ ಆದಾಮ ಮತ್ತು ಹವ್ವಳ ಹಿತಗಳು ಮುಖ್ಯವಾಗಿರುವದಿಲ್ಲ ಎಂಬುದಾಗಿ ಅದು ಘೋಷಿಸಿತು. ಸರ್ಪವು ದೇವರನ್ನು ಸ್ವಾರ್ಥಿ, ಹೊಟ್ಟೆಕಿಚ್ಚು ಉಳ್ಳವನು, ಮೋಸಗಾರನು ಎಂಬುದಾಗಿ ಚಿತ್ರಿಸಿತು. ಈ ವಿಧದಲ್ಲಿ ನಿಷೇಧಿಸುವದಕ್ಕೆ ನಿಜವಾದ ಉದ್ದೇಶವು ತಾನು ಉಂಟು ಮಾಡಿದ್ದ ಜನರನ್ನು ಸಂಪೂರ್ಣತೆಯಿಂದ ಇರದಂತೆ ತಡೆಯುವದು, "ಒಳ್ಳೇದರ ಕೆಟ್ಟದ್ದರ ಭೇದವನ್ನು ಅರಿತುಕೊಳ್ಳದೆ" ಇರುವಂತೆ ಮತ್ತು "ದೇವರಂತೆ" ಆಗದ ಹಾಗೆ ತಡೆಯುವದೇ ಆಗಿರುತ್ತದೆಂದು ಹೇಳಿತು. ದೇವರು ಆಕೆಯನ್ನು ಆಕೆಯ ನ್ಯಾಯಯುತವಾದ ವಿಧಿಯಿಂದ ದೂರವಿಡಬೇಕೆಂದು ಬಯಸಿರುತ್ತಾನೆಂಬ ಯೋಚನೆಯನ್ನು ಸರ್ಪವು ಸ್ತ್ರೀಯ ಮನಸ್ಸಿನಲ್ಲಿ ಬಿತ್ತಿದನು: ಆ ವಿಧಿಯು ಏನೆಂದರೆ ದೇವರಂತೆ ಆಗುವದು, ನಿರ್ಲಯತ್ವ (ಮರಣವಿಲ್ಲದಿರುವಿಕೆ), ಮತ್ತು ಜ್ಞಾನವುಳ್ಳವಳಾಗಿರುವದು (ಒಳ್ಳೇದರ ಮತ್ತು ಕೆಟ್ಟದ್ದರ).

ಆದಾಮ ಮತ್ತು ಹವ್ವಳರು ಭೂಮಿಯ ಮೇಲೆ ಅವರ ಹಿತಾಸಕ್ತಿಗೋಸ್ಕರ ಎಲ್ಲವೂ ಒದಗಿಸಲ್ಪಟ್ಟಿದ್ದಂಥ ಒಂದು ವಿಧವಾದ ಪರದೈಸಿನಲ್ಲಿದ್ದರು ಎಂಬುದನ್ನು ನಾವು ನೆನಪಿಟ್ಟುಕೊಳ್ಳತಕ್ಕದ್ದು. ತಾನು ಮಾಡಿದ ಸೃಷ್ಟಿಯು "ಒಳ್ಳೇದು" ಮಾತ್ರವೇ ಅಲ್ಲ, ಆದರೆ ಅದು "ಬಹು ಒಳ್ಳೇದು" ಎಂದು ಘೋಷಿಸಿದ್ದನು. ಹೇಗೂ, ದೇವರು ಅವರಿಂದ ಇನ್ನೂ ಹೆಚ್ಚಿನ ಒಳ್ಳೇದನ್ನು ಅವರಿಗೆ ಕೊಡದೆ ಹಿಡಿದಿಟ್ಟುಕೊಂಡಿದ್ದಾನೆಂಬ ಯೋಚನೆಗೆ ಒಳಗಾದರು. ದೇವರಂತೆ ಅಮರತ್ವವನ್ನು ಮತ್ತು ಜ್ಞಾನವನ್ನು ಸಂಪಾದಿಸಿಕೊಳ್ಳುವದಕ್ಕೋಸ್ಕರ ತಮ್ಮ ಸೃಷ್ಟಿಕರ್ತನಿಗೆ ಅವಿಧೆಯರಾಗುವದು ಸಣ್ಣ ಸಂಗತಿಯಾಗಿದೆ ಎಂಬುದಾಗಿ ಅವರು ಯೋಚಿಸಿರಬಹುದು. ಒಂದು ಆಳವಾದ ಮಟ್ಟದಲ್ಲಿ, ದೇವರಂತೆ ಆಗುವದರ ಯೋಚನೆಯು ಅವರ ಹೃದಯದಲ್ಲಿದ್ದ ಗರ್ವವನ್ನು ಸ್ಪರ್ಶಿಸಿದ್ದರಿಂದ ಆ ಯೋಚನೆಯಡೆಗೆ ಸೆಳೆಯಲ್ಪಡದೆ ಇರುವದಕ್ಕಾಗಲಿಲ್ಲ.

**ವಚನ 6.** ದೇವರು ಒಳ್ಳೇದರ ಕೆಟ್ಟದ್ದರ ಅರುಹನ್ನು ಹುಟ್ಟಿಸುವ ಮರದ ಹಣ್ಣನ್ನು ತಿನ್ನಬಾರದೆಂದು ನಿಷೇಧಿಸಿದನಾದರೂ, **ಸ್ತ್ರೀಯು** ಎದುರಿಗಿದ್ದ ದೃಶ್ಯಾತ್ಮಕ ಪುರಾವೆಯು ಮನಸೆಳೆಯುವದರಲ್ಲಿ ಶಕ್ತಿಶಾಲಿಯಾಗಿತ್ತು. ಮೊದಲನೆಯದಾಗಿ, ಆಕೆಯು **ಆ ಮರದ ಹಣ್ಣು ತಿನ್ನುವದಕ್ಕೆ ಉತ್ತಮವಾಗಿ** ಇರುತ್ತದೆಂದು ಕಂಡಳು ಮತ್ತು ಆಕೆಯು ಏನಾದರೂ ಹೊಸತನ್ನು ಹಾಗೂ ಸ್ವಾದಿಷ್ಟವಾದದ್ದನ್ನು ರುಚಿ ನೋಡಬೇಕೆಂದು ಹಾತೋರೆಯುತ್ತಿದ್ದದರಿಂದ ಅದು ಆಕೆಯಲ್ಲಿ ಶಾರೀರಿಕ ಹಂಬಲಿಕೆಗಳನ್ನು ಬಡಿದೆಬ್ಬಿಸಿತ್ತು. 1ನೇ ಅಧ್ಯಾಯದಲ್ಲಿ ವಿವರಿಸಿರುವ ಹಾಗೆ, "ಒಳ್ಳೇದು" (טוֹב, *ಟೊಬ*) ಎಂಬ ಪದವು ಎಲ್ಲಾ ಸೃಷ್ಟಿಗೆ ಅನ್ವಯಿಸಲ್ಪಟ್ಟಿತು (1:4, 10, 12, 18, 25, 31); ಸೃಷ್ಟಿಸಲ್ಪಟ್ಟ ಪ್ರತಿಯೊಂದು ಸಂಗತಿಯು ದೇವರು ಅದನ್ನು ಯಾವ ಉದ್ದೇಶಕ್ಕೋಸ್ಕರ ಉಂಟು ಮಾಡಿದ್ದನೋ ಅದಾಗಿರುವಂತೆ ಮತ್ತು ಮಾಡುವಂತೆ ಸೂಕ್ತವಾಗಿತ್ತು. *ಟೊಬ* ಎಂಬುದರ ಅರ್ಥವು ಸುಂದರವಾದ ಒಂದು ಸಂಗತಿ ಎಂದಾಗಿರಬಹುದು, ಅಥವಾ ಅದೊಂದು ನೈತಿಕ ಸೂಚ್ಯಾರ್ಥವನ್ನು ಹೊಂದಿರತಕ್ಕದ್ದು; ಆದರೆ ದೇವರು ನಿಷೇಧ ಮಾಡಿದ್ದಾಗ್ಯೂ ಒಂದು ಸಂಗತಿಯನ್ನು ಆ ಸ್ತ್ರೀಯು ಉತ್ತಮವಾಗಿದೆ ಎಂದು ನಿರ್ಧರಿಸಿಕೊಳ್ಳುವ ಮೂಲಕ ತಾನೇ ದೇವರ ಸ್ಥಾನವನ್ನು ಆಕ್ರಮಿಸಿಕೊಂಡವಳಾದಳು. ಶಾರೀರಿಕವಾಗಿ ಸುಂದರವಾಗಿರವದೆಲ್ಲಾ (*ಟೊಬ*) ನೈತಿಕವಾಗಿ ಉತ್ತಮವಾಗಿ (*ಟೊಬ*) ಇರುವದಿಲ್ಲ, ವಿಶೇಷವಾಗಿ ಅದು ಒಬ್ಬನನ್ನು ಪ್ರಲೋಭಿಸಿ ಅವಿಧೇಯತೆಗೆ ನಡಿಸುವದಾದರೆ ಅದು ಉತ್ತಮವಲ್ಲ. ಇದನ್ನೇ ಹೊಸ ಒಡಂಬಡಿಕೆಯು "ಶರೀರದಾಶೆ" (1 ಯೋಹಾನ 2:16) ಎಂದು ಕರೆಯುತ್ತದೆ, ಅದು ನಿಷೇಧಿಸಲ್ಪಟ್ಟ ವಸ್ತುಗಳ ಅಥವಾ ಜನರ ಕಡೆಗಿನ ಆಕರ್ಷಣೆಯನ್ನು ವಿರೋಧಿಸುವದಕ್ಕೆ ಬಹಳ ಕಷ್ಟಕರವಾಗುವಂತೆ ಮಾಡುವದಾಗಿದೆ.

ಎರಡನೆಯದಾಗಿ, ಆಕೆಯು ಮರದ ಕಡೆಗೆ ಸೆಳೆಯಲ್ಪಟ್ಟಳು ಯಾಕೆಂದರೆ ಅದು ಕಲಾತ್ಮಕವಾದ ರೀತಿಯಲ್ಲಿ ಆಕೆಗೆ **ನೋಡುವದಕ್ಕೆ ರಮ್ಯವಾಗಿಯೂ** ಕಂಡಿತ್ತು. ಅಂತಿಮವಾಗಿ, ಆ ಮರವು **ಜ್ಞಾನೋದಯಕ್ಕೆ ಅಪೇಕ್ಷಿಸತಕ್ಕದ್ದಾಗಿಯೂ** ಇರುತ್ತದೆಂಬುದಾಗಿ ಗ್ರಹಿಸಿಕೊಂಡಳು. ಈ ಹಂತದಲ್ಲಿ "ಮನೋಹರ" (תַאֲוָה, *ಥಾ'ವಾಹ)* "ಅಪೇಕ್ಷಿಸತಕ್ಕದ್ದು" (נֶחְמָד, *ಚಾಮಾದ)* ಎಂಬ ಪದಗಳೆರಡೂ ಸಜಾತೀಯ ಪದಗಳಾಗಿದ್ದು ದಶಾಜ್ಞೆಗಳಲ್ಲಿ "ಆಶಿಸುವಿಕೆ" ಎಂಬುದಾಗಿ ಅನುವಾದಿಸಲ್ಪಟ್ಟಿವೆ ಎಂಬುದು ಮಹತ್ವಪೂರ್ಣವಾಗಿರುತ್ತದೆ. ಅದಕ್ಕೆ ಸಂಬಂಧಿತ ಕ್ರಿಯಾಪದಗಳು ಧರ್ಮೋಪದೇಶಕಾಂಡ 5:21ರಲ್ಲಿನ ಪಟ್ಟಿಯಲ್ಲಿ ಕಾಣಿಸಿಕೊಳ್ಳುತ್ತವೆ, ಆದರೆ ಎರಡನೆಯದು ಮಾತ್ರವೇ ವಿಮೋಚನಕಾಂಡ 20:17ರಲ್ಲಿ ಕಂಡು ಬರುತ್ತದೆ.[7] ಈ ಕಥೆಯು ತೋರಿಕೆಯನ್ನಾಧರಿಸಿ ಮತ್ತು ಯಾವದು ಅಪೇಕ್ಷಿಸತಕ್ಕದ್ದೋ ಅದನ್ನಾಧರಿಸಿ ನಡೆದುಕೊಳ್ಳುವದರು ದೇವರ ಜನರಿಗೆ ಅಪಾಯಕರವಾದದ್ದೆಂಬುದನ್ನು ದೃಷ್ಟಾಂತಪಡಿಸುತ್ತದೆ, ಮತ್ತು ಅದು 1 ಯೋಹಾನ 2:16ರಲ್ಲಿನ "ಕಣ್ಣಿನಾಶೆ ಬದುಕುಬಾಳಿನ ಡಂಬ"ಕ್ಕೆ ಸಂಬಂಧಿಸಿದ್ದಾಗುವುದು. ಸ್ತ್ರೀಯು ತಾನು ಆಸ್ವಾದಿಸಿ ತಿನ್ನಬಹುದೆಂದು ಭಾವಿಸಿಕೊಂಡ ಸುಂದರವಾದ ಹಣ್ಣನ್ನು ನೋಡಿ ಅನುರಾಗವನ್ನು ಹುಟ್ಟಿಸಿಕೊಂಡಿದ್ದು ಮಾತ್ರವೇ ಅಲ್ಲ, ಆದರೆ ಆಕೆಯು "ಜ್ಞಾನೋದಯ" (שָׂכַל, *ಸಕಾಲ್)* ನ ಹೊಂದಬಹುದೆಂಬುದು ಅತ್ಯಂಥ ಬಲವಾದ ಆಕರ್ಷಣೆಯಾಗಿತ್ತೆಂದು ತೋರುತ್ತದೆ. ಆಕೆಯು ತನ್ನ ಸ್ವಂತ ಜೀವಿತ ಮತ್ತು ವಿಧಿಯನ್ನು ಆಳ್ವಿಕೆ ಮಾಡುವಂತೆ ಆಕೆಯನ್ನು ಸ್ವತಂತ್ರಗೊಳಿಸುವಂತಹ ಬಹಳಷ್ಟು ಜ್ಞಾನವನ್ನು, ತಿಳುವಳಿಕೆ, ಮತ್ತು ವಿವೇಕಗಳನ್ನು ಪಡೆದುಕೊಳ್ಳುವೆನೆಂದು ಊಹಿಸಿಕೊಂಡಳು. ಈ ವಿಧವಾದ ಜ್ಞಾನವು ಆಕೆಯ ಸಾಧನೆಗಳನ್ನು ಮತ್ತು ಸ್ಥಾನವನ್ನು ಕುರಿತು, ಅಂದರೆ "ದೇವರಂತೆ ಆಗುವಿಕೆ" (3:5) ಕುರಿತು ಹೆಮ್ಮೆಪಟ್ಟುಕೊಳ್ಳುವಂತೆ ಶಕ್ತಗೊಳಿಸುವದಾಗಿದೆ ಎಂಬ

ಸೈತಾನನ ಸುಳ್ಳನ್ನು ಆಕೆಯು ನಂಬಿದಳು. ಆಕೆಯು ದೇವರ ಅಪ್ಪಣೆಗಳನ್ನು ತಿರಸ್ಕರಿಸಿ ತನ್ನ ಗರ್ವಭರಿತ ಭಾವಗಳನ್ನು ಅನುಸರಿಸುವವಳಾಗಿ, ಸ್ವಾರ್ಥ-ಸಾಧನೆಯನ್ನೇ ತನ್ನ ಪ್ರಾಥಮಿಕ ಗುರಿಯನ್ನಾಗಿ ಮಾಡಿಕೊಂಡಾಗ, ದುರಂತವು - ಜೀವವಲ್ಲ - ನಿಶ್ಚಿತಗೊಂಡಿತ್ತು.

ಹವ್ವಳು **ಅದನ್ನು ತೆಗೆದುಕೊಂಡು ತಿಂದಳು. ಸಂಗಡ ಇದ್ದ ಗಂಡನಿಗೂ ಕೊಡಲು ಅವನೂ ತಿಂದನು.** ಪುರುಷನು ತಾರ್ಕಿಕಗೊಳಿಸುವಂತಹ ಜಾಣ್ಮೆಯ ನುಡಿಗಳಿಂದ ಶೋಧನೆಗೊಳಗಾದನು ಎಂಬುದಾಗಿ ವಾಕ್ಯವು ತಿಳಿಸುವದಿಲ್ಲ. ಸ್ತ್ರೀಯು ಹಣ್ಣನ್ನು ತಿನ್ನುವದನ್ನು ಆತನು ನೋಡಿದನು ಮತ್ತು ಆಕೆಯು ಸಾಯದೇ ಇರುವದನ್ನು ಕಂಡನು, ಆದ್ದರಿಂದ ಅವನೂ ಅದನ್ನೇ ಮಾಡಿದನು. ಆತನು ದೇವರ ಮಾತನ್ನು ಕೇಳುವ ಬದಲಾಗಿ ತನ್ನ ಹೆಂಡತಿಯ ಮಾತನ್ನು ಆಲಿಸಿದನು, ಮತ್ತು ಆತನು ಆಕೆಯ ಇಚ್ಛೆಯಂತೆ ನಡೆದುಕೊಂಡನು. ಆಕೆಯು ವಂಚಿಸಲ್ಪಟ್ಟು ಪಾಪ ಮಾಡಿದಳು, ಆದರೆ ಆತನ ಪಾಪವು ದೇವರ ಆಜ್ಞೆಗೆ ಇಚ್ಛಾಪೂರ್ವಕವಾಗಿ ಅವಿಧೇಯವಾಗಿದ್ದಾಗಿತ್ತು. ಇಬ್ಬರೂ ತಮ್ಮ ತಪ್ಪುಗಳನ್ನು ಬಹಳ ತಡವಾಗಿ ಗ್ರಹಿಸಿಕೊಂಡರು. ಸ್ವತಂತ್ರರಾಗುವದರ ಬದಲಾಗಿ, ಆದಾಮ ಮತ್ತು ಹವ್ವಳರು ಮರಣದಲ್ಲಿ ಅಂತ್ಯಗೊಳ್ಳುವಂತಹ ಕಷ್ಟ ಹಾಗೂ ಶ್ರಮೆಗಳಿಂದ ಕೂಡಿದ ಜೀವಿತದಲ್ಲಿ ಬಂಧಿಸಲ್ಪಟ್ಟರು.

**ವಚನ 7.** ಪಾಪದ ಫಲಿತಗಳು ತ್ವರಿತವಾಗಿ ಒಂದಾದ ಮೇಲೊಂದರಂತೆ ಸಂಭವಿಸಿದ್ದವು. **ಕೂಡಲೆ ಅವರಿಬ್ಬರ ಕಣ್ಣುಗಳು** [ಅಂದರೆ, ತಿಳುವಳಿಕೆ] **ತೆರೆದವು.** ಇದು ದೈವಿಕ ಜ್ಞಾನ ಅಥವಾ ಅವರು ಪಡೆದುಕೊಂಡ ಜ್ಞಾನೋದಯವಾಗಿರಲಿಲ್ಲ. ಬದಲಾಗಿ, ಈ ಮುಂಚೆ ಅವರು ಯಾವುದನ್ನು ಸರಿಯೆಂದು ಗ್ರಹಿಸಿಕೊಂಡಿದ್ದರೋ, ಅದು ಈಗ ತಪ್ಪು ಎಂಬುದಾಗಿ ಕಂಡಿತ್ತು. **ತಾವು ಬೆತ್ತಲೆಯಾಗಿದ್ದೇವೆಂದು ತಿಳಿದು**ಕೊಂಡಿದ್ದರು. ಅವರು ತಮಗಿದ್ದ ಮುಂಚಿನ ಮುಗ್ಧತೆಯನ್ನು ಬಿಟ್ಟು ಕೊಟ್ಟು ತಾವು ಬೆತ್ತಲೆಯಾಗಿದ್ದೇವೆಂಬ ನಾಚಿಕೆಯುಂಟು ಮಾಡುವ ಜ್ಞಾನವನ್ನು ಪಡೆದುಕೊಂಡರು, ಆದ್ದರಿಂದ ಅವರು ತಮ್ಮ ಬೆತ್ತಲೆತನವನ್ನು **ಅಂಜೂರದ ಎಲೆಗಳನ್ನು ಹೊಲಿದು** ಉಡುಪು ಸಿದ್ಧಪಡಿಸಿಕೊಂಡು ಮುಚ್ಚಿಕೊಳ್ಳಲು ಪ್ರಯತ್ನಿಸಿದರು.

ಅವರು ಯಾರಿಂದ ಬಚ್ಚಿಟ್ಟುಕೊಳ್ಳಲು ಪ್ರಯತ್ನಿಸುತ್ತಿದ್ದರು: ಒಬ್ಬರಿಂದ ಒಬ್ಬರೋ ಅಥವಾ ದೇವರಿಂದಲೋ? ಬಹುಶಃ ಉತ್ತರವು ಎರಡೂ ಎಂದಾಗಿರಬಲ್ಲದು. ಪ್ರಥಮ ಪುರುಷ ಮತ್ತು ಸ್ತ್ರೀಯರು ಪ್ರಾಯದ ವಯಸ್ಸಿಗೆ ಬಂದ ಮಕ್ಕಳಂತೆ ಇದ್ದರು ಮತ್ತು ಏಕಾಏಕಿ ತಮ್ಮ ಬೆತ್ತಲೆತನ ಮತ್ತು ಅವರ ಲೈಂಗಿಕತೆಯಲ್ಲಿನ ವ್ಯತ್ಯಾಸವು ಈ ಮುಂಚೆ ಎಂದೂ ಸಂಭಿಸಿದ್ದಿರದಂಥ ವಿಧದಲ್ಲಿ ಒಂದು ನಾಚಿಕೆ ಪಡುವಂತಹ ವಿಚಾರವೆಂಬುದಾಗಿ ನಂಬಿದರು. ಅದರ ಜೊತೆಗೆ, ದೇವರಿಗೆ ಅವಿಧೇಯರಾದ ಬಳಿಕ ಅವರು ತಮ್ಮ ಬೆತ್ತಲೆತನವನ್ನು ಗ್ರಹಿಸಿಕೊಂಡರೆಂಬುದು ಸೂಚಿಸುವದೇನೆಂದರೆ ದೇವರು ಅವರನ್ನು ಎದುರ್ಗೊಳ್ಳುವ ಮುನ್ನವೇ ಅಪರಾಧಭಾವನೆಯು ಅವರಲ್ಲಿತ್ತು ಎಂಬುದೆ. ಅವರು ಒಂದು ಅಗಲಿಕೆಯನ್ನು ಅನುಭವಿಸಿದರು, ತಮ್ಮ ಸೃಷ್ಟಿಕರ್ತನ ಸಮ್ಮುಖದಲ್ಲಿ ಇನ್ನು ಮೇಲೆ ನಿಸ್ಸಂಕೋಚದಿಂದ ಇರದವರಾದರು.

## ಬಿದ್ದು ಹೋದ ದಂಪತಿಗಳನ್ನು ದೇವರು ಭೇಟಿಯಾದದ್ದು (3:8-13)

**[8]ತರುವಾಯ ಯೆಹೋವದೇವರು ಸಂಜೆಯ ತಂಗಾಳಿಯಲ್ಲಿ ತೋಟದೊಳಗೆ ಸಂಚರಿಸುತ್ತಿರುವಾಗ ಆ ಸ್ತ್ರೀಪುರುಷರು ಆತನ ಸಪ್ಪಳವನ್ನು ಕೇಳಿ ಆತನಿಗೆ ಕಾಣಿಸಬಾರದೆಂದು**

**ತೋಟದ ಮರಗಳ ಹಿಂದೆ ಅಡಗಿಕೊಂಡರು. [9]ಯೆಹೋವದೇವರು ಮನುಷ್ಯನನ್ನು - ನೀನು ಎಲ್ಲಿರುತ್ತಿ ಎಂದು ಕೂಗಿ ಕೇಳಲು ಅವನು - [10]ನೀನು ತೋಟದಲ್ಲಿ ಸಂಚರಿಸುವ ಸಪ್ಪಳವನ್ನು ನಾನು ಕೇಳಿ ಬೆತ್ತಲೆಯಾಗಿದ್ದೇನಲ್ಲಾ ಎಂದು ಹೆದರಿ ಅಡಗಿಕೊಂಡೆನು ಅಂದನು. [11]ಅದಕ್ಕಾತನು - ನೀನು ಬೆತ್ತಲೆಯಾಗಿದ್ದಿ ಎಂದು ನಿನಗೆ ತಿಳಿಸಿದವರಾರು? ತಿನ್ನಬಾರದೆಂದು ನಾನು ನಿನಗೆ ಆಜ್ಞಾಪಿಸಿದ ಮರದ ಹಣ್ಣನ್ನು ತಿಂದಿಯಾ ಎಂದು ಕೇಳಲು [12]ಆ ಮನುಷ್ಯನು - ನನ್ನ ಜೊತೆಯಲ್ಲಿರುವದಕ್ಕೆ ನೀನು ಕೊಟ್ಟ ಸ್ತ್ರೀಯು ಆ ಮರದ ಹಣ್ಣನ್ನು ನನಗೆ ಕೊಟ್ಟಳು; ನಾನು ತಿಂದೆನು ಎಂದು ಹೇಳಿದನು. [13]ಯೆಹೋವದೇವರು ಸ್ತ್ರೀಯನ್ನು - ಇದೇನು ನೀನು ಮಾಡಿದ್ದು ಎಂದು ಕೇಳಲು ಸ್ತ್ರೀಯು - ಸರ್ಪವು ನನ್ನನ್ನು ವಂಚಿಸಿತು, ನಾನು ತಿಂದೆನು ಎಂದು ಉತ್ತರ ಕೊಟ್ಟಳು.**

**ವಚನ 8.** ಬೈಬಲ್ ಲೇಖಕನು ಈ ವಾಕ್ಯಭಾಗದಲ್ಲಿ ಮಾನವಮಾಪನದ ಭಾಷೆಯನ್ನು ಬಳಕೆ ಮಾಡುತ್ತಾನೆ: ಆತನು ದೇವರನ್ನು **ಸಂಜೆಯ ತಂಗಾಳಿಯಲ್ಲಿ** ತನ್ನ ಸ್ವತ್ತಿನೊಳಗೆ ಸಂಚರಿಸುವದಕ್ಕೆ ನಿರ್ಧರಿಸುವ ಒಂದು ಬೃಹತ್ ಮರಗಳ ತೋಟದ ಒಡೆಯನೋ ಎಂಬಂತೆ ಬಣ್ಣಿಸುತ್ತಾನೆ. ಇಬ್ರಿಯ ವಾಕ್ಯದಲ್ಲಿ ಅಕ್ಷರಶಃ "ದಿನದ ಗಾಳಿಯಲ್ಲಿ [רוּחַ, *ರೂವಾಚ್*]" ಎಂದಿರುತ್ತದೆ, ಅದರರ್ಥವು, "ದಿನದ ಗಾಳಿ ಬೀಸುವ ಸಮಯದಲ್ಲಿ" (NJPSV), ಅಥವಾ NRSVಯು ಅದನ್ನು ಅರ್ಥನಿರೂಪಣೆ ಮಾಡುವ ಪ್ರಕಾರ, "ಸಂಜೆಯ ತಣ್ಣನೆಯ ಗಾಳಿಯಲ್ಲಿ" ಎಂದಾಗಿರುತ್ತದೆ.

**ತರುವಾಯ ಯೆಹೋವದೇವರು ಸಂಜೆಯ ತಂಗಾಳಿಯಲ್ಲಿ ತೋಟದೊಳಗೆ ಸಂಚರಿಸುತ್ತಿರುವಾಗ ಆ** ಸ್ತ್ರೀಪುರುಷರು **ಆತನ ಸಪ್ಪಳವನ್ನು ಕೇಳಿ**ದರು. "ಸಪ್ಪಳ" (קוֹל, *ಕ್ವೊಲ*) ಎಂಬುದನ್ನು ಅನುವಾದಿಸಿರುವ ಪದವು "ಸ್ವರ"[8] ಎಂಬ ಅರ್ಥವನ್ನು ಸಹ ಕೊಡಬಲ್ಲದು, ಆದರೆ ಇಲ್ಲಿ ಅದು ಬಹುಶಃ ಸಂಜೆಯ ತಂಗಾಳಿಯಲ್ಲಿ ಎಲೆಗಳು ಅಲ್ಲಾಡುವ ಶಬ್ದವನ್ನು ಸೂಚಿಸುತ್ತಿರಬಹುದಾಗಿದೆ, ಯಾಕೆಂದರೆ ಆ ದಂಪತಿಗಳು ಪಾಪ ಮಾಡಿದ ಬಳಿಕ ದೇವರು ಅವರೊಂದಿಗೆ ಮಾತಾಡಿದ್ದನು ಎಂಬುದರ ಯಾವ ಸೂಚನೆಯನ್ನು ಸಹ ವಾಕ್ಯವು ಕೊಡುವದಿಲ್ಲ.

ವ್ಯಕ್ತಿಗಳು ದೇವರ ಸಂಗಡ ನಡೆದಾಡುವದರ ಕುರಿತಾಗಿ ಬೈಬಲ್ ಮಾತಾಡುವ ವೇಳೆ, ಹನೋಕ, ನೋಹ, ಅಬ್ರಹಾಮ, ಮತ್ತು ಇಸಾಕರಂತಹ ಜನರು ಯೆಹೋವನ ಸಂಗಡ ಅನ್ಯೋನ್ಯತೆಯನ್ನು ಹೊಂದಿದ್ದರು ಮತ್ತು ಆತನ ಚಿತ್ತದೊಂದಿಗೆ ಸಾಮರಸ್ಯದಿಂದ ಜೀವಿಸುತ್ತಿದ್ದರು ಎಂಬುದನ್ನು ಸೂಚಿಸುವಂತಹ ಸಾಂಕೇತಿಕ ಮಾತಾಗಿರುತ್ತದೆ (5:22, 24; 6:9; 17:1; 24:40; 48:15). ಕೃಪಾಭರಿತ ಸೃಷ್ಟಿಕರ್ತನು ತೋಟದಲ್ಲಿ ಪುರುಷ ಮತ್ತು ಸ್ತ್ರೀಯ ಸಂಗಡ "ನಡೆಯಲು" (ಅನ್ಯೋನ್ಯತೆಯನ್ನು ಹೊಂದುವದಕ್ಕಾಗಿ) ಬಂದನು; ಆದರೆ ಅವರ ಅವಿಧೇಯತೆಯ ಕಾರಣದಿಂದಾಗಿ, ಅವರು ಆತನಿಗೆ ಮರೆಯಾಗಿ **ಮರಗಳ** ಹಿಂದೆ **ಅಡಗಿಕೊಂಡರು**.

**ವಚನ 9.** ದೇವರು ಅವರಿಗೆ ಗಂಭೀರವಾದ ಪ್ರಶ್ನೆಗಳನ್ನು ಕೇಳಲಾರಂಭಿಸಿದನು – ಆತನು ಮಾಹಿತಿಯನ್ನು ಕೇಳುತ್ತಿದ್ದನೆಂಬ ಕಾರಣಕ್ಕಾಗಿ ಅಲ್ಲ, ಆದರೆ ತಾವು ಏನು ಮಾಡಿರುತ್ತಾರೆ ಹಾಗೂ ಆತನ ದೃಷ್ಟಿಯಲ್ಲಿ ಅವರ ಆತ್ಮೀಕ ಸ್ಥಿತಿಗತಿ ಏನಾಗಿರುತ್ತದೆ ಎಂಬುದರ ಕುರಿತು ಸ್ವತಃ ತಾವು ಅರಿತುಕೊಳ್ಳುವಂತೆ ಸಹಾಯ ಮಾಡುವದೇ ಆಗಿತ್ತು. **ಯೆಹೋವದೇವರು ಮನುಷ್ಯನನ್ನು - ನೀನು ಎಲ್ಲಿರುತ್ತಿ ಎಂದು ಕೂಗಿ ಕೇಳಿ**ದನು. ಖಂಡಿತವಾಗಿಯೂ, ಇದೊಂದು ಶಬ್ದಾಡಂಬರದ ಪ್ರಶ್ನೆಯಾಗಿತ್ತು, ಯಾಕೆಂದರೆ ಆತನು

ಎಲ್ಲಿದ್ದಾನೆಂಬುದು ಯೆಹೋವನಿಗೆ ನಿಖರವಾಗಿಯೇ ತಿಳಿದಿತ್ತು.[9] ದೇವರು ತೋಟದಲ್ಲಿ ಪುರುಷ ಮತ್ತು ಸ್ತ್ರೀಯರನ್ನು ಅವರ ತಪ್ಪಿನ ವಿಷಯದಲ್ಲಿ ಗದರಿಸಿದ್ದು ಏಕೆಂದರೆ, ಒಬ್ಬ ಪ್ರೀತಿಯುಳ್ಳ ತಂದೆಯಾಗಿ ಅವರನ್ನು ಹೊರಗೆ ಬರುವಂತೆ ಮಾಡಿ ತಮ್ಮ ಪಾಪಗಳನ್ನು ಅರಿಕೆ ಮಾಡುವ ಹಾಗೆ ಮಾಡುವದೇ ಆಗಿತ್ತು ಯಾಕೆಂದರೆ ಸಂಧಾನವು ಸಾಧ್ಯವಿದ್ದ ಏಕೈಕ ಮಾರ್ಗವು ಇದೊಂದೇ ಆಗಿತ್ತೆಂಬುದು ಆತನಿಗೆ ತಿಳಿದಿತ್ತು.

**ವಚನ 10.** ಪುರುಷನು ದೇವರಿಗೆ ಕೊಟ್ಟ ಉತ್ತರವು ನಿಜಕ್ಕೂ ಪ್ರಶ್ನೆಗೆ ಹಾರಿಕೆಯ ಉತ್ತರವನ್ನು ಕೊಡುವಿಕೆಯೇ ಆಗಿತ್ತು. ಆತನು ದೇವರು **ತೋಟದಲ್ಲಿ ಸಂಚರಿಸುವ ಸಪ್ಪಳವನ್ನು ನಾನು ಕೇಳಿ**ದ್ದನೆಂದು ಹೇಳುತ್ತಾನೆ. ಆತನು **ಬೆತ್ತಲೆಯಾಗಿದ್ದ** ಕಾರಣ ಇದು ಆತನಲ್ಲಿ **ಹೆದರಿ**ಕೊಳ್ಳುವಂತೆ ಮಾಡಿತ್ತು, ಆದ್ದರಿಂದ ಅವನು **ಅಡಗಿಕೊಂಡನು**. ಪುರುಷನು ಸುಳ್ಳಾಡುವ ಧೈರ್ಯವನ್ನು ಮಾಡಲಿಲ್ಲ, ಆದ್ದರಿಂದ ಆತನು ತನ್ನ ಪಾಪವನ್ನು ಅರಿಕೆ ಮಾಡದಿರುವದಕ್ಕಾಗಿ ಅರ್ಧ-ಸತ್ಯವನ್ನು ಹೇಳಿದನು. ವಾಸ್ತವಿಕದಲ್ಲಿ, ಆತನು ಸಂಭಾಷಣೆಯನ್ನು ಬೇರೊಂದು ವಿಷಯದ ಕಡೆಗೆ ತಿರುಗಿಸುವದಕ್ಕೆ ಪ್ರಯತ್ನಿಸಿದನು. ಪುರುಷನು ತನ್ನ ಪಾಪಕ್ಕೆ ಮುಂಚೆ, ದೇವರ ಸ್ವರವನ್ನು ಕೇಳುತ್ತಿದ್ದಾಗ ಭಯಗೊಳ್ಳುತ್ತಿರಲಿಲ್ಲ, ತನ್ನ ಬೆತ್ತಲೆತನದ ವಿಷಯದಲ್ಲಿ ನಾಚಿಕೆಯನ್ನೂ ಪಟ್ಟುಕೊಂಡಿರಲಿಲ್ಲ. ಪಾಪವು ತೋಟದೊಳಗೆ ಪ್ರವೇಶಿಸಿದ ಬಳಿಕ, ದುರಂತರಕರವಾದ ಪರಿಣಾಮಗಳೊಂದಿಗೆ ಸಕಲವೂ ಬದಲಾವಣೆಗೊಂಡಿತು.

**ವಚನ 11.** ಯೆಹೋವನು ಮನುಷ್ಯನು ನೀಡಿದ ಅರ್ಧ-ಸತ್ಯವನ್ನಾಗಲಿ ಅಥವಾ ನೆಪವನ್ನಾಗಲಿ ಸ್ವೀಕರಿಸಿಕೊಳ್ಳಲು ಸಿದ್ಧನಿರಲಿಲ್ಲ. ದೇವರು ಆತನಿಗೆ ಇನ್ನೂ ಎರಡು ಶಬ್ದಾಡಂಬರದ ಪ್ರಶ್ನೆಗಳನ್ನು ಮುಂದಿಡುತ್ತಾನೆ: **ನೀನು ಬೆತ್ತಲೆಯಾಗಿದ್ದಿ ಎಂದು ನಿನಗೆ ತಿಳಿಸಿದವರಾರು? ತಿನ್ನಬಾರದೆಂದು ನಾನು ನಿನಗೆ ಆಜ್ಞಾಪಿಸಿದ ಮರದ ಹಣ್ಣನ್ನು ತಿಂದಿಯಾ.** ಈ ಹೆಚ್ಚುವರಿ ಪ್ರಶ್ನೆಗಳು ವಾಸ್ತವಾಂಶಗಳ ಕೊರತೆಯಿರುವಂತಹ ವಕೀಲನೊಬ್ಬನು ತನ್ನನ್ನು ಅಪರಾಧಿಯಲ್ಲವೆಂದು ಸಾಭಿತುಪಡಿಸಿಕೊಳ್ಳುವಂತೆ ಪ್ರತಿವಾದಿಯನ್ನು ಕೇಳುವ ಹಲವಾರು ಪ್ರಶ್ನೆಗಳಂತೆ ಆಗಿರುವದಿಲ್ಲ. ಅದಕ್ಕೆ ತದ್ವಿರುದ್ಧವಾಗಿ ಈ ಪ್ರಶ್ನೆಗಳು ಹೇಗಿರುತ್ತವೆಂದರೆ ತನ್ನ ಮಗುವು ಏನು ಮಾಡಿದ್ದಾನೆಂದು ನಿಖರವಾಗಿ ಅರಿತಿರುವಾಗಲೂ, ಮಗುವು ಪ್ರಾಮಾಣಿಕವಾಗಿ ತಪ್ಪೊಪ್ಪಿಕೊಳ್ಳುವಂತೆ ಮಾಡುವದಕ್ಕಾಗಿ ವಿಚಾರಣೆಯನ್ನು ಮಾಡುವ ಒಬ್ಬ ಜಾಣ ತಂದೆ ಅಥವಾ ತಾಯಿಯು ಕೇಳುವಂತಹ ಪ್ರಶ್ನೆಗಳಂತಿರುತ್ತವೆ. ಈ ಎರಡು ಪ್ರಶ್ನೆಗಳು ಒಟ್ಟಾಗಿ, ಮನುಷ್ಯನಿಗಾಗಿರುವ ನಾಚಿಕೆ ಮತ್ತು ಮುಜುಗರಗಳು ಅವನ ಇಚ್ಛಾಪೂರ್ವಕವಾದ ಅವಿಧೇಯತೆಯಿಂದಾಗಿ ಉದ್ಭವವಾಗಿರುತ್ತವೆಂಬುದು ದೇವರಿಗೆ ಗೊತ್ತಿತ್ತು ಎಂಬುದನ್ನು ಪ್ರಕಟಗೊಳಿಸುತ್ತವೆ.

**ವಚನ 12.** ಆ **ಮನುಷ್ಯನು** ಮತ್ತು ಅವನ ಹೆಂಡತಿಯ ನಡುವಿನ ಅಗಲುವಿಕೆಯು ಈಗ ಪರಸ್ಪರರ ಅಥವಾ ದೇವರ ಸಮ್ಮುಖದಲ್ಲಿ ಅವರಿಗುಂಟಾದ ನಾಚಿಕೆಗಿಂತಲೂ ಆಳವಾಗಿತ್ತು, ಯಾಕೆಂದರೆ ಆದಾಮನು ತನ್ನ ಅಪರಾಧಕ್ಕೆ ಹವ್ವಳನ್ನು ಜವಾಬ್ದಾರಳನ್ನಾಗಿ ಮಾಡುವದಕ್ಕೆ ಪ್ರಯತ್ನಿಸಿದನು: **ನನ್ನ ಜೊತೆಯಲ್ಲಿರುವದಕ್ಕೆ ನೀನು ಕೊಟ್ಟ ಸ್ತ್ರೀಯು ಆ ಮರದ ಹಣ್ಣನ್ನು ನನಗೆ ಕೊಟ್ಟಳು; ನಾನು ತಿಂದೆನು.** ಮನುಷ್ಯನು ಅಂತಿಮವಾಗಿ ತನ್ನ ಪಾಪವನ್ನು ಅರಿಕೆ ಮಾಡಿದನು, ಆದರೆ ಅದಕ್ಕೆ ಕಾರಣವು ತನ್ನ ಹೆಂಡತಿಯೇ ಎಂಬುದಾಗಿ ಆಕೆಯ ಕಡೆಗೆ ಬೆರಳು ತೋರಿಸಿದನು. ಒಟ್ಟಾರೆಯಾಗಿ, ಆದಾಮನು ಏನು ಹೇಳುತ್ತಿದ್ದಾನೆಂದರೆ, "ಇದೆಲ್ಲಾ ಆಕೆಯ ತಪ್ಪೇ. [ಅಂತೂ,] ಆಕೆಯು ಏನು ಕೊಟ್ಟಳೋ ಅದನ್ನಷ್ಟೆ ತೆಗೆದುಕೊಂಡೆನಷ್ಟೆ!"[10] ಇದು ಜವಾಬ್ದಾರಿಯನ್ನು ತನ್ನ ಹೆಂಡತಿಯ ಮೇಲೆ ಹಾಕುವದಕ್ಕೆ ಮಾಡಿದ ಈ ಕರುಣಾಜನಕ

ಪ್ರಯತ್ನವು ಮನುಷ್ಯನನ್ನು ದೋಷಮುಕ್ತಗೊಳಿಸಲಿಲ್ಲ. ಹೇಗೂ, ಆತನು ಅಷ್ಟಕ್ಕೇ ನಿಲ್ಲಿಸಲಿಲ್ಲ. ತರುವಾಯ, ಆತನು ದೇವರ ಮೇಲೆ ಸಹ ಅಪರಾಧಿಯೆಂಬ ಆರೋಪವನ್ನು ಮಾಡಿದನು ಯಾಕೆಂದರೆ ಆತನೇ ಈ ಸ್ತ್ರೀಯನ್ನು ಅವನಿಗೆ ಕೊಟ್ಟಿದ್ದನು. ದುರಂತಕರವಾದ ವಿರೋಧಭಾಸವು ಏನೆಂದರೆ ಮನುಷ್ಯನಿಗೆ ಸ್ತ್ರೀಯನ್ನು ಕೊಡುವದರಲ್ಲಿ ದೇವರಿಗಿದ್ದ ಉದ್ದೇಶವು ಆಕೆಯು ಒಬ್ಬ "ಸಹಕಾರಿ" ಆಗಿರಬೇಕೆಂಬುದೇ ಆಗಿತ್ತು. ಬದಲಾಗಿ ತನ್ನ ತದ್ರೂಪಳನ್ನು ಒಬ್ಬ ಸಹಕಾರಿ ಎಂಬಂತೆ ಕಾಣುವದನ್ನು ಬಿಟ್ಟು, ಪುರುಷನು ಆಕೆಯನ್ನು ಒಂದು ವಿಘ್ನವೆಂಬಂತೆ ಕಂಡನು, ಆತನ ಸಮಸ್ಯೆಗಳಿಗೆ ಕಾರಣಳೆಂದು ಹೇಳಿದನು.

**ವಚನ 13. ಯೆಹೋವದೇವರು ಆ ಸ್ತ್ರೀಯನ್ನು** ಒಂದು ಖಡಾಖಂಡಿತವಾದ ಪ್ರಶ್ನೆಯನ್ನು ಕೇಳುವ ಮೂಲಕ ಆಕೆಯೊಂದಿಗೆ ಮಾತಾಡಿದನು: **ಇದೇನು ನೀನು ಮಾಡಿದ್ದು.** ಈ ಪ್ರಶ್ನೆಯ ಪದಗುಚ್ಛವು - "ಇದೇನು ನೀನು ಮಾಡಿದ್ದು ... ?" - ಎಂಬದು 2:23ರಲ್ಲಿ ಪುರುಷನು ಮೊದಲ ಬಾರಿಗೆ ಸ್ತ್ರೀಯನ್ನು ನೋಡಿದಾಗ ತೋರಿದಂತ ಆತನ ಪ್ರತಿಕ್ರಿಯೆಯನ್ನು ನೆನಪಿಸುವದಾಗಿದೆ. ಬಳಿಕ, ಹೆಚ್ಚುಕಡಿಮೆ ಸಂತೋಷದಲ್ಲಿ ಮುಳುಗಿ ತೊದಲುವವನಾಗಿ "ಈಕೆ" ಎಂಬ ಸರ್ವನಾಮವನ್ನು ಮೂರು ಸಾರಿ ಬಳಸಿದ್ದನು.3:13ರಲ್ಲಿ "ಇದೇನು" ಎಂಬುದರಲ್ಲಿ ಏನು ಅಡಕವಾಗಿತ್ತೋ ಅದು ಸ್ತ್ರೀಯ ಸೃಷ್ಟಿಸುವಿಕೆಯಲ್ಲಿ ದೇವರ ಇಂಗಿತವಾಗಿರಲಿಲ್ಲ. ಅದು ಒಬ್ಬ ಸಹಕಾರಿಯಲ್ಲಿರಬೇಕೆಂದು ಪುರುಷನು ಕಲ್ಪಿಸಿಕೊಂಡಿದ್ದಂಥ ಸಂಗತಿಯೂ ಆಗಿರಲಿಲ್ಲ.

ಆಕೆಯ ಗಂಡನ ರೀತಿಯಲ್ಲಿಯೇ, ಸ್ತ್ರೀಯು ಸಹ ತನ್ನ ಕ್ರಿಯೆಗಳಿಗೆ ಹೊಣೆಯನ್ನು ಹೊತ್ತುಕೊಳ್ಳಲು ನಿರಾಕರಿಸುವ ಮೂಲಕವಾಗಿ ತನ್ನನ್ನು ದೋಷಮುಕ್ತಗೊಳಿಸಿಕೊಳ್ಳಲು ಪ್ರಯತ್ನಿಸಿದಳು. ಆಕೆಯು ಹೇಳಿದ್ದೇನೆಂದರೆ, **ಸರ್ಪವು ನನ್ನನ್ನು ವಂಚಿಸಿತು, ನಾನು ತಿಂದೆನು.** ಪುರುಷ ಮತ್ತು ಸ್ತ್ರೀಯರಿಬ್ಬರೂ "ನಾನು ತಿಂದೆನು" ಎಂದು ಹೇಳುವ ಮೂಲಕ ತಮ್ಮ ಅವಿಧೇಯತೆಯನ್ನು ಒಪ್ಪಿಕೊಂಡರು, ಆದರೆ ಅವರಿಬ್ಬರಲ್ಲಿ ಒಬ್ಬರೂ ದೋಷವನ್ನು ಹೊತ್ತುಕೊಳ್ಳಲಿಲ್ಲ. ಆಕೆಯ ಮುಂಚೆ ಗಂಡನು ಮಾಡಿದ ರೀತಿಯಲ್ಲಿಯೇ, ಹವ್ವಳು ಸಹ ಯಾವದೇ ವಿಷಾದವನ್ನಾಗಲಿ ಅಥವಾ ಪಶ್ಚಾತ್ತಾಪವನ್ನಾಗಲಿ ತೋರಿಸಲಿಲ್ಲ, ಆದರೆ ತನ್ನ ಅಪರಾಧಗಳಿಗೆ ನೆಪಗಳನ್ನು ಹೇಳುವದಕ್ಕೆ ಪ್ರಯತ್ನಿಸಿದಳು. ಹವ್ವಳು ಹೊಣೆಗಾರಿಕೆಯನ್ನು ಸರ್ಪನ ಮೇಲೆ ಹಾಕಿದಳು. ಸರ್ಪವು ತನ್ನನ್ನು "ವಂಚಿಸಿತು" ಎಂದು ಆಕೆಯು ಹೇಳಿದಾಗ, ಒಟ್ಟಾರೆಯಾಗಿ ಅವಳ ತಾತ್ಪರ್ಯವು ಏನಾಗಿತ್ತೆಂದರೆ ಸರ್ಪವು "ಒಂದು ಆಕರ್ಷಣೆಯಾದ ಪ್ರಸ್ತಾಪವನ್ನು ಮುಂದಿಟ್ಟಿತು," ಮತ್ತು ಅವಳು ಅದಕ್ಕೆ ಒಳಗಾದಳು.[11]

2ನೇ ಅಧ್ಯಾಯದ ಅಂತ್ಯದಲ್ಲಿದ್ದ ಸಂತೋಷ ಮತ್ತು ಸಂಭ್ರಮಗಳಿಗೆ ತದ್ವಿರುದ್ಧವಾಗಿ, ಸನ್ನಿಹಿತವಾಗಿರುವ ದಂಡನೆಯ ಭಯದಿಂದಾಗಿ ವಾಕ್ಯಭಾಗವನ್ನು ದುಃಖವು ಆವರಿಸಿಕೊಳ್ಳುತ್ತದೆ. ದೇವರು ಮತ್ತು ಮಾನವರ ನಡುವೆ, ಪುರುಷ ಮತ್ತು ಸ್ತ್ರೀಯ ನಡುವೆ, ಮತ್ತು ಮಾನವರು ಹಾಗೂ ಪ್ರಾಣಿಗಳ ನಡುವೆ ಇದ್ದ ಈ ಮುಂಚೆ ಇದ್ದ ಸಮಾಧಾನ ನಾಶಗೊಂಡಿತ್ತು. ಆದದರಿಂದ, ಸೃಷ್ಟಿಕರ್ತನ ಮಾತನ್ನು ಅಸಡ್ಡೆ ಮಾಡಿದ ತಪ್ಪಿಗೋಸ್ಕರ ಬರಲಿದ್ದ ದಂಡನೆಯ ಕುರಿತು ತಿಳಿಯಲು ವಾಚಕನು ಸಿದ್ಧನಾಗಿರುತ್ತಾನೆ.

## ಬೀಳುವಿಕೆಯ ಪರಿಣಾಮಗಳು (3:14-19)

ದೇವರು ನೀಡಿದ ನಿರ್ದಿಷ್ಟವಾದ ದಂಡನೆಗಳು ಪಾಪ ಹಾಗೂ ಪಾಪಿಗಳು (ಅಥವಾ ಪಾಪದ ಮೂಲ) ಹೆಸರಿಸಲ್ಪಟ್ಟಿರುವಂಥ ವಿರುದ್ಧ ಕ್ರಮಾಂಕದಲ್ಲಿ ಬಣ್ಣಿಸಲ್ಪಟ್ಟಿರುತ್ತವೆ. ವಾಕ್ಯಭಾಗವು ಮೊದಲು ಪುರುಷನ ಪಾಪವು ಏನೆಂಬುದನ್ನು ತಿಳಿಸುತ್ತದೆ (3:9–11), ಬಳಿಕ

ಸ್ತ್ರೀಯ ಪಾಪ (3:12), ಮತ್ತು ಅಂತಿಮವಾಗಿ, ಸರ್ಪದ ಪಾಪವು ಏನೆಂಬುದನ್ನು ತಿಳಿಸುತ್ತದೆ (3:13). ನ್ಯಾಯತೀರ್ಪುಗಳು ಮೊದಲು ಸರ್ಪದ ಮೇಲೆ ಘೋಷಿಸಲ್ಪಡುತ್ತವೆ (3:14, 15), ಎರಡನೆಯದಾಗಿ ಸ್ತ್ರೀಯ ಮೇಲೆ (3:16) ಮತ್ತು ಕೊನೆಯದಾಗಿ ಪುರುಷನ ಮೇಲೆ (3:17-19) ಘೋಷಿಸಲ್ಪಡುತ್ತವೆ.

### ಸರ್ಪದ ಮೇಲಿನ ಶಾಪ (3:14, 15)

**[14]ಆಗ ಯೆಹೋವದೇವರು ಸರ್ಪಕ್ಕೆ - ನೀನು ಈ ಕಾರ್ಯವನ್ನು ಮಾಡಿದ್ದರಿಂದ ಎಲ್ಲಾ ಪಶುಗಳಲ್ಲಿಯೂ ಅಡವಿಯ ಎಲ್ಲಾ ಮೃಗಗಳಲ್ಲಿಯೂ ಶಾಪಗ್ರಸ್ತವಾದಿ; ನೀನು ಹೊಟ್ಟೆಯಿಂದ ಹರಿದು ನಿನ್ನ ಜೀವಮಾನದ ದಿನಗಳಲ್ಲೆಲ್ಲಾ ಮಣ್ಣೇ ತಿನ್ನುವಿ. [15]ನಿನಗೂ ಈ ಸ್ತ್ರೀಗೂ, ನಿನ್ನ ಸಂತಾನಕ್ಕೂ ಈ ಸ್ತ್ರೀಯ ಸಂತಾನಕ್ಕೂ ಹಗೆತನವಿರುವ ಹಾಗೆ ಮಾಡುವೆನು. ಈಕೆಯ ಸಂತಾನವು ನಿನ್ನ ತಲೆಯನ್ನು ಜಜ್ಜುವದು, ನೀನು ಅದರ ಹಿಮ್ಮಡಿಯನ್ನು ಕಚ್ಚುವಿ ಎಂದು ಹೇಳಿದನು.**

**ವಚನ 14. ಯೆಹೋವದೇವರು** ಪುರುಷ ಮತ್ತು ಸ್ತ್ರೀಯರ ವಿಷಯದಲ್ಲಿ ಮಾಡಿದ್ದ ರೀತಿಯಲ್ಲಿ, ಅಪರಾಧಭಾವನೆಯನ್ನು ಎಚ್ಚರಗೊಳಿಸುವ ಪ್ರಯತ್ನದಲ್ಲಿ ಸರ್ಪನಿಗೆ ಯಾವದೇ ಪ್ರಶ್ನೆಗಳನ್ನು ಕೇಳಲಿಲ್ಲ. ಇದಕ್ಕೆ ಕಾರಣವು ಈ ಕುತಂತ್ರಿ ಪ್ರಾಣಿಯ ಹಿಂದೆ ಒಂದು ಬಿದ್ದು ಹೋಗಿರುವ ಆತ್ಮವು ಇತ್ತೆಂಬುದೇ ಆಗಿತ್ತು ("ಮಹಾ ಘಟಸರ್ಪನು ಅಂದರೆ ಪಿಶಾಚನೆಂತಲೂ ಸೈತಾನನೆಂತಲೂ ಹೆಸರುಳ್ಳ ಪುರಾತನ ಸರ್ಪ"; ಪ್ರಕಟನೆ 12:9), ಆತನು ರಕ್ಷಣೆ ಹೊಂದುವದಕ್ಕೆ ಸಾಧ್ಯವಿಲ್ಲದವನೆಂಬುದು ಯೆಹೋವನಿಗೆ ತಿಳಿದಿತ್ತು. ಆದದರಿಂದ, ಆತನಲ್ಲಿ ಪಶ್ಚಾತ್ತಾಪವನ್ನು ಹುಟ್ಟಿಸುವದಕ್ಕೆ ಯಾವ ಪ್ರಯತ್ನವೂ ಮಾಡಲ್ಪಡಲಿಲ್ಲ.[12] ಸ್ತ್ರೀಯು ಪಾಪ ಮಾಡಿದದರಲ್ಲಿ ಸರ್ಪವು ತನ್ನ ಪಾತ್ರವನ್ನು ವಿವರಿಸಬೇಕೆಂದು ವಿನಂತಿಸದೆ ಇರುವ ಮೂಲಕ ಸೃಷ್ಟಿಕರ್ತನು ಸರ್ಪಕ್ಕೆ ಘನತೆಯನ್ನು ಸಹ ನಿರಾಕರಿಸಿದನು. ಬದಲಾಗಿ, ದೇವರು ಅದಕ್ಕೆ **ಶಾಪಗ್ರಸ್ತವಾದಿ** ಎಂದು ಹೇಳಿದನು, ಅದಕ್ಕೆ **ಎಲ್ಲಾ ಪಶುಗಳಲ್ಲಿಯೂ** ಬೇರೆ ಯಾವದೇ ಪಶುವಿಗಿಂತಲೂ ಅಧಿಕವಾಗಿ ಕಷ್ಟವು ಬರುವಂತಾಗಲೆಂದು ತೀರ್ಪು ನೀಡಿದನು. ಆತನು ಹೀಗೆ ಹೇಳಿದನು, **ನೀನು ಹೊಟ್ಟೆಯಿಂದ ಹರಿದು ನಿನ್ನ ಜೀವಮಾನದ ದಿನಗಳಲ್ಲೆಲ್ಲಾ ಮಣ್ಣೇ ತಿನ್ನುವಿ.**

ಶಾಪವು ಬರುವದಕ್ಕೆ ಮುನ್ನ, ಸರ್ಪಗಳು ಸರಿಸೃಪಗಳಾಗಿರಲಿಲ್ಲ ಎಂಬುದನ್ನು ಈ ಹೇಳಿಕೆಯು ಸೂಚಿಸುತ್ತದೋ? ವಾಚಕನು ಈ ಚರಿತ್ರೆಯನ್ನು ಸರ್ಪಗಳು ಹೇಗೆ ತಮ್ಮ ಕಾಲುಗಳನ್ನು ಕಳೆದುಕೊಂಡವೆಂದು ವಿವರಿಸುವಂತಹ ಒಂದು ಕಾರ್ಯಕಾರಣ ವಿಜ್ಞಾನದ ಕಟ್ಟುಕಥೆ ಎಂಬಂತೆ ಭಾವಿಸಿಕೊಳ್ಳಬಾರದು. ಇಂತಹ ವಿಧವಾದ ಅರ್ಥನಿರೂಪಣೆಯು ಹಳೆಯ ಒಡಂಬಡಿಕೆಯ ಅಂತ್ಯದ ವೇಳೆಯಲ್ಲಿ ಉದಯವಾದ ಕೆಲವೊಂದು ಯೆಹೂದಿ ವಾಕ್ಯಭಾಗಗಳ ಮೇಲೆ ಆಧಾರವಾಗಿರುತ್ತದೆ, ಉದಾಹರಣೆಗೆ ಫಿಲಿಷ್ಟಿಯದ ತಾರ್ಗುಮ್, ಅದು ಹೀಗೆ ಹೇಳುತ್ತದೆ, "ನಿನ್ನ ಹೊಟ್ಟೆಯ ಮೇಲೆ ನಡೆಯುವಿ, ಮತ್ತು ನಿನ್ನ ಕಾಲುಗಳು ಕಡಿದು ಹಾಕಲ್ಪಡುವವು."[13] ಬೈಬಲ್ ವಾಕ್ಯಭಾಗದ ಅರ್ಥವು ಹೀಗೆ ಇರಬಹುದಾಗಿದೆ, ಏನೆಂದರೆ ತನ್ನ ದೇಹದ ಮುಂದಿನ ಭಾಗವನ್ನು ಎತ್ತಿ ಹಿಡಿದುಕೊಂಡು ಅತಿ ವೇಗವಾಗಿ ತನ್ನನ್ನು ತಳ್ಳಿಕೊಂಡು ಓಡಬಲ್ಲಂಥ ಪೂರ್ವ ಆಫ್ರಿಕಾದ ಬ್ಲ್ಯಾಕ್ ಮಾಂಬಾದಂತಹ ಸರ್ಪಗಳಂತಲ್ಲದೆ, ಈ ನಿರ್ದಿಷ್ಟವಾದ ಸರ್ಪವು ತನ್ನ ಹೊಟ್ಟೆಯ ಮೇಲೆ ತೆವಳಿಕೊಂಡು ಓಡಾಡಬೇಕಾಗಿತ್ತು - ಇದು ಬಹಳಷ್ಟು ಸರ್ಪಗಳಿಗೆ ಇರುವ ಸಾಮಾನ್ಯವಾದ ಸಂಚಾರ ದಾರಿಯಾಗಿರುತ್ತದೆ.

ಹರಿದಾಡುವಿಕೆಯು ಸಾಂಕೇತಿಕವಾಗಿರಬಲ್ಲದಾಗಿದೆ. ಆದಿಕಾಂಡ 9:13ನೇ ವಚನವು ಮುಗಿಲು ಬಿಲ್ಲು ಒಂದು ಹೊಸದಾದ ವಿದ್ಯಾಮಾನವೇನೂ ಆಗಿರಲಿಲ್ಲ, ಆದರೆ "ಒಂದು ಹೊಸ ಮಹತ್ವಪೂರ್ಣತೆಯನ್ನು ವಹಿಸಿಕೊಳ್ಳುವುದು"[14] ಎಂಬುದನ್ನು ಸೂಚಿಸಬಹುದಾಗಿದೆ, ಆದ್ದರಿಂದ ಸರ್ಪವು ಹರಿದಾಡುವದನ್ನು ಒಂದು ಹೊಸ ರೀತಿಯಲ್ಲಿ ಕಾಣಲ್ಪಡುವದಾಗಿತ್ತು. ಈ ಶಾಪವು ನುಡಿಯಲ್ಪಟ್ಟ ಬಳಿಕ, ಹೊಟ್ಟೆಯ ಮೇಲೆ ಹರಿದಾಡಿ ಮಣ್ಣನ್ನು ತಿನ್ನುವದು (ಅಥವಾ ನೆಕ್ಕುವುದು) ಸೋಲು ಮತ್ತು ವೈಯಕ್ತಿಕ ಅವಮಾನಕ್ಕೆ ಬಳಸುವ ಸರ್ವಸಾಧಾರಣವಾದ ರೂಪಕೋಕ್ತಿಯಾಗಿ ಮಾರ್ಪಟ್ಟಿತ್ತು. ಉದಾಹರಣೆಗೆ, ಕೀರ್ತನೆ 72:9 ಹೀಗೆ ಹೇಳುತ್ತದೆ, "ಅರಣ್ಯವಾಸಿಗಳು ಅವನಿಗೆ ಅಡ್ಡ ಬೀಳಲಿ; ಅವನ ವೈರಿಗಳು ಮಣ್ಣುಮುಕ್ಕಲಿ" (ನೋಡಿರಿ ಯೆಶಾಯ 49:23 65:25; ಮೀಕ 7:17). ಖಂಡಿತವಾಗಿಯೂ, ಸರ್ಪಗಳು ಅಕ್ಷರಶಃ ಮಣ್ಣನ್ನು ತಿನ್ನುವದಿಲ್ಲ ಅಥವಾ ಅದರಿಂದಲೇ ಬದುಕುವದಿಲ್ಲ; ಆದರೆ ಇದು ಪಾಪದ ಪರಿಣಾಮಗಳನ್ನು ಜ್ಞಾಪಿಸುವ ಒಂದು ಸಂಕೇತವಾಗಿರುತ್ತದೆ. ಕುಟಿಲವಾದ ಮತ್ತು ವಂಚನೆಯಿಂದ ಕೂಡಿದ ಶೋಧನೆಯನ್ನು ಎದುರ್ಗೊಳ್ಳುವವರು, ಸರ್ಪದ ಸುಳ್ಳುಗಳ ವಿಷಯದಲ್ಲಿ ಸಂಭವಿಸಿದ ರೀತಿಯಲ್ಲಿಯೇ ಪಾಪದ ತರುವಾಯದಲ್ಲಿ ಸಂಭವಿಸುವ ಅವಮಾನವನ್ನು ಜ್ಞಾಪಕದಲ್ಲಿಟ್ಟುಕೊಳ್ಳುವ ಅಗತ್ಯವಿರುತ್ತದೆ.

**ವಚನ 15.** ದೇವರು ಸರ್ಪದ ಮೇಲೆ ಘೋಷಿಸಿದ ಶಾಪವು ಅದಕ್ಕೂ **ಈ ಸ್ತ್ರೀಗೂ,** [ಅದರ] **ಸಂತಾನಕ್ಕೂ ಈ ಸ್ತ್ರೀಯ ಸಂತಾನಕ್ಕೂ ಹಗೆತನ**ವು ಮುಂದುವರೆಯುವದಾಗಿತ್ತು. "ಸಂತಾನ" ಎಂಬುದಾಗಿ ಅನುವಾದಿಸಿರುವ ಇಬ್ರಿಯ ಪದವು זֶרַע *(ಝೆರಾ),* ಇದೊಂದು ಸಮುದಾಯವಾಚಕ ನಾಮಪದವಾಗಿದ್ದು ಸಾಮಾನ್ಯವಾಗಿ "ಪೀಳಿಗೆ" ಅಥವಾ "ಸಂತತಿ"ಯನ್ನು ಸೂಚಿಸುವದಾಗಿದೆ; ಆದರೆ ಕೆಲವು ಸಾರಿ ಅದು "ಇಡೀ ಗುಂಪನ್ನು ಸಂಕ್ಷೇಪಿಸುವ ಒಬ್ಬ ವ್ಯಕ್ತಿಯನ್ನು ಸೂಚಿಸುತ್ತದೆ."[15] ಹಾಗಾದರೆ, ಶಾಪದ ಮೊದಲ ಭಾಗವು ಸ್ತ್ರೀಯ ಸಂತಾನ (ಮಾನವರು) ಮತ್ತು ಸರ್ಪದ ಸಂತಾನದ (ಸರ್ಪಗಳ ಲೋಕ) ನಡುವಿನ ಹಗೆತನವನ್ನು ಸೂಚಿಸಬಹುದಾಗಿದೆ, ಅದು ತಮ್ಮ ಹಿಮ್ಮಡಿಗಳನ್ನು ಸರ್ಪಗಳು ಕಚ್ಚುವದಕ್ಕೆ ಮುನ್ನವೇ ಅವರು ಅವುಗಳ ತಲೆಯನ್ನು ಜಜ್ಜುವಂತೆ ಮಾಡುವದಾಗಿದೆ. ಸರ್ಪದ ತಲೆಗೆ ಏನು ಸಂಭವಿಸುತ್ತದೋ ಅದು ಸ್ತ್ರೀಯ ಸಂತಾನದ ಹಿಮ್ಮಡಿಗೂ ಸಂಭವಿಸುವದು. ವಾಕ್ಯವು ಹೀಗೆ ಹೇಳುತ್ತದೆ, **ಈಕೆಯ ಸಂತಾನವು ನಿನ್ನ ತಲೆಯನ್ನು ಜಜ್ಜುವದು** [שׁוּף, *ಶುಪ್*]**, ನೀನು ಅದರ ಹಿಮ್ಮಡಿಯನ್ನು ಕಚ್ಚುವಿ** *[ಶುಪ್]*. ವಾಕ್ಯಸಾಲಿನ ಆರಂಭ ಮತ್ತು ಮುಕ್ತಾಯಗಳೆರಡರಲ್ಲಿಯೂ ಒಂದೇ ಇಬ್ರಿಯ ಪದವು ಬಳಸಲ್ಪಟ್ಟಿದೆಯಾದ್ದರಿಂದ, NIVಯ ಅನುವಾದಕರು ಮಾಡಿರುವ ವ್ಯಾತ್ಯಾಸದ ಬಗ್ಗೆ ಸಮರ್ಥನೆಯನ್ನು ಕೊಡುವದಕ್ಕೆ ಸಾಧ್ಯವೇ ಇಲ್ಲ: "ಆತನು ನಿನ್ನ ತಲೆಯನ್ನು ಜಜ್ಜುವನು, ನೀನು ಅವನ ಹಿಮ್ಮಡಿಗೆ *ಪೆಟ್ಟು ಕೊಡುವಿ"* (ಒತ್ತಿ ಹೇಳಿದ್ದು ನನ್ನದು). ಹೊಡೆತವನ್ನು ಸ್ವೀಕರಿಸುವ ಪ್ರತಿಯೊಬ್ಬರಿಗೂ ವ್ಯತ್ಯಾಸವಾದದ್ದೊಂದು ಸಂಭವಿಸುವದು ಎಂಬುದಾಗಿ ಇದು ಸೂಚಿಸುತ್ತದೆ: ಅದು ಸರ್ಪದ ಮೇಲೆ ಬಿದ್ದು ಅದರ ತಲೆಯನ್ನು ಜಜ್ಜಿದಾಗ ಮರಣಾಂತಿಕವಾಗಿತ್ತು; ಆದರೆ ಸ್ತ್ರೀಯ ಸಂತಾನಕ್ಕೆ ಅದು ಕೇವಲ ನೋವುಕರ ಮಾತ್ರವೇ ಆಗಿರಲಿತ್ತು, ಯಾಕೆಂದರೆ ಆತನು ಹಿಮ್ಮಡಿಗೆ ಗಾಯ ಮಾಡಿಕೊಳ್ಳುತ್ತಿದ್ದನಷ್ಟೆ.[16]

ಮೂಲತಃ, ಬೈಬಲಿನ ಚರಿತ್ರೆಯು ಸೂಚಿಸುವದೇನೆಂದರೆ ಮಾನವರು ಮತ್ತು ಪ್ರಾಣಿಗಳ ನಡುವೆ ಸಾಮರಸ್ಯತೆಯಿತ್ತು, ಪ್ರಥಮ ಮನುಷ್ಯನು ಆಗ ಪ್ರಾಣಿಗಳ ಮೇಲೆ ದೊರೆತನವನ್ನು ಹೊಂದಿ ಅವುಗಳಿಗೆ ಹೆಸರುಗಳನ್ನಿಟ್ಟಿದ್ದನು (2:19, 20). ಹೇಗೂ, ಮೂಲ ಶೋಧನೆಯಲ್ಲಿ ಪ್ರಾಣಿಗಳ ಪ್ರತಿನಿಧಿಯಾಗಿ ಮತ್ತು ಸ್ತ್ರೀಯನ್ನು ವಂಚಿಸುವಿಕೆಯಲ್ಲಿ ಸೈತಾನನ ಒಂದು

ಸಾಧನವಾಗಿ ಸರ್ಪವು ಪಾತ್ರವನ್ನು ನಿರ್ವಹಿಸಿದ್ದರಿಂದಾಗಿ, ಈ ಸಮಾಧಾನಕರವಾದ ಸಂಬಂಧವು ಮುರಿದು ಹೋಗಿತ್ತು. ಪ್ರಾಣಿ ಜಗತ್ತು ಬಿದ್ದು ಹೋಯಿತು, ಜೊತೆಗೆ ಮಾನವರೂ ಬಿದ್ದು ಹೋದರು. ಅವರ ನಡುವೆ ಒಂದು ಶಾಶ್ವತವಾದ ವೈರತ್ವವು ಇರಲಿತ್ತು (ರೋಮಾ 8:20-22).

ಸ್ತ್ರೀಯ ಸಂತಾನವು ಸರ್ಪದ ತಲೆಯನ್ನು ಜಜ್ಜುವ ಕುರಿತಾದ ಹೇಳಿಕೆಯು ರಕ್ಷಣೆಯ ನಿರೀಕ್ಷೆಯನ್ನು ಅಥವಾ ಮೆಸ್ಸೀಯನ ಕುರಿತಾದ ವಾಗ್ದಾನದ ಒಂದು ಸಂದೇಶವಾಗಿರುತ್ತದೆಂಬುದನ್ನು ಅನೇಕ ಪಂಡಿತರು ನಂಬುವದಿಲ್ಲ.[17] ಹಾಗಿದ್ದರೂ, ಸರ್ಪಗಳು ಹಾಗೂ ಮಾನವರ ನಡುವೆ ಶಾಶ್ವತವಾಗಿರಲಿದ್ದ ಹಗೆತನಕ್ಕಿಂತಲೂ ಆಳವಾದ ಸಂಗತಿಯೊಂದನ್ನು ಹೊಂದಿರುವಂತೆ ಕಾಣಿಸುತ್ತದೆ. ಸರ್ಪವು ಕೇವಲ ಒಂದು ಮಾತನಾಡುವ ಸರ್ಪಕ್ಕಿಂತಲೂ ಹೆಚ್ಚಿನದ್ದಾಗಿತ್ತು (3:16). ಅದು ನಿಶ್ಚಯವಾಗಿಯೂ ಸೈತಾನನನ್ನು ಪ್ರತಿನಿಧಿಸುತ್ತದೆ, ಆತನು ಮನುಷ್ಯನಿಗೆ ಶೋಧನೆಯನ್ನು ಮತ್ತು ಆತನ ಬೀಳುವಿಕೆಯನ್ನುಂಟು ಮಾಡುವದಕ್ಕಾಗಿ ಈ ಜೀವಿಯ ಮೂಲಕವಾಗಿ ಮಾತಾಡಿದವನಾಗಿದ್ದನು. ಆದಿಕಾಂಡದ ಕಥಾನಿರೂಪಣೆಯಲ್ಲಿ ಇದು ಅಸ್ಪಷ್ಟವಾಗಿರುತ್ತದೆ. ಕಾಲವು ಗತಿಸಿದಂತೆ ಸರ್ಪದ ಹಿಂದಿದ್ದ ನಿಜವಾದ ವಿರೋಧಿಯು “ಭೂಲೋಕದವರನ್ನೆಲ್ಲಾ ಮರುಳುಗೊಳಿಸುವ ... ಸೈತಾನ” ಎಂಬುದು ಬಯಲುಗೊಂಡಿತ್ತು (ಪ್ರಕಟನೆ 12:9; ನೋಡಿರಿ ಯೋಹಾನ 8:44).

ಸ್ತ್ರೀಯ ಹೆಸರಿಸಲ್ಪಡದ ಸಂತಾನದ ವಿಷಯದಲ್ಲಿಯೂ ಹೀಗೆಯೇ ಇರುವಂತೆ ಕಾಣಿಸುತ್ತದೆ. ತಕ್ಷಣದ ಸನ್ನಿವೇಶದಲ್ಲಿ, ಸಂತಾನ (ಸಂತತಿ) - ಹವ್ವಳು ವಾಗ್ದಾನವನ್ನು ಅರ್ಥಮಾಡಿಕೊಂಡ ಪ್ರಕಾರವಾಗಿ - ಎಂಬುದು ಹೆಬೇಲನ ಹತ್ಯೆಯ ನಂತರದಲ್ಲಿ, ಆಕೆಯಲ್ಲಿ ಹುಟ್ಟಿದವನೆಂದು ಗುರುತಿಸಲ್ಪಡುವ ಸೇತನೆಂದು ಕಾಣಿಸುತ್ತದೆ. ಆಕೆಯ ಮೂರನೆಯ ಮಗನ ಜನನವಾದಾಗ, ಆಕೆಯು ಹೀಗೆ ಹೇಳಿದಳು, “ಕಾಯಿನನು ಕೊಂದುಹಾಕಿದ ಹೇಬೆಲನಿಗೆ ಬದಲಾಗಿ ದೇವರು ನನಗೆ ಬೇರೆ ಸಂತಾನವನ್ನು [ಝೆರಾ‘, ‘ಸಂತತಿ’] ನೇಮಿಸಿದನು” (4:25). ಸರ್ಪದ ತಲೆಯನ್ನು ಜಜ್ಜುವ ಭಾವನೆಯಲ್ಲಿ ಅಡಕವಾಗಿರುವದೆಲ್ಲವೂ ನಮಗೆ ತಿಳಿದಿರಲಿಲ್ಲವಾದರೂ, ಆಕೆಯ ಸಂತತಿಯವರೊಳಗೆ (ಸಂತಾನ) ಒಬ್ಬನಿಂದ ಹೇಗೋ ದೇವರ ವಾಗ್ದಾನವು ನೆರವೇರುವದೆಂಬುದು ಆಕೆಯ ಯೋಚನೆಯಾಗಿತ್ತು.

ಆದಿಕಾಂಡ 1-11 ಅಧ್ಯಾಯಗಳಲ್ಲಿ ಮಾನವ ಪಾಪ ಹಾಗೂ ಆತನ ಅವಿಧೇಯತೆಯ ಕುರಿತು ಬಣ್ಣನೆಯನ್ನು ಮಾಡಿರುವದರ ಹೊರತಾಗಿಯೂ, ಸಂತಾನದ ಕುರಿತಾದ ದೇವರ ವಾಗ್ದಾನವು ಆದಿಕಾಂಡ ಪುಸ್ತಕದ ಒಟ್ಟಾರೆಯಾದ ಪ್ರಮುಖ ಚರ್ಚೆಯಾಂಶವಾಯಿತು. ಅಲ್ಲದೆ, ಮಾನವನ ಪಾಪ ಹಾಗೂ ಅವಿಧೇಯತೆಯ ಹೊರತಾಗಿಯೂ, ದೇವರು ತನ್ನ ಕೃಪೆಯ ಮೂಲಕವಾಗಿ ವಾಗ್ದಾನ ಮಾಡಿ - ಮೊದಲು ಸ್ತ್ರೀಯ ಮೂಲಕವಾಗಿ ಒಂದು ಸಾರ್ವತ್ರಿಕವಾಗಿ, ಅನಂತರ ಹೆಚ್ಚು ನಿರ್ದಿಷ್ಟವಾದ ರೀತಿಯಲ್ಲಿ ಅಬ್ರಹಾಮ, ಇಸಾಕ, ಯಾಕೋಬ, ಮತ್ತು ಯೆಹೂದ ಇವರುಗಳಿಗೆ - ಅವರಿಗೂ ಅವರ ಸಂತಾನದವರಿಗೂ ಸಮೃದ್ಧವಾದ ಆಶೀರ್ವಾದಗಳನ್ನು ಇಟ್ಟಿದ್ದಾನೆಂಬುದಾಗಿ ಹೇಳಿದನು. ಕಾಲವು ಗತಿಸಿದ ಹಾಗೆ, ಸ್ವತಃ ಯೆಹೂದ್ಯರು ಮೆಸ್ಸೀಯನ ಬರೋಣದಲ್ಲಿ ಆದಿಕಾಂಡ 3:15 ಅಂತಿಮವಾಗಿ ನೆರವೇರಿದ್ದನ್ನು ಕಂಡರು.[18]

ದೇವರು ಸರ್ಪಕ್ಕೆ ನುಡಿದ ಹೇಳಿಕೆಯನ್ನು *ಪ್ರೋಟೊಇವಾಂಜಲಿಯುಮ್* (“ಪ್ರಥಮ ಶುಭವಾರ್ತೆ [ಸುವಾರ್ತೆ]”) ಎಂದು ಅರ್ಥಮಾಡಿಕೊಳ್ಳತಕ್ಕದ್ದೋ? ಉತ್ತರವು “ಹೌದು” ಮತ್ತು “ಅಲ್ಲ” ಎರಡೂ ಆಗಿರುತ್ತದೆ. ಮೂಲ ಸನ್ನಿವೇಶದಲ್ಲಿ, ಸ್ತ್ರೀಯು ಹವ್ವಳಾಗಿದ್ದಾಳೆ, ಹೊರತು

ಮರಿಯಳಲ್ಲ, ಮತ್ತು ಆಕೆಯ "ಸಂತಾನ" ಎಂಬುದು ಆಕೆಯ ಸಂತತಿಯನ್ನು ಸೂಚಿಸುತ್ತದೆ; ಇದು ಯೇಸುವು ಕನ್ಯೆಯಲ್ಲಿ ಜನಿಸುವದರ ಕುರಿತಾದ ವಿಶಿಷ್ಟ ಪ್ರವಾದನೆಯಾಗಿರುವದಿಲ್ಲ.[19] ಹೀಗಿದ್ದರೂ, ಈ ವಾಕ್ಯಭಾಗದ ಸಂಪೂರ್ಣವಾದ ಅರ್ಥದ ವಿಷಯದಲ್ಲಿ, William Sanford LaSor ಹೀಗೆ ಹೇಳಿರುತ್ತಾನೆ,

> ಸೈತಾನಾತ್ಮಕವಾದ ಸರ್ಪವನ್ನು ನಾಶಮಾಡುವ, ಆ ಮೂಲಕ ದೇವರ ವಿಮೋಚನಾತ್ಮಕ ಯೋಜನೆಯಲ್ಲಿ ಒಂದು ಪ್ರಮುಖ ಪಾತ್ರವನ್ನು ವಹಿಸುವಂಥ ಇನ್ನೂ ನಿರ್ದಿಷ್ಟವಾಗಿ ಹೆಸರಿಸದ ವ್ಯಕ್ತಿಯು ಮಾನವ ಜನಾಂಗದೊಳಗೆ ಯಾರೆಂಬದರ ಪೂರ್ಣ ಅರ್ಥವನ್ನು ನಾನು ಕಾಣುವದಿಲ್ಲ. ಆ ಅರ್ಥದಲ್ಲಿ, ವಾಕ್ಯಭಾಗವು ಶುಭವರ್ತಮಾನದ ಮೊದಲ ಬಹಿರಂಗ ಘೋಷಿಸುವಿಕೆಯಾಗಿರುತ್ತದೆ.[20]

ಪ್ರವಾದನೆಯ ನೆರವೇರುವಿಕೆಯು ಯೇಸು ಕ್ರಿಸ್ತನ ಮೂಲಕವಾಗಿ ಅದರ ಪರಾಕಾಷ್ಠೆಯನ್ನು ತಲುಪತಕ್ಕದ್ದು (ನೋಡಿರಿ ಗಲಾತ್ಯ 3:8-29; ಎಫೆಸ 1:3-14). ಪೌಲನು ರೋಮಾಪುರದವರಿಗೆ ಬರೆದ ಪತ್ರಿಕೆಯಲ್ಲಿ ಆದಿಕಾಂಡ 3:15ನೇ ವಚನವನ್ನು ಪ್ರತಿಧ್ವನಿಸುವವನಾಗಿ ಸಹ ಹೀಗೆ ಹೇಳಿದನು, "ಶಾಂತಿದಾಯಕನಾದ ದೇವರು ಶೀಘ್ರವಾಗಿ ಸೈತಾನನನ್ನು ನಿಮ್ಮ ಕಾಲುಗಳ ಕೆಳಗೆ ಹಾಕಿ ತುಳಿಸಿಬಿಡುವನು" (ರೋಮಾ 16:20).

## ಸ್ತ್ರೀಗೆ ಕೊಡಲ್ಪಟ್ಟ ದಂಡನೆಯ ತೀರ್ಪು (3:16)

**16ಆಮೇಲೆ ಸ್ತ್ರೀಗೆ - ನೀನು ಗರ್ಭಿಣಿಯಾಗಿರುವ ಕಾಲದಲ್ಲಿ ಬಹು ಸಂಕಟಪಡಬೇಕೆಂದು ನಾನು ನೇಮಿಸಿದ್ದೇನೆ; ಕಷ್ಟದಿಂದಲೇ ಮಕ್ಕಳನ್ನು ಹೆರುವಿ; ಗಂಡನ ಮೇಲೆ ನಿನಗೆ ಆಶೆಯಿರುವದು; ಅವನು ನಿನಗೆ ಒಡೆಯನಾಗುವನು. ಎಂದು ಹೇಳಿದನು.**

**ವಚನ 16.** ದೇವರು ಸ್ತ್ರೀಗೆ ನೀಡಿದ ನ್ಯಾಯತೀರ್ಪು ಆಕೆಯು ಯಾವ ಪಾತ್ರಕ್ಕಾಗಿ ಸೃಷ್ಟಿಸಲ್ಪಟ್ಟಳೋ ಅದು ಅಡೆತಡೆಗೊಳಗಾಗುವಂತೆ ಮಾಡಿತ್ತು. ಆಕೆಯು ಆದಾಮನ ಹೆಂಡತಿಯಾಗಿರುವಂತೆ, ಆತನಿಗೆ ಸರಿಹೊಂದುವಂಥ ಸಹಕಾರಿಯಾಗಿರುವಂತೆ ಉಂಟು ಮಾಡಲ್ಪಟ್ಟಿದ್ದಳು; ಮತ್ತು ಆಕೆಯು ಆತನ ಮಕ್ಕಳಿಗೆ ತಾಯಿಯಾಗಬೇಕಿತ್ತು (2:18, 23, 24). ಮಕ್ಕಳನ್ನು ಪಡೆಯುವದು ಸೃಷ್ಟಿಕರ್ತನ ನ್ಯಾಯತೀರ್ಪಿನ ಭಾಗವಾಗಿರಲಿಲ್ಲ; ಅದು "ನೀವು ಬಹುಸಂತಾನವುಳ್ಳವರಾಗಿ ಹೆಚ್ಚಿರಿ; ಭೂಮಿಯಲ್ಲಿ ತುಂಬಿಕೊಂಡು ಅದನ್ನು ವಶಮಾಡಿಕೊಳ್ಳಿರಿ" ಎಂಬ ಮೂಲ ಆಶೀರ್ವಾದದ ಭಾಗವಾಗಿತ್ತು (1:28). ಸ್ಪಷ್ಟವಾಗಿರುವಂತೆ, ಪಾಪವು ಪರಿಚಯಿಸಲ್ಪಡುವದಕ್ಕೆ ಮುಂಚೆ, ಸ್ತ್ರೀಯು ಬಹಳ ಸ್ವಲ್ಪವಾದ ನೋವಿನಿಂದ ಅಥವಾ ಯಾವದೇ ನೋವಿಲ್ಲದೆ ಮಕ್ಕಳನ್ನು ಹಡೆಯಲು ಶಕ್ತಳಾಗಿದ್ದಿರಬಹುದು. ಶಾಪದ ನಂತರದಲ್ಲಿ, ಒಬ್ಬ ಸ್ತ್ರೀಯಾಗಿ ಆಕೆಗಿದ್ದ ಅತ್ಯಂಥ ವಿಶಿಷ್ಟ ಪಾತ್ರದಲ್ಲಿ, ಜನ್ಮವನ್ನು ಕೊಡುವ ವೇಳೆ ಯೆಹೋವನು ಆಕೆಯನ್ನು **ಬಹು ಸಂಕಟಪಡುವಂತೆ** ಮಾಡುವವನಾಗಿದ್ದನು. ಇದು ಆಕೆಯ ಪಾಪದಿಂದಾದ ಪರಿಣಾಮವಾಗಿತ್ತು.

ಅದರ ಜೊತೆಗೆ, ದೇವರು ಹೀಗೆ ಹೇಳಿದನು, **ಕಷ್ಟದಿಂದಲೇ ಮಕ್ಕಳನ್ನು ಹೆರುವಿ; ಗಂಡನ ಮೇಲೆ ನಿನಗೆ ಆಶೆಯಿರುವದು; ಅವನು ನಿನಗೆ ಒಡೆಯನಾಗುವನು.** ಈ ಹೇಳಿಕೆ ನಿಖರವಾದ ಅರ್ಥವು ಬಹಳಷ್ಟು ವಾಗ್ವಾದಕ್ಕೊಳಗಾಗಿರುತ್ತದೆ. ಕೆಲವು ಯೋಚಿಸುವದೇನೆಂದರೆ "ಆಶೆ" ಎಂಬುದನ್ನು ಲೈಂಗಿಕ ಅಭಿಲಾಷೆಯಂತಹ ಸ್ವಾಭಾವಿಕ ಅರ್ಥದಲ್ಲಿ ಬಳಸಬಹುದು ಎಂಬದೆ. "ಆತನು ನಿನಗೆ ಒಡೆಯನಾಗಿರುವನು" ಎಂಬ ಹೇಳಿಕೆಯು "ಸೃಷ್ಟಿಯ ವೇಳೆಯಲ್ಲಿ

ಸ್ಥಾಪಿಸಲ್ಪಟ್ಟಿದ್ದ ಆದರೆ ಬೀಳುವಿಕೆಯ ನಂತರ ಹಿಮ್ಮೋಗವಾಗಿದ್ದ ಅಧಿಕಾರದ ಸರಪಣಿಯ (ದೇವರು - ಪುರುಷ - ಸ್ತ್ರೀ) ಪುನರ್ದೃಢೀಕರಣ" ಆಗಿರಬಹುದು, ಆ ವೇಳೆಯೇ ಪುರುಷನು ನಿಷೇಧಿತ ಮರದ ಹಣ್ಣಿನ ರುಚಿ ನೋಡುವ ವಿಷಯದಲ್ಲಿ ಸ್ತ್ರೀಯ ನಾಯಕತ್ವವನ್ನು ಅನುಸರಿಸಿದ್ದನು.[21]

ಈ ಅಭಿಪ್ರಾಯಕ್ಕೆ ಅಷ್ಟೇನೂ ಬೆಂಬಲವಿರುವದಿಲ್ಲ ಯಾಕೆಂದರೆ ಸ್ವಾಭಾವಿಕ ಲೈಂಗಿಕ ಅಭಿಲಾಷೆಯು ಆರಂಭದಲ್ಲಿಯೇ ಮಾನವ ಜನಾಂಗದ ಜನಕರಾದ ಪುರುಷ ಮತ್ತು ಸ್ತ್ರೀಯರೊಳಗೆ ನಿರ್ಮಿಸಲ್ಪಟ್ಟಿದ್ದ ಲಿಂಗತ್ವದ ಆಶೀರ್ವಾದದ ಭಾಗವಾಗಿತ್ತು. ಇದು ಬೀಳುವಿಕೆಯ ನಂತರದಲ್ಲಿ ಪಾಪಕ್ಕಾಗಿ ನೀಡಿದ ದಂಡನೆಯಾಗಿರಲಿಲ್ಲ. ಅಲ್ಲದೆ, ಸ್ತ್ರೀಯ ಮೇಲೆ ಪುರುಷನು ಯಜಮಾನನಾಗಿರಬೇಕೆಂಬುದು ಸೃಷ್ಟಿಯ ಆರಂಭದಲ್ಲಿಯೇ ದಾಂಪತ್ಯದಲ್ಲಿ ದೇವರು ಇಂಗಿತ ಹೊಂದಿದ್ದ ಸೂಕ್ತವಾದ ಸಂಬಂಧವಾಗಿತ್ತು (2:18–25). ಅದು ಹವ್ವಳ ಮೇಲೆ ಆದಾಮನಿಗಿದ್ದ ಆದ್ಯತೆಯ ಮೇಲೆ ಆಧಾರವಾಗಿತ್ತು, ಅದನ್ನು ಆತನು ಪ್ರಾಣಿಗಳಿಗೆ ಹೆಸರನ್ನು ಇಟ್ಟ ರೀತಿಯಲ್ಲಿಯೇ ಆಕೆಗೂ ಹೆಸರನ್ನು ಇಡುವದರ ಮೂಲಕವಾಗಿ ತೋರಿಸಿ ಕೊಟ್ಟಿದ್ದನು (1 ಕೊರಿಂಥ 11:3, 7–12; 1 ತಿಮೊಥೆ 2:12–15ರಲ್ಲಿ ಪೌಲನ ವಾದವನ್ನು ನೋಡಿರಿ).

"ಆಶೆ" ಎಂಬುದು ಸ್ತ್ರೀಯು ತನ್ನ ಗಂಡನ ಕಡೆಗೆ ಹೊಂದಿರುವ ಸ್ವಾಭಾವಿಕವಾದ ಲೈಂಗಿಕ ಅಭಿಲಾಷೆಯನ್ನು ಸೂಚಿಸುವದಾಗಿದ್ದರೆ, ದಾಂಪತ್ಯ ಜೀವಿತದಲ್ಲಿ ಪುರುಷನು "ಒಡೆಯನಾಗಿ" ಇರಬೇಕೆಂಬುದು ಸಹ ಸ್ವಾಭಾವಿಕ ಕ್ರಿಯೆಯಾಗಿರುತ್ತದೆಂದು ದೇವರ ಇಂಗಿತವಾಗಿರುವದು ತಾರ್ಕಿಕವಾಗಿಯೇ ಇರುತ್ತದೆ. ಹೇಗೂ, "ಆಶೆ" ಎಂಬುದು ನಾಮಪದ ರೂಪವು (תְּשׁוּקָה, *ಥೆಶುಕಾಹ)* ಹಳೆಯ ಒಡಂಬಡಿಕೆಯೊಳಗೆ ಕೇವಲ ಮೂರು ಸಾರಿ ಮಾತ್ರವೇ ಕಂಡು ಬರುತ್ತದೆ. ಆದಿಕಾಂಡದಲ್ಲಿರುವ ಮೇಲಿನ ವಾಕ್ಯಭಾಗದ ಜೊತೆಯಲ್ಲಿ, ಅದು ಪರಮಗೀತ 7:10ರಲ್ಲಿ ಕಾಣಿಸಿಕೊಳ್ಳುತ್ತದೆ, ಅಲ್ಲಿ ಅದು ಮದಲಗಿತ್ತಿಯು ತನ್ನ "ನಾನು ನನ್ನ ನಲ್ಲನವಳೇ, ಅವನ ಆಶೆಯು ನನ್ನ ಮೇಲೇ ಇದೆ" ಹೇಳಿಕೆಯಲ್ಲಿ ಮದಲಿಂಗನ ಮೇಲಿರುವ ತನ್ನ ಅಭಿಲಾಷೆಯನ್ನು ಕುರಿತು ಹೇಳುತ್ತಾಳೆ. ಇದು "ಪ್ರೀತಿ ಮತ್ತು ಬಯಕೆಯ" ಸನ್ನಿವೇಶದಲ್ಲಿ ಸ್ವಾಭಾವಿಕ ಅಭಿಲಾಷೆಯಾಗಿದೆ; ಆದರೆ ಆದಿಕಾಂಡ 3:16ರಲ್ಲಿ, ಸ್ತ್ರೀಯು ಅನುಭವಿಸಲಿದ್ದ ಆಶೆಯು "ಪಾಪ ಮತ್ತು ನ್ಯಾಯತೀರ್ಪಿನ" ಸನ್ನಿವೇಶದಲ್ಲಿ ಇತ್ತು.[22]

ಈ ವಾಕ್ಯಗಳನ್ನು ಹೊರತು ಪಡಿಸಿ, "ಆಶೆ" *(ಥೆಶೂಕಾಹ)* ಎಂಬ ಪದವು ಇನ್ನೂ ಒಂದು ಕಡೆಯಲ್ಲಿ ಕಾಣಿಸಿಕೊಳ್ಳುತ್ತದೆ: ಆದಿಕಾಂಡ 4:6, 7. ಅಲ್ಲಿ ಅದು ಕಾಯಿನನು ದೇವರಿಗೆ ಸ್ವೀಕಾರವಾಗುವಂತಹ ಕಾಣಿಕೆಯನ್ನು ಅರ್ಪಿಸುವದಕ್ಕೆ ವಿಫಲನಾಗುವ ವಿಷಯವಾಗಿ ಕಾಣಿಸಿಕೊಳ್ಳುತ್ತದೆ. ಅಷ್ಟುಮಾತ್ರವಲ್ಲದೆ, 3:16ರಲ್ಲಿ ಬಳಸಲ್ಪಟ್ಟಿರುವ "ಒಡೆಯನಾಗಿರುವನು" (מָשַׁל, *ಮಶಾಲ*) ಎಂಬ ಪದವು ಸಹ ಈ ಸನ್ನಿವೇಶದಲ್ಲಿ ಕಾಣಿಸಿಕೊಳ್ಳುತ್ತದೆ; ಮತ್ತು *ಥೆಶುಕಾಹ* ಮತ್ತು *ಮಶಾಲ* ಎಂಬ ಪದಗಳು ಒಟ್ಟಾಗಿ ಕಾಣಿಸಿಕೊಳ್ಳುವುದು ಈ ಎರಡು ಸ್ಥಳಗಳಲ್ಲಿ ಮಾತ್ರವೇ ಆಗಿದೆ. ಎರಡೂ ಸನ್ನಿವೇಶಗಳು ಪಾಪ ಹಾಗೂ ದಂಡನೆಯ ಮೇಲೆ ಮುಖ್ಯ ಗಮನ ಹೊಂದಿರುತ್ತವೆ.

> ಆಗ ಯೆಹೋವನು ಅವನಿಗೆ - ಯಾಕೆ ಕೋಪಿಸಿಕೊಂಡಿ? ನಿನ್ನ ತಲೆ ಯಾಕೆ ಬೊಗ್ಗಿತು? ಒಳ್ಳೇ ಕೆಲಸ ಮಾಡಿದರೆ ನಿನ್ನ ತಲೆ ಎತ್ತಲ್ಪಡುವದಲ್ಲವೇ; ಅಲ್ಲದಿದ್ದರೆ ಪಾಪವು ನಿನ್ನನ್ನು ಹಿಡಿಯಬೇಕೆಂದು *[ಥೆಶುಕಾಹ]* ಬಾಗಿಲಲ್ಲಿ ಹೊಂಚಿಕೊಂಡಿರುವದು; ಆದರೂ ನೀನು ಅದನ್ನು ವಶಮಾಡಿಕೊಳ್ಳಬೇಕು [*ಮಶಾಲ*] ಎಂದು ಹೇಳಿದನು (4:6, 7).

ಪಾಪವು ಕಾಯಿನನ ಮೇಲೆ ಎಗರಿ ಆತನನ್ನು ವಶಪಡಿಸಿಕೊಳ್ಳುವದಕ್ಕೆ ಬಯಕೆ ಹೊಂದಿರುವ ಒಂದು ಕಾಡು ಮೃಗದಂತೆ ಚಿತ್ರಿಸಲ್ಪಟ್ಟಿದೆ. ಆ ಬಯಕೆಯ ಮೇಲೆ "ಒಡೆತನ" ("ವಶಪಡಿಸಿಕೊಳ್ಳಬೇಕು") ಚಲಾಯಿಸಬೇಕು ಮತ್ತು ಅದಕ್ಕೆ ಒಳಗಾಗಬಾರದು ಎಂಬುದಾಗಿ ದೇವರು ಕಾಯಿನನಿಗೆ ಕರೆ ಕೊಡುತ್ತಾನೆ.

ಇಬ್ರಿಯ ಪದವಾದ *ಮಶಾಲ* ಎಂಬುದರ ಅರ್ಥವು "ಒಡೆತನ" ಅಥವಾ "ಅಧಿಕಾರದಲ್ಲಿರು" ಎಂದಾಗಿದೆ, ಮತ್ತು ಅದು ರಾಜರು ತಮ್ಮ ಪ್ರಜೆಗಳ ಮೇಲೆ ಚಲಾಯಿಸುವ ಅಧಿಕಾರವನ್ನು ಸೂಚಿಸುತ್ತದೆ.[23] ಈ ಪದಗಳ ಶಬ್ದಕೋಶಾತ್ಮಕ ಬಳಕೆಯನ್ನು ಮತ್ತು ಎರಡು ಕಥನಗಳ ವಿನ್ಯಾಸದಲ್ಲಿನ ಸಾಮ್ಯತೆಗಳನ್ನು ತೆಗೆದುಕೊಳ್ಳುವದಾದರೆ, 3:16ರ ಅರ್ಥವು 4:6, 7ಕ್ಕೆ ಒಂದು ಸಾದೃಶ್ಯವಾಗಿರುತ್ತದೆಂದು ಕಾಣಿಸುತ್ತದೆ, ಅದು ಪ್ರಾಬಲ್ಯ ಮತ್ತು ಒಡೆತನಕ್ಕಾಗಿ ನಡಿಸುವ ಒಂದು ಹೋರಾಟವನ್ನು ಸೂಚಿಸುತ್ತದೆ. ಪಾಪವು ಕಾಯಿನನ ಮೇಲೆ ದೊರೆತನ ಮಾಡುವದಕ್ಕೆ ಆಶಿಸಿದ ಪ್ರಕಾರವೇ, ಎರಡು ಲಿಂಗಗಳ ನಡುವೆ ಅಧಿಕಾರಕ್ಕಾಗಿ ಒಂದು ಹೋರಾಟ ಇರುವುದು. ಗಂಡ ಮತ್ತು ಹೆಂಡತಿಯ ನಡುವಿನ ಮೂಲ ಸಂಬಂಧವು 3:16ರಲ್ಲಿ ಸ್ತ್ರೀಯ ಮೇಲೆ ಘೋಷಿಸಿದ ನ್ಯಾಯತೀರ್ಪಿನೊಳಗೆ ಉಳಿಸಿಕೊಳ್ಳಲ್ಪಡಲಿಲ್ಲ. ಅದು ಪಾಪ ಮತ್ತು ಬೀಳುವಿಕೆಯಿಂದಾಗಿ ಕೆಟ್ಟು ಹೋಗಿತ್ತು. ಸಂಕ್ಷೇಪವಾಗಿ ಹೇಳುವದಾದರೆ, "ಆತನು ನಿನಗೆ ಒಡೆಯನಾಗಿರುವನು" ಎಂಬ ಹೇಳಿಕೆಯು ಸ್ತ್ರೀಯ ಮೇಲೆ ಪುರುಷನ ಸರ್ವಾಧಿಕಾರದ ಆಳ್ವಿಕೆಯನ್ನು ಹೇರುವದಕ್ಕೆ ಕೊಡಲ್ಪಟ್ಟ ಆಜ್ಞೆಯಾಗಿರುವದಿಲ್ಲ.

## ಮನುಷ್ಯನಿಗೆ ನೀಡಲ್ಪಟ್ಟ ದಂಡನೆಯ ತೀರ್ಪು ಮತ್ತು ಭೂಮಿಯ ಮೇಲೆ ಬಂದ ಶಾಪ (3:17-19)

**[17]ಮತ್ತು ಪುರುಷನಿಗೆ - ತಿನ್ನಬಾರದೆಂದು ನಾನು ನಿನಗೆ ಆಜ್ಞಾಪಿಸಿದ ಮರದ ಫಲವನ್ನು ನೀನು ಹೆಂಡತಿಯ ಮಾತು ಕೇಳಿ ತಿಂದಕಾರಣ ನಿನ್ನ ನಿಮಿತ್ತ ಭೂಮಿಗೆ ಶಾಪ ಬಂತು. ನಿನ್ನ ಜೀವಮಾನವೆಲ್ಲಾ ದುಡಿದು ದುಡಿದು ಭೂಮಿಯ ಹುಟ್ಟುವಳಿಯನ್ನು ತಿನ್ನಬೇಕು. [18]ಆ ಭೂಮಿಯಲ್ಲಿ ಮುಳ್ಳುಗಿಡಗಳೂ ಕಳೆಗಳೂ ಬಹಳವಾಗಿ ಹುಟ್ಟುವವು. ಹೊಲದ ಬೆಳೆಯನ್ನು ಅನುಭವಿಸುವಿ. [19]ನೀನು ತಿರಿಗಿ ಮಣ್ಣಿಗೆ ಸೇರುವತನಕ ಬೆವರಿಡುತ್ತಾ ಬೇಕಾದ ಆಹಾರವನ್ನು ಸಂಪಾದಿಸಬೇಕು. ನೀನು ಮಣ್ಣಿನಿಂದ ತೆಗೆಯಲ್ಪಟ್ಟವನಲ್ಲವೋ; ನೀನು ಮಣ್ಣೇ; ಪುನಃ ಮಣ್ಣಿಗೆ ಸೇರತಕ್ಕವನಾಗಿದ್ದೀ ಎಂದು ಹೇಳಿದನು.**

**ವಚನಗಳು 17-19.** ಸರ್ಪ ಮತ್ತು ಸ್ತ್ರೀಯ ಮೇಲೆ ಘೋಷಿಸಲ್ಪಟ್ಟ ನ್ಯಾಯತೀರ್ಪುಗಳಿಗಿಂತಲೂ ಪುರುಷನ ಮೇಲೆ ಘೋಷಿಸಿದ ನ್ಯಾಯತೀರ್ಪು ಹೆಚ್ಚು ಸಮಗ್ರವಾಗಿರುತ್ತದೆ ಯಾಕೆಂದರೆ ದೇವರ ಅಪ್ಪಣೆಗಳನ್ನು ಅಸಡ್ಡೆಮಾಡಿ ಆತನ **ಹೆಂಡತಿಯ** ಮಾತನ್ನು ಕೇಳುವ ಮೂಲಕವಾಗಿ ಮಾಡಿದ ಪಾಪಕ್ಕಾಗಿ ಆತನ ಮೇಲೆ ಅತ್ಯಂತ ಹೆಚ್ಚಿನ ಹೊಣೆಯಿತ್ತು.

NASB ತರ್ಜುಮೆಯು ಇಬ್ರಿಯ ವಾಕ್ಯವನ್ನು ಪ್ರತಿಫಲಿಸುತ್ತಾ ಹೇಳುವದೇನೆಂದರೆ, ದೇವರು **ಆದಾಮನಿಗೆ** ನುಡಿದನು ಎಂಬದೆ. ಯೆಹೋವನು "ಪುರುಷ"ನಿಗೆ ಜಾತಿವಿಶಿಷ್ಟ ಪದವನ್ನು ಒಂದು ವೈಯಕ್ತಿಕ ಹೆಸರಂತೆ (אָדָם, *ಆದಾಮ*) ಬಳಸಿದ್ದಾಗಿ ದಾಖಲಿಸಲ್ಪಟ್ಟ ಮೊಟ್ಟ ಮೊದಲ ಸಂದರ್ಭವಾಗಿದೆ: "ಆದಾಮ." ಹೇಗೂ, ಇಲ್ಲಿ ಸಿಕ್ಕುವ ಅದೇ ಇಬ್ರಿಯ ವಾಕ್ಯರಚನೆಯು (לְאָדָם, *ಲೇಆದಾಮ*) ಎಂಬುದು 2:20ರಲ್ಲಿ ಕಾಣಿಸಿಕೊಳ್ಳುತ್ತದೆ, ಅದನ್ನು

NASBಯು “ಆದಾಮನಿಗಾಗಿ” ಎಂದು ಅನುವಾದಿಸುತ್ತದೆ. ಆ ವಾಕ್ಯಭಾಗದಲ್ಲಿ ಪದವು ವೈಯಕ್ತಿಕ ಹೆಸರೆಂದು ಅರ್ಥಮಾಡಿಕೊಳ್ಳಬೇಕಾಗಿದ್ದಲ್ಲಿ, 3:17 ಆದಾಮನ ಹೆಸರನ್ನು ಎರಡನೆಯ ಸಾರಿ ಬಳಕೆ ಮಾಡಿದ ವಾಕ್ಯಭಾಗವಾಗುತ್ತದೆ. 3:17ಕ್ಕೆ ಮುಂಚಿನ ಬಹುಪಾಲು ಕಾಣಿಸಿಕೊಳ್ಳುವಿಕೆಗಳಲ್ಲಿ, ಈ ಪದದ ಮುಂಚೆ ಒಂದು ನಿರ್ದಿಷ್ಟ ಗುಣವಾಚಿ (הָאָדָם, *ಹಾಆದಾಮ*) ಇರುತ್ತದೆ ಮತ್ತು ಅದು “ಪುರುಷ” ಎಂದು ಅನುವಾದಿಸಲ್ಪಟ್ಟಿರುತ್ತದೆ.

ದೇವರು ಆದಾಮನಿಗೆ ನೇರವಾಗಿ ಹೊಡೆತ ಕೊಡದಿರುವ ಮೂಲಕ ನ್ಯಾಯತೀರ್ಪಿನ ನಡುವೆಯೂ ಕೃಪೆಯನ್ನು ತೋರಿಸಿದನು. ಆತನ ಶಾಪವು ಸ್ವತಃ ಪುರುಷನ ಮೇಲೆ ಬೀಳಲಿಲ್ಲ, ಆದರೆ ಆದಾಮ ಮತ್ತು ಆತನ ಕುಟುಂಬವು **ತಿನ್ನುವ** ಆಹಾರವನ್ನು ಉತ್ಪಾದಿಸುವಂಥ **ಭೂಮಿಯ** ಮೇಲೆ ಬಿತ್ತು.

ಇದಾದ ಬಳಿಕ, ಭೂಮಿಯು **ಮುಳ್ಳುಗಿಡಗಳೂ ಕಳೆಗಳೂ** ಇವುಗಳನ್ನು ಉಂಟು ಮಾಡುವ ಮೂಲಕ ಬೆಳೆಗಳನ್ನು ಬೆಳೆಸಲು ಪುರುಷನು ಪಡುವ ಪ್ರಯತ್ನಕ್ಕೆ ಪ್ರತಿರೋಧವನ್ನು ಒಡ್ಡುವದಾಗಿತ್ತು. ಇಲ್ಲಿ ವಿರೋಧಭಾಸವು ಸ್ಪಷ್ಟವಾಗಿ ಕಾಣಿಸುತ್ತದೆ: ಮೂಲತಃ, ತೋಟವು ಸಮೃದ್ಧವಾಗಿ ಫಲ ಕೊಡುತ್ತಿದ್ದದರಿಂದ ಪುರುಷನು ಅದನ್ನು ಆರೈಕೆ ಮಾಡುವದರಲ್ಲಿ ಸಂತೋಷವನ್ನು ಕಾಣಬೇಕಾಗಿತ್ತು, ಆದರೆ ಈಗ ಭೂಮಿಯು ಆತನಿಗೆ ವಿರೋಧಿಯಾಗಿತ್ತು. ಅದು ಮುಳ್ಳುಗಿಡಗಳನ್ನು ಮತ್ತು ಕಳೆಗಳನ್ನು ಉತ್ಪಾದಿಸುವದಾಗಿತ್ತು, ಮತ್ತು ಪುರುಷನು ಅವುಗಳ ವಿರುದ್ಧವಾಗಿ ಬಹಳ **ದುಡಿದು ದುಡಿದು** ಮತ್ತು ಬೆವರಿಡುತ್ತಾ ಹೋರಾಟವನ್ನು ಮಾಡಬೇಕಾಗಿತ್ತು. ಕೆಲಸವು ಬೀಳುವಿಕೆಯ ಕಾರಣದಿಂದ ಪುರುಷನ ಮೇಲೆ ಬಂದ ಶಾಪವಲ್ಲ; ಮನುಷ್ಯನು ಶಾರೀರಿಕವಾಗಿ ಮತ್ತು ಮಾನಸಿಕವಾಗಿ ಆರೋಗ್ಯವಾಗಿರಬೇಕಾದರೆ ಒಂದು ವಿಧವಾದ ಫಲದಾಯಕ ಕೆಲಸವು ಅತ್ಯಾವಶ್ಯಕವಾಗಿರುತ್ತದೆ (2:15ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಹೇಗೂ, ಬೆಳೆಗಳನ್ನು ಬೆಳೆಯುವದಕ್ಕಾಗಿ ಬಿಸಿಲಿನಲ್ಲಿ ದೀರ್ಘಕಾಲದ ವರೆಗೂ ಕಷ್ಟಪಟ್ಟು ದುಡಿಯುತ್ತಿದ್ದ ಪ್ರಾಚೀನ ಕೃಷಿ ಸಮಾಜವೊಂದರಲ್ಲಿ, ಈ ಹೆಚ್ಚುವರಿ ಪ್ರಯತ್ನವು ಒಂದು ಕಷ್ಟವೇ ಆಗಿರುತ್ತಿತ್ತು. ಆದಾಮ ಮತ್ತು ಹವ್ವಳಿಗೆ ಎಲ್ಲವೂ ಇತ್ತು ಆದರೆ ಹೆಚ್ಚಿನದನ್ನು ಪಡೆಯಬೇಕೆಂಬ ಪ್ರಯತ್ನದಲ್ಲಿ ಅದೆಲ್ಲವನ್ನೂ ಕಳೆದುಕೊಂಡರು. ಶತಮಾನಗಳಿಂದಲೂ ಅನೇಕರು ಅವರ ಹೆಜ್ಜೆಜಾಡುಗಳನ್ನು ಅನುಸರಿಸುವವರಾಗಿ “ಸ್ವಾರ್ಥ-ಚಿಂತನೆಯ ಕೈಗಳಲ್ಲಿ ಸೋಲನ್ನು ಅನುಭವಿಸಿರುತ್ತಾರೆ.”[24]

ಪುರುಷನಿಗೆ ಬಂದ ನ್ಯಾಯತೀರ್ಪಿನ ಎರಡನೆಯ ಭಾಗವು ಶಾರೀರಿಕ ಮರಣವಾಗಿತ್ತು. ಮನುಷ್ಯನು ಮಣ್ಣಿನಿಂದ ಮಾಡಲ್ಪಟ್ಟಿದ್ದನು ಮತ್ತು ಭೂಮಿಯು ಅವನ ಪೋಷಣೆಗಾಗಿ ಸುಲಭದಿಂದ ಆಹಾರಗಳನ್ನು ಒದಗಿಸುತ್ತಿದ್ದ ಒಂದು ಪರದೈಸಿನಲ್ಲಿಡಲ್ಪಟ್ಟನು. ಹೇಗೂ, ಲೋಕದಲ್ಲಿ ಪಾಪವು ಪ್ರವೇಶಿಸಿದ ನಂತರದಲ್ಲಿ, ಭೂಮಿಯು ಕ್ರಮೇಣದಲ್ಲಿ ಆತನು ಮರಣಿಸುವಾಗ ಪುನಃ ಆತನನ್ನು ಹಿಂದಕ್ಕೆ ಸೇರಿಸಿಕೊಳ್ಳುವಂಥ ಆತನ ವೈರಿಯಾಗಿ ಮಾರ್ಪಟ್ಟಿತ್ತು: **ನೀನು ತಿರಿಗಿ ಮಣ್ಣಿಗೆ ಸೇರುವತನಕ ... ನೀನು ಮಣ್ಣಿನಿಂದ ತೆಗೆಯಲ್ಪಟ್ಟವನಲ್ಲವೋ; ನೀನು ಮಣ್ಣೇ; ಪುನಃ ಮಣ್ಣಿಗೆ ಸೇರತಕ್ಕವನಾಗಿದ್ದೀ.** ಬೀಳುವಿಕೆಯ ಅತ್ಯಂಥ ದೊಡ್ಡ ದುರಂತವು ಏನೆಂದರೆ, ದೇವರ ಸ್ವರೂಪದಲ್ಲಿ ನಿರ್ಮಿಸಲ್ಪಟ್ಟಿದ್ದ ಹಾಗೂ ಭೂಲೋಕದ ಪರದೈಸಿನಲ್ಲಿ ಆತನ ಸೃಷ್ಟಿಕರ್ತನೊಂದಿಗೆ ಶಾಶ್ವತವಾದ ಅನ್ಯೋನ್ಯತೆಯನ್ನು ಇಟ್ಟುಕೊಳ್ಳುವ ಆಶೀರ್ವಾದವನ್ನು ಹೊಂದಿರಬಹುದಾಗಿದ್ದ ಮನುಷ್ಯನು ತನ್ನ ಜನ್ಮಹಕ್ಕನ್ನು ಕಳೆದುಕೊಂಡು ಕೇವಲ ತಾನು ಯಾವ ಭೂಮಿಯಿಂದ ಹುಟ್ಟಿದನೋ ಅಲ್ಲಿಗೆ ಮರಳುವಂತಾದನು.

ದೇವರು ದಂಡನೆಗಳನ್ನು ಮತ್ತು ಶಾಪಗಳನ್ನು ಘೋಷಿಸಿದ ಬಳಿಕ, ಅದರಲ್ಲಿ ಕೊನೆಯದ್ದು ಮನುಷ್ಯನಿಗೆ ಮರಣವುಂಟಾಗುವದೆಂಬುದನ್ನು ಮುಂತಿಳಿಸಿದ ನಂತರ, ಭವಿಷ್ಯದ ಬಗ್ಗೆ ಆದಾಮ ಮತ್ತು ಹವ್ವಳರು ನಿರೀಕ್ಷೆಯನ್ನೇ ಕೈ ಬಿಟ್ಟಿರಬಹುದಾಗಿದೆ. ಖಂಡಿತವಾಗಿಯೂ, ಅವರು ಪಾಪ ಮಾಡಿದಾಗಲೇ ತಾನು 2:17ರಲ್ಲಿ ಮುನ್ನೆಚ್ಚರಿಕೆ ಕೊಟ್ಟಿದ್ದ ಪ್ರಕಾರವಾಗಿ ದೇವರು ಮರಣದಂಡನೆಯನ್ನು ತಕ್ಷಣವೇ ಜಾರಿಗೆ ತಂದಿರಬಹುದಿತ್ತು. ಹೇಗೂ, ಸನ್ನಿಹಿತವಾಗಿದ್ದ ನ್ಯಾಯತೀರ್ಪುಗಳ ನಡುವೆಯೂ, ಸ್ತ್ರೀಯ ಸಂತಾನವು ಸರ್ಪದ ತಲೆಯನ್ನು ಜಜ್ಜುವದು ಎಂಬ ಅಸ್ಪಷ್ಟವಾದ ಪ್ರವಾದನೆಯ ಕಾರಣದಿಂದಾಗಿ (3:15) ಮನುಷ್ಯನಿಗೆ ಆಗಲೂ ನಿರೀಕ್ಷೆಯೊಂದು ಸಿಕ್ಕಿತ್ತು.

## ಒಂದು ಹೊಸ ಹೆಸರು ಮತ್ತು ಒಂದು ಹೊಸ ಹೊದಿಕೆ: ಆದಾಮನ ನಂಬಿಕೆ ಮತ್ತು ದೇವರ ಕೃಪೆ (3:20, 21)

**[20]ಆ ಮನುಷ್ಯನು ತನ್ನ ಹೆಂಡತಿಗೆ ಹವ್ವ ಎಂದು ಹೆಸರಿಟ್ಟನು; ಯಾಕಂದರೆ ಬದುಕುವವರೆಲ್ಲರಿಗೂ ಅವಳೇ ಮೂಲಮಾತೆ. [21]ಯೆಹೋವದೇವರು ಆದಾಮನಿಗೂ ಅವನ ಹೆಂಡತಿಗೂ ಚರ್ಮದ ಅಂಗಿಗಳನ್ನು ಮಾಡಿ ತೊಡಿಸಿದನು.**

**ವಚನ 20. ಹವ್ವ** (חַוָּה, *ಚವ್ವಾಹ)* ಎಂಬ ಹೆಸರು ಉಚ್ಚಾರಣಾನುರೂಪವಾಗಿ חַי (*ಚಾಯ*) ಎಂಬ ಪದಕ್ಕೆ ಸಂಬಂಧ ಹೊಂದಿದ್ದು ಅದರರ್ಥವು "ಜೀವಿಸುವ" ಎಂದಾಗಿದೆ ಮತ್ತು LXXನಲ್ಲಿ Ζωή (*ಝೋಯ*, "ಜೀವ") ಎಂದು ಅನುವಾದಿಸಲ್ಪಟ್ಟಿತ್ತು. ಶಬ್ದಾಡಂಬರವನ್ನು ಬಳಸುವವನಾಗಿ, ಆದಿಕಾಂಡದ ಲೇಖಕನು ಹವ್ವಳಿಗೆ ಆದಾಮನು ಏಕೆ ಈ ಹೆಸರನ್ನು ಕೊಟ್ಟನು ಎಂಬುದನ್ನು ವಿವರಿಸುತ್ತಿದ್ದಾನೆ. ವಿವರಣೆಯು ಒಂದು ವಿಧದಲ್ಲಿ ಒಗಟಿನಂತೆ ಇರುತ್ತದೆ, ಯಾಕೆಂದರೆ ಅದು ಆಕೆಯನ್ನು ಆತನು "ಹವ್ವ" ಎಂದು **ಹೆಸರಿಟ್ಟನು ಯಾಕಂದರೆ ಬದುಕುವವರೆಲ್ಲರಿಗೂ ಅವಳೇ ಮೂಲಮಾತೆ** ಎಂಬುದಾಗಿ ಹೇಳುತ್ತದೆ. ಹವ್ವಳು ಇನ್ನೂ ಯಾವದೇ ಮಕ್ಕಳಿಗೆ ಜನ್ಮವನ್ನು ನೀಡಿರಲಿಲ್ಲವಾದ್ದರಿಂದ, ಆದಾಮನು "ಬದುಕುವವರೆಲ್ಲರಿಗೂ ಅವಳೇ ಮೂಲಮಾತೆ" ಎಂದು ಹೇಳುವದಕ್ಕೆ ಹೇಗೆ ಸಾಧ್ಯವಾಗಿತ್ತು? "ಆಗಿದ್ದಳು" ಎಂಬುದು ಇಬ್ರಿಯ ಸಂಪೂರ್ಣವಾಚಿ ರೂಪದಲ್ಲಿದ್ದು, ಅದು ಸಾಮಾನ್ಯವಾಗಿ ಈಗಾಗಲೇ ಸಂಪೂರ್ಣಗೊಂಡಿರುವ ಕ್ರಿಯೆಯೊಂದನ್ನು ಸೂಚಿಸುತ್ತದೆ. ಒಬ್ಬನು ಅಸಮಾಪ್ತ ಕ್ರಿಯಾರೂಪವೊಂದನ್ನು ಎದುರು ನೋಡಿರಬಹುದಿತ್ತು, ಅದು ಸಮಾಪ್ತಿಯಾಗದೆ ಭವಿಷ್ಯದಲ್ಲಾಗುವ ಕ್ರಿಯೆಯನ್ನು ಸೂಚಿಸುವದಾಗಿರುತ್ತದೆ ಮತ್ತು ಅದು "ಆಕೆಯು ಬದುಕುವವರೆಲ್ಲರಿಗೂ ತಾಯಿಯಾಗಲಿರುವಳು" ಎಂಬುದಾಗಿ ಅನುವಾದಿಸಲ್ಪಡಬಹುದಿತ್ತು. "ಆಗಿದ್ದಳು" ಎಂಬ ಕ್ರಿಯಾಪದವು ಪ್ರವಾದನಾತ್ಮಕ ಸಮಾಪ್ತವಾಚಕ ಪದವಾಗಿರುವದೆಂದು ತೋರುತ್ತದೆ, ಅದು ಭವಿಷ್ಯದಲ್ಲಿ ನಡೆಯುವ ಒಂದು ಘಟನೆಯ ಖಚಿತತೆಯನ್ನು ವ್ಯಕ್ತಪಡಿಸುವ ಸಮಾಪ್ತವಾಚಕವನ್ನು ಬಳಸುತ್ತದೆ. ಘಟನೆಯು ನಡೆಯುವದು ಎಷ್ಟೊಂದು ಖಚಿತವಾಗಿರುತ್ತದೆಂದರೆ ಅದು ಈಗಾಗಲೇ ಸಂಭವಿಸಿದೆ ಎಂಬಂತೆ ಒಬ್ಬನು ಮಾತಾಡಬಹುದು.

ಹವ್ವಳಿಗೆ ಹೆಸರನ್ನಿಡುವುದು ಆದಾಮನ ನಂಬಿಕೆಯನ್ನು ತೋರ್ಪಡಿಸುತ್ತದೆ, ತಮಗೆ ಮರಣದ ಅಪಾಯವಿದ್ದಾಗ್ಯೂ ತಾವು ಮಾತ್ರವೇ ಮೊದಲನೆಯ ಹಾಗೂ ಕೊನೆಯ ಮಾನವರು ಆಗಿರುತ್ತೇವೆ ಎಂಬುದನ್ನು ಆತನು ನಂಬಲಿಲ್ಲ. ಆತನು ಭವಿಷ್ಯವನ್ನು ಎದುರು

ನೋಡಿದನು, ಹವ್ವಳು ವಾಗ್ದಾನ ಮಾಡಲ್ಪಟ್ಟ ಸಂತಾನಕ್ಕೆ ಜನ್ಮ ನೀಡುವಳೆಂದು (3:15) ನಂಬಿದನು, ಆ ಸಂತಾನವು ಸರ್ಪದ ತಲೆಯನ್ನು ಯಾವದೋ ಒಂದು ವಿಧದಲ್ಲಿ ಜಜ್ಜುವದಾಗಿತ್ತು.

**ವಚನ 21.** ದೇವರು **ಆದಾಮ** ಮತ್ತು **ಆತನ ಹೆಂಡತಿ**ಯನ್ನು ತೋಟದಿಂದ ಹೊರಕ್ಕೆ ಕಳುಹಿಸುವದಕ್ಕೆ ಮುನ್ನ ತೋರಿಸಿದ ಆತನ ಅಂತಿಮವಾದ ಕೃಪೆಯ ಕ್ರಿಯೆ ಎಂದರೆ ಅವರಿಗೆ **ಚರ್ಮದ ಅಂಗಿಗಳನ್ನು** ತೊಡಿಸಿದ್ದೇ ಆಗಿರುತ್ತದೆ, ಇದು 3:7ರಲ್ಲಿ ಅವರು ಅಂಜೂರದ ಎಲೆಗಳಿಂದ ತಮ್ಮನ್ನು ಮುಚ್ಚಿಕೊಳ್ಳಲು ಮಾಡಿದ ಕರುಣಾಜನಕ ಪ್ರಯತ್ನಕ್ಕೆ ತದ್ವಿರುದ್ಧವಾಗಿತ್ತು. "ಅಂಗಿ" ಎಂಬುದಕ್ಕಿರುವ ಇಬ್ರಿಯ ಪದವು (כְּתֹנֶת, *ಕುಥೋನೆತ್)* ಒಬ್ಬ ವ್ಯಕ್ತಿಯು ದೇಹಕ್ಕೆ ಧರಿಸಿಕೊಳ್ಳುತ್ತಿದ್ದ ಒಂದು "ಗಿಡ್ಡ ಅಂಗಿ" ಆಗಿತ್ತು, ಅನೇಕ ಸಾರಿ ಅದು ಮಂಡಿಗಳ ಅಥವಾ ಮೊಣಕಾಲುಗಳ ವರೆಗೂ ಇರುತ್ತಿದ್ದ ಉದ್ದವಾದ ಅಥವಾ ಅರ್ಧ ತೋಲುಗಳುಳ್ಳ ಉಡುಪು ಆಗಿರುತ್ತಿತ್ತು (ನೋಡಿರಿ 37:3; ವಿಮೋಚನಕಾಂಡ 28:4).[25] "ಚರ್ಮ" ಎಂಬುದಕ್ಕಿರುವ ಪದವು (עוֹר, *ಒರ)* ಒಂದು ಪ್ರಾಣಿಯ ತೊಗಲನ್ನು ಸೂಚಿಸುತ್ತದೆ (ನೋಡಿರಿ 27:16; ಯಾಜಕಕಾಂಡ 4:11). ಲೇಖಕನು ಇಲ್ಲಿ ಯಜ್ಞದ ಚರ್ಚೆಯಾಂಶವನ್ನು ಪರಿಶೋಧನೆ ನಡಿಸಲಿಲ್ಲವಾದರೂ, ಆದಾಮ ಮತ್ತು ಹವ್ವಳರ ಪಾಪದ ಫಲಿತವಾಗಿ ಒಂದು ಪ್ರಾಣಿಯು ಮರಣಿಸಬೇಕಾಗಿತ್ತು ಎಂಬುದು ಇಲ್ಲಿ ಸ್ಪಷ್ಟವಾಗಿ ಕಾಣಿಸುತ್ತದೆ. ಸ್ಪಷ್ಟವಾಗಿರುವಂತೆ, ಯೆಹೋವನು ಒಂದು ಪ್ರಾಣಿಯನ್ನು ಕೊಂದು ಅದರ ತೊಗಲನ್ನು ಬಳಸಿ ದಂಪತಿಗಳಿಗೆ ಉಡುಪುಗಳನ್ನು ಸಿದ್ಧಗೊಳಿಸಿದನು. ಪುರುಷ ಮತ್ತು ಆತನ ಹೆಂಡತಿಯು ಪ್ರಕೃತಿ ಶಕ್ತಿಗಳ ಮುಂದೆ ಬೆತ್ತಲೆಯಾಗಿರುವಂತೆ ತೋಟದಿಂದ ಅವರನ್ನು ದೇವರು ಹೊರಕ್ಕೆ ಕಳುಹಿಸಲು ಬಯಸಲಿಲ್ಲ, ಆದ್ದರಿಂದ ಆತನು ಅವರಿಗೆ ಸುರಕ್ಷತೆಯನ್ನು ಒದಗಿಸುವ ಉಡುಪನ್ನು ಸಿದ್ಧಗೊಳಿಸಿ ಕೊಟ್ಟನು. ಹಾಗಿದ್ದಾಗ್ಯೂ, ಅವರ ಉಡುಪುಗಳು ಅವರ ಪಾಪವನ್ನು ಮತ್ತು ಅವರ ಮುಗ್ಧತೆಯ ಕಾಲಾವಧಿಯು ಶಾಶ್ವತವಾಗಿ ಹೊರಟು ಹೋಗಿತ್ತೆಂಬ ವಾಸ್ತವಾಂಶವನ್ನು ಜ್ಞಾಪಿಸುವವುಗಳಾಗಿದ್ದವು.

## ತೋಟದಿಂದ ಹೊರಗೆ ಹಾಕಲ್ಪಟ್ಟದ್ದು (3:22-24)

**[22]ಮತ್ತು ಯೆಹೋವದೇವರು - ಈ ಮನುಷ್ಯನು ಒಳ್ಳೇದರ ಕೆಟ್ಟದ್ದರ ಭೇದವನ್ನರಿತು ನಮ್ಮಲ್ಲಿ ಒಬ್ಬನಂತಾದನಲ್ಲಾ. ಇದರಿಂದ ಇವನು ಕೈಚಾಚಿ ಜೀವವೃಕ್ಷದ ಫಲವನ್ನು ಸಹ ತೆಗೆದು ತಿಂದು ಶಾಶ್ವತವಾಗಿ ಬದುಕುವವನಾಗಬಾರದು ಅಂದುಕೊಂಡು [23]ಅವನು ಉತ್ಪತ್ತಿಯಾದ ಭೂಮಿಯನ್ನೇ ವ್ಯವಸಾಯ ಮಾಡುವದಕ್ಕಾಗಿ ಅವನನ್ನು ಏದೆನ್ ತೋಟದಿಂದ ಹೊರಡಿಸಿಬಿಟ್ಟನು. [24]ಅದಲ್ಲದೆ ಜೀವವೃಕ್ಷಕ್ಕೆ ಹೋಗುವ ದಾರಿಯನ್ನು ಕಾಯುವದಕ್ಕೆ ಆತನು ಏದೆನ್ ವನದ ಪೂರ್ವದಿಕ್ಕಿನಲ್ಲಿ ಕೆರೂಬಿಯರನ್ನೂ ಧಗಧಗನೆ ಪ್ರಜ್ವಲಿಸುತ್ತಾ ಸುತ್ತುವ ಕತ್ತಿಯನ್ನೂ ಇರಿಸಿದನು.**

**ವಚನ 22.** ಸರ್ಪವು ಮುಂತಿಳಿಸಿದ್ದ ಸಂಗತಿಯು (3:5) ತಿರುಚಲ್ಪಟ್ಟ ಮತ್ತು ವಿರೂಪಗೊಳಿಸಲ್ಪಟ್ಟ ವಿಧದಲ್ಲಿ ನೆರವೇರಿತ್ತು. ಆದಾಮ ಮತ್ತು ಹವ್ವಳರನ್ನು ತೋಟದಿಂದ ಹೊರಕ್ಕೆ ಹಾಕಿದ್ದಕ್ಕಾಗಿ **ದೇವರು** ಕಾರಣವನ್ನು ನೀಡುತ್ತಾನೆ: **ಈ ಮನುಷ್ಯನು ಒಳ್ಳೇದರ ಕೆಟ್ಟದ್ದರ ಭೇದವನ್ನರಿತು ನಮ್ಮಲ್ಲಿ ಒಬ್ಬನಂತಾದನಲ್ಲಾ.** "ನಮ್ಮಲ್ಲಿ" ಎಂಬ ಬಹುವಚನ ರೂಪವು ಏನೆಂದರೆ ಯೆಹೋವನು ಬಹುಶಃ ಸಭೆಯಲ್ಲಿ ಆತನ ಸುತ್ತಲು ನೆರೆದಿದ್ದ ದೇವದೂತರ

ಸಮೂಹಗಳನ್ನು ಸೇರಿಸಿ ಹೇಳಿರಬಹುದಾಗಿದೆ (1:26ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ವಿಷಯವು ಹೀಗೆಯೇ ಇರಬಹುದೆಂದು ತೋರುತ್ತದೆ ಯಾಕೆಂದರೆ 24ನೇ ವಚನವು ಹೇಳುವದೇನೆಂದರೆ, ಆದಾಮ ಮತ್ತು ಹವ್ವಳರು ತೋಟದಿಂದ ಹೊರಟು ಹೋದಾಗ, ದೇವರು "ಜೀವವೃಕ್ಷಕ್ಕೆ ಹೋಗುವ ದಾರಿಯನ್ನು ಕಾಯುವದಕ್ಕೆ" ಅಲ್ಲಿ "ಕೆರೂಬಿಯರನ್ನು" (ದೇವದೂತರನ್ನು) ಕಾವಲಾಗಿ ನಿಲ್ಲಿಸಿದನು.

ದೇವರು ಮತ್ತು ಆತನ ದೇವದೂತರ ಸಮಾಲೋನಾ ಸಭೆ "ಒಳ್ಳೇದರ ಕೆಟ್ಟದ್ದರ" ಅರುಹು ಹೊಂದಿದ್ದರು - ಅನುಭವಾತ್ಮಕವಾಗಿ ಅಲ್ಲ, ಆದರೆ ಸರಿ ಮತ್ತು ತಪ್ಪನ್ನು ನಿರ್ಧರಿಸುವವನು ದೇವರೇ ಎಂಬುದರ ಅರುಹು ಹೊಂದಿದ್ದರು.[26] ದೇವರ ಸ್ವಭಾವಕ್ಕೆ, ಗುಣಲಕ್ಷಣಕ್ಕೆ, ಅಥವಾ ಚಿತ್ತಕ್ಕೆ ವಿರುದ್ಧವಾಗಿರುವ ಯಾವದೇ ಮನೋಭಾವ, ಯೋಚನೆ, ಅಥವಾ ಕ್ರಿಯೆಯು ಪಾಪಭರಿತವಾಗಿದೆ. ಆದಾಮ ಮತ್ತು ಹವ್ವಳರು ದೇವರಂತೆ "ಜ್ಞಾನಿ" (3:6) ಆಗಬೇಕೆಂದು ತಮ್ಮ ಗರ್ವದಿಂದ ನಿರ್ಧಿರಿಸಿಕೊಂಡಾಗ, ಯೆಹೋವನ ಪ್ರಕಟಗೊಂಡ ಚಿತ್ತಕ್ಕೆ ಅವಿಧೇಯರಾಗುವದರಲ್ಲಿ ಜ್ಞಾನವನ್ನು ಪಡೆದುಕೊಳ್ಳುವ ಮೂಲಕ ತಮ್ಮ ಸ್ವಯಮಾಧಿಪತ್ಯವನ್ನು ಸಮರ್ಥಿಸಿಕೊಂಡವರಾದಾಗ, ಒಟ್ಟಾರೆಯಾಗಿ ಅವರು ತಮ್ಮ ಸ್ವಾತಂತ್ರ್ಯವನ್ನು ಘೋಷಿಸಿಕೊಂಡು ತಮಗೆ ತಾವೇ "ದೇವರು" ಆಗಿರಬೇಕೆಂದು ಬಯಸಿದ್ದರು.

ದೇವರ ಸಿಂಹಾಸನವನ್ನು ಆಕ್ರಮಿಸಿಕೊಳ್ಳಬೇಕೆಂಬ ಅವರ ಬಯಕೆಯ ಜೊತೆಯಲ್ಲಿ, ಅವರು **ಕೈಚಾಚಿ ಜೀವವೃಕ್ಷದ ಫಲವನ್ನು ಸಹ ತೆಗೆದು ತಿಂದು ಶಾಶ್ವತವಾಗಿ** [ಪಾಪದಲ್ಲಿ] **ಬದುಕು**ವದಕ್ಕೆ ಸಾಧ್ಯವಾದಲ್ಲಿ, ಅವರು ತಮ್ಮ ದುರಂಹಕಾರ ಮತ್ತು ಯೆಹೋವನಿಗೆ ವಿರುದ್ಧವಾದ ಅವಿಧೇಯತೆಯನ್ನು ಒಗ್ಗೂಡಿಸಿಕೊಳ್ಳುವವರಾಗುವರು. ಶಾರೀರಿಕ ಜೀವಿತವು ದೇವರ ಕರುಣೆಯಿಂದಾಗಿ ಮಾನವರು ಪಡೆದುಕೊಳ್ಳುವ ಮತ್ತು ಆನಂದಿಸುವ ಒಂದು ಆಶೀರ್ವಾದ ಹಾಗೂ ನಮ್ಮ ಸೃಷ್ಟಿಕರ್ತನು ನೀಡಿದ ಅಂತಿಮ ವರವಾಗಿರುವ ನಿತ್ಯಜೀವವು ಆತನನ್ನು ಪ್ರೀತಿಸಿ ಆತನ ಸೇವೆ ಮಾಡುವವರಿಗಾಗಿ ಸಂರಕ್ಷಿಸಿಡಲ್ಪಟ್ಟಿದೆ ಎಂಬುದನ್ನು ಅವರಿಗೆ ಕಲಿಸುವದು ಅಗತ್ಯವಿತ್ತು. ಮನುಷ್ಯನು ಜ್ಞಾನದಿಂದ ನಿತ್ಯಜೀವವನ್ನು ಎಂದಿಗೂ ಸಾಧಿಸಿಕೊಳ್ಳಲಾರನು ಅಥವಾ ಅದನ್ನು ತನ್ನ ಸ್ವಂತ ಪ್ರಯತ್ನಗಳಿಂದ ಸಂಪಾದಿಸಿಕೊಳ್ಳಲು ಸಾಧ್ಯವಿಲ್ಲ.

**ವಚನ 23.** ಇನ್ನಷ್ಟು ಅವಿಧೇಯತೆಯನ್ನು ತಡೆಗಟ್ಟುವದಕ್ಕೋಸ್ಕರ, ದೇವರು ಅವರನ್ನು **ಏದೆನ್ ತೋಟದಿಂದ ಹೊರಡಿಸಿಬಿಟ್ಟನು**. "ಹೊರಡಿಸಿಬಿಟ್ಟನು" ಎಂಬುದಕ್ಕೆ ಬಳಸಿರುವ ಕ್ರಿಯಾಪದವು שָׁלַח *(ಶಾಲಾಚ)* ಎಂಬ ಪದದಿಂದ ಬಂದಿರುತ್ತದೆ, ಅದು "ಹೊರಕ್ಕೆ ಕಳುಹಿಸಿ ಬಿಡು" "ಗಡೀಪಾರು ಮಾಡು" ಎಂಬ ಅರ್ಥವನ್ನು ಕೊಡುತ್ತದೆ. ಇದು ಅಬ್ರಹಾಮನು ಹಾಗರಳನ್ನು, ಇಸ್ಮಾಯೇಲ, ಮತ್ತು ಆತನ ಉಪಪತ್ನಿಯರ ಇತರ ಪುತ್ರರನ್ನು ಹೊರಕ್ಕೆ ಕಳುಹಿಸಿದನೆಂಬುದಕ್ಕಾಗಿ ಬಳಸಿದ ಪದವಾಗಿರುತ್ತದೆ, ಅವರು ಇಸಾಕನಿಗೆ ವೈರಿಗಳಾಗಿದ್ದಿರಬಹುದಾಗಿದೆ (21:14; 25:6). ಅಲ್ಲದೆ, *ಶಾಲಾಚ* ಎಂಬುದು ಉಚ್ಚಾಟನೆ ಮತ್ತು ಒಂದು ಸಂಬಂಧವು ಅಂತ್ಯಗೊಳ್ಳುವಿಕೆಯನ್ನು ಒಳಗೊಂಡಿರುತ್ತದೆ, ಉದಾಹರಣೆಗೆ ಒಬ್ಬ ಪುರುಷನು ವಿಚ್ಛೇದನ ನೀಡಿ ತನ್ನ ಹೆಂಡತಿಯನ್ನು ಹೊರಕ್ಕೆ ಕಳುಹಿಸುವದು ಅಥವಾ ದೇವರು ತನ್ನನ್ನು ತಿರಸ್ಕರಿಸಿ ಸುಳ್ಳು ದೇವರುಗಳನ್ನು ಆರಾಧಿಸುತ್ತಿದ್ದ ಇಸ್ರಾಯೇಲ್ಯರನ್ನು ಸೆರೆವಾಸಕ್ಕೊಳಗಾಗುವಂತೆ ಕಳುಹಿಸಿದ್ದು (ಯೆಶಾಯ 50:1; ಯೆರೆಮೀಯ 28:16).[27]

ತೋಟದಿಂದ ಹೊರಡಿಸಿ ಬಿಟ್ಟ ಬಳಿಕ, ಮನುಷ್ಯನ ವಿಧಿಯು **ಅವನು ಉತ್ಪತ್ತಿಯಾದ ಭೂಮಿಯನ್ನೇ ವ್ಯವಸಾಯ ಮಾಡುವ**ದೇ ಆಗಿತ್ತು. ಆದಾಮ ಮತ್ತು ಹವ್ವಳರು ತಾವು ದೇವರ

ಸಂಗಡ ಆನಂದಿಸುತ್ತಿದ್ದ ನಿಕಟವಾದ ಸಂಬಂಧವನ್ನು ಕಳೆದುಕೊಂಡದ್ದು ಮಾತ್ರವೇ ಅಲ್ಲ, ಆದರೆ ಅವರು ಇನ್ನು ಮೇಲೆ ತಮಗೆ ಸ್ನೇಹಮಯಿಯಾಗಿರದಂಥ ಒಂದು ಕಠೋರವಾದ ವಾತಾವರಣದೊಳಗೆ ಕಳುಹಿಸಲ್ಪಟ್ಟರು. ಗತಕಾಲದಲ್ಲಿ, ಆದಾಮನು ಸಮೃದ್ಧವಾಗಿ ಫಲಗಳನ್ನು ನೀಡುತ್ತಿದ್ದ ತೋಟದಲ್ಲಿ ಅಷ್ಟೇನೂ ಪರಿಶ್ರಮ ಪಡಬೇಕಾಗಿರಲಿಲ್ಲ, ಆದರೆ ಈಗ ಆತನು ಮೊದಲಿಂದ ಎಲ್ಲವನ್ನೂ ಆರಂಭಿಸಬೇಕಾಗಿತ್ತು ಮತ್ತು ಶಾಪಕ್ಕೊಳಗಾಗಿದ್ದ ಹಾಗೂ ಆತನ ಅತ್ಯುತ್ತಮ ಪ್ರಯತ್ನಗಳಿಗೆ ಪ್ರತಿರೋಧ ನೀಡುವಂಥ ಭೂಮಿಯಲ್ಲಿ ತನ್ನ ಸ್ವಂತ ತೋಟವನ್ನು ಅಭಿವೃದ್ಧಿಪಡಿಸಿಕೊಳ್ಳಬೇಕಾಗಿತ್ತು. ಪ್ರಥಮ ಪುರುಷ ಮತ್ತು ಸ್ತ್ರೀಯು ದೇವರಲ್ಲಿ ವಿಶ್ವಾಸವಿಡುವದಕ್ಕೆ ವಿಫಲರಾಗಿದ್ದರು, ಒಂದು ಮರದ ಹಣ್ಣನ್ನು ತಿನ್ನುವದಕ್ಕೆ ಕೊಡದೆ ಇದ್ದದರಲ್ಲಿ ಆತನಿಗಿರುವ ಉದ್ದೇಶಗಳ ಬಗ್ಗೆ ಅನುಮಾನ ಸಹ ಹೊಂದಿದ್ದರು. ತತ್ಫಲಿತವಾಗಿ, ಒಂದು ನಿರ್ದಯಿಯಾದ ಮತ್ತು ಸೇರಿಸಿಕೊಳ್ಳಲು ಇಷ್ಟಪಡದ ಜಗತ್ತು ಅವರ ಮುಂದಿತ್ತು. ದೇವರ ಕೃಪೆಯಿಂದಷ್ಟೇ ಈ ನಿರಾಶ್ರಿತ ದಂಪತಿಗಳು ಒಂದು ಆಶ್ರಯವನ್ನು ಕಂಡುಕೊಳ್ಳಲಿದ್ದರು.[28]

**ವಚನ 24.** ದೇವರು **ಅವನನ್ನು ತೋಟದಿಂದ ಹೊರಡಿಸಿಬಿಟ್ಟನು**. 22ರಿಂದ 24 ವಚನಗಳಲ್ಲಿ ಸ್ತ್ರೀಯ ಬಗ್ಗೆ ಪ್ರಸ್ತಾಪಿಸದೆ ಇರುವದು ವಿಚಿತ್ರವಾಗಿ ತೋರುತ್ತದೆ ಯಾಕೆಂದರೆ ಖಂಡಿತವಾಗಿಯೂ ಆಕೆಯ ಗತಿಯು ಸಹ ಆಕೆಯ ಗಂಡನೊಂದಿಗೆ ತೋಟದಿಂದ ಹೊರಕ್ಕೆ ಹಾಕಲ್ಪಡುವದೇ ಆಗಿತ್ತು. ಬಹುಶಃ ಒಳ್ಳೇದರ ಕೆಟ್ಟದ್ದರ ಅರುಹನ್ನು ಉಂಟು ಮಾಡುವ ಮರದ ಹಣ್ಣನ್ನು ತಿನ್ನಬಾರದೆಂಬ ಆಜ್ಞೆಯನ್ನು ಮೂಲತಃ ಪುರುಷನೇ ಪಡೆದುಕೊಂಡವನಾಗಿದ್ದರ ನಿಮಿತ್ತವಾಗಿ (2:17) ಪುರುಷನ ಮೇಲೆ ಒತ್ತು ಕೊಟ್ಟು ಹೇಳಲಾಗಿರಬಹುದಾಗಿದೆ. ಇನ್ನೊಂದು ಅಭಿಪ್ರಾಯವು ಏನೆಂದರೆ ತಾವು ಹಣ್ಣನ್ನು ತಿಂದು ಮರಣ ದಂಡನೆಯಿಂದ ತಪ್ಪಿಸಿಕೊಳ್ಳಬಹುದೆಂದು ಜೀವವೃಕ್ಷದ ಕೆಲವು ಹಣ್ಣುಗಳನ್ನು ಕಿತ್ತುಕೊಳ್ಳಲು ಪ್ರಯತ್ನಿಸುವವನು ಪುರುಷನೇ ಆಗಿರಬಹುದಾದ ಹೆಚ್ಚು ಸಾಧ್ಯತೆಯಿತ್ತು.

ಯೆಹೋವನು **ಜೀವವೃಕ್ಷಕ್ಕೆ ಹೋಗುವ ದಾರಿಯನ್ನು ಕಾಯುವದಕ್ಕೆ ... ಕೆರೂಬಿಯರನ್ನೂ** ಇಡುವ ಮೂಲಕ ಯಾರೂ ಅದರ ಬಳಿಗೆ ಹೋಗದಂತೆ ತಡೆದನು. ತೋಟಕ್ಕೆ ಹೋಗುವ ಪ್ರವೇಶ ದ್ವಾರವು **ಪೂರ್ವದಿಕ್ಕಿನ** ಕಡೆಯಲ್ಲಿತ್ತು,[29] ಮತ್ತು "ಕೆರೂಬಿಯರು" ("ಕೆರೂಬ" ಎಂಬುದರ ಬಹುವಚನ) **ಇರಿಸಲ್ಪಟ್ಟ** ಸ್ಥಳವು ಇದೇ ಆಗಿತ್ತು. "ಕೆರೂಬಿಯರು" (ಅಥವಾ "ಕೆರೂಬ") ಎಂಬ ಪದವು ಬೈಬಲಿನಲ್ಲಿ ತೊಂಭತ್ತು ಸಾರಿ ಕಾಣಿಸಿಕೊಳ್ಳುತ್ತದೆ. ಇದು ರೆಕ್ಕೆಗಳನ್ನು ಹೊಂದಿರುವಂಥ ಸಂಘಟಿತ ದೇವದೂತ ಜೀವಿಗಳನ್ನು ಸೂಚಿಸುತ್ತದೆ, ಇವರು ಅನೇಕ ಸಾರಿ ದೇವರ ಪರಿಶುದ್ಧತೆಯನ್ನು ಕಾಯುವವರಾಗಿ ಕಾಣಿಸಿಕೊಳ್ಳುತ್ತಾರೆ. ದೇವದರ್ಶನ ಗುಡಾರದಲ್ಲಿ, ಒಡಂಬಡಿಕೆಯ ಮಂಜೂಷದ ಮೇಲೆ ಇಬ್ಬರು ಬಂಗಾರದಿಂದ ನಿರ್ಮಿಸಲ್ಪಟ್ಟ ಕೆರೂಬಿಯರು ಸಾಂಕೇತಿಕವಾಗಿ ಯೆಹೋವನ ಸಿಂಹಾಸನವಾಗಿ ಕೆಲಸ ಮಾಡಿದರು (ವಿಮೋಚನಕಾಂಡ 25:18-22); ಮತ್ತು ಅವರಲ್ಲಿ ಬಹಳಷ್ಟು ಜೋಡಿಗಳು, ಎಣ್ಣೇಮರಗಳ ಕಟ್ಟಿಗೆಯಿಂದ ಕೆತ್ತಲ್ಪಟ್ಟು ಬಂಗಾರದ ತಗಡಿನಿಂದ ಲೇಪಿಸಲ್ಪಟ್ಟವರಾಗಿದ್ದು ಸೊಲೊಮೋನನ ದೇವಾಲಯದ ಅತಿ ಪರಿಶುದ್ಧ ಸ್ಥಳದಲ್ಲಿ ನಿಂತಿದ್ದರು (1 ಅರಸು 6:23-28).[30]

**ಧಗಧಗನೆ ಪ್ರಜ್ವಲಿಸುತ್ತಾ ಸುತ್ತುವ ಕತ್ತಿ**ಯು ದೇವರ ನ್ಯಾಯತೀರ್ಪನ್ನು ಪ್ರತಿನಿಧಿಸುವದಾಗಿತ್ತು. ಅದು ಅತಿಕ್ರಮಣ ಮಾಡುವ ಯಾವದೇ ವ್ಯಕ್ತಿಗೆ ಮರಣದ ಅಪಾಯವನ್ನೊಡ್ಡುವದಾಗಿತ್ತು.[31] ಕಥೆಯಲ್ಲಿನ ದುರಂತಕರವಾದ ವಿರೋಧಾಭಾಸವು ಏನೆಂದರೆ ಆದಾಮನನ್ನು ಮೂಲತಃ ತೋಟದಲ್ಲಿ ಅದನ್ನು ಆರೈಕೆ (שָׁמַר, *ಶಮಾರ)* ಮಾಡುವದಕ್ಕಾಗಿ

ಇರಿಸಲಾಗಿತ್ತು (2:15), ಆದರೆ ಈಗ ಆತನ ವಿರುದ್ಧವಾಗಿ "ಕಾಯುವದಕ್ಕಾಗಿ" (שָׁמַר, *ಶಮಾರ*) ಕೆರೂಬಿಯರನ್ನು ಮತ್ತು "ಧಗಧಗನೆ ಪ್ರಜ್ವಲಿಸುವ ಕತ್ತಿಯನ್ನು" ಇರಿಸಲಾಗಿತ್ತು.

## ಅನ್ವಯಿಸುವಿಕೆ

**ಪುರುಷನು ಮಾಡಿಕೊಂಡ ಆಯ್ಕೆ (2:9, 16, 17; 3:1-24)**

*"ನನ್ನ ಜೀವಿತದ ಕೇಂದ್ರಬಿಂದು ಯಾವದಾಗಿರುವುದು?"* ಯಾವುದು ಜೀವಿತದ ಕೇಂದ್ರಬಿಂದುವಾಗಿರಲಿದೆ ಎಂಬುದಕ್ಕಾಗಿ ತೋಟದ ಮಧ್ಯದಲ್ಲಿದ್ದ ಒಳ್ಳೇದರ ಕೆಟ್ಟದ್ದರ ಅರುಹನ್ನುಂಟು ಮಾಡುವ ಮರವು ಒಂದು ಪರೀಕ್ಷೆಯನ್ನು ಮುಂದಿಟ್ಟಿತ್ತು: ದೇವರು ಅಥವಾ ಸ್ವತಃ. ಖಂಡಿತವಾಗಿಯೂ, ದೇವರು ಆತ್ಮಸ್ವರೂಪನು (ಯೋಹಾನ 4:24); ಆದರೆ ಆತನು ಶಾರೀರಿಕ ಜಗತ್ತನ್ನು ಹಾಗೂ ಅದರಲ್ಲಿರುವ ಸಮಸ್ತವನ್ನು ಉಂಟು ಮಾಡಿರುವಂಥ ಸೃಷ್ಟಿಕರ್ತನು ಸಹ ಆಗಿರುತ್ತಾನೆ. ಆತನು ಮನುಷ್ಯನನ್ನು ತನ್ನ ಸ್ವಂತ ಸ್ವರೂಪದಲ್ಲಿ ಉಂಟು ಮಾಡಿದಾಗ, ಆತನು ಶಾರೀರಿಕವಾಗಿ ಇರುವಂಥವನು ಮಾತ್ರವೇ ಅಲ್ಲ, ಆದರೆ ತನ್ನ ಜೀವಿತದ ಕುರಿತಾಗಿ ಆಯ್ಕೆಗಳನ್ನು ಮಾಡಿಕೊಳ್ಳಲು ಶಕ್ತನಾಗಿರುವಂಥ ಒಬ್ಬ ನೈತಿಕ ಹಾಗೂ ಆತ್ಮೀಕ ಜೀವಿಯನ್ನು ಸಹ ಉಂಟು ಮಾಡಿದ್ದನು.

ಸ್ವೇಚ್ಚಾ-ಚಿತ್ತವು ಒಂದು ಶ್ರೇಷ್ಠ ಆಶೀರ್ವಾದವಾಗಿದೆ, ಆದರೆ ಅದರೊಂದಿಗೆ ತಪ್ಪು ನಿರ್ಧಾರಗಳನ್ನು ಮಾಡಿಕೊಂಡರೆ ಆಗಬಹುದಾದ ಪರಿಣಾಮಗಳನ್ನು ಒಳಗೊಂಡಿರುವ ಸಂಯಮದ ಜವಾಬ್ದಾರಿಗಳು ಸಹ ಬರುತ್ತವೆ. ನಾವು ಅದನ್ನು ಗ್ರಹಿಸಿಕೊಳ್ಳುತ್ತೇವೋ ಅಥವಾ ಇಲ್ಲವೋ, ನಾವು ನಡೆಸುವ ಜೀವಿತಗಳ ಮತ್ತು ನಮ್ಮ ಬಾಹ್ಯ ಕ್ರಿಯೆಗಳ ಹಿಂದೆ, ಮೂಲಭೂತ ವಿಷಯವು ಯಾವಾಗಲೂ ಒಂದೇ ವಿಧವಾದ ಪ್ರಶ್ನೆಯನ್ನೊಳಗೊಂಡಿರುತ್ತದೆ: "ನನ್ನ ಮೇಲೆ ಯಾರು ದೊರೆತನ ಮಾಡುವರು: ಸೃಷ್ಟಿಕರ್ತನೋ ಅಥವಾ ಸ್ವತಃ ನಾನೇನೋ?" ಆ ಪ್ರಶ್ನೆಯ ಹಿಂದೆ ಮನುಷ್ಯನ ಗರ್ವ ಇರುತ್ತದೆ, ಮತ್ತು ಒಬ್ಬ ಮನುಷ್ಯನ ಹೃದಯದ ಮೇಲೆ ಹಿಡಿತವನ್ನು ಸಾಧಿಸಿ ದೇವರ ವಿರುದ್ಧವಾಗಿ ಅವಿಧೇಯತೆಯನ್ನು ಹುಟ್ಟಿಸುವದಕ್ಕೆ ಆತನ ಅಹಂಭಾವಕ್ಕೆ ಹೊಡೆತವನ್ನು ಕೊಡುವದೇ ಅತಿ ವೇಗವಾದ ದಾರಿ ಎಂದು ಸರ್ಪಕ್ಕೆ ಗೊತ್ತಿತ್ತು. (ನೋಡಿರಿ ಜ್ಞಾನೋಕ್ತಿಗಳು 16:18 ಮತ್ತು 1 ತಿಮೊಥೆ 3:6, ಈ ವಾಕ್ಯಭಾಗಗಳು ಗರ್ವವೇ ಸೈತಾನನ ಮೂಲಭೂತವಾದ ಪಾಪವಾಗಿತ್ತೆಂಬ ಸೂಚ್ಯಾರ್ಥವನ್ನು ನೀಡುತ್ತವೆ.) ಪ್ರಥಮ ದಂಪತಿಗಳು ದೇವರ ರೀತಿಯಲ್ಲಿ ಜ್ಞಾನಿಗಳಾಗಿ, "ಒಳ್ಳೇದರ ಕೆಟ್ಟದ್ದರ ಭೇದವನ್ನು ಅರಿತವರಾಗುವಿರಿ" ಎಂದು ಸರ್ಪವು ಹೇಳಿದಾಗ, ಇದೊಂದು ಅವರಿಗೆ ಸಂಕಷ್ಟವನ್ನುಂಟು ಮಾಡುವ ವಿಷಯವಾಗುವದೆಂದು ಸರ್ಪವು ಅರಿತುಕೊಂಡಿತ್ತು. ಶೋಧನೆಯನ್ನು ಈ ಮಾತುಗಳಲ್ಲಷ್ಟೇ ಹೇಳುವದಕ್ಕೆ ಆಗದಿರಬಹುದು, ಆದರೆ ವಿಚಾರವು ಅದರಲ್ಲಿ ಯಾವಾಗಲೂ ಇದ್ದೇ ಇರುತ್ತದೆ: ಯಾವನಿಗೆ ತನಗೆ ತಾನೇ ದೇವರಾಗಿರುವದು ಇಷ್ಟವಿಲ್ಲ, ಆಜ್ಞೆಗಳಿಂದ ಹಾಗೂ ಇಂಥಿಂಥದ್ದನ್ನು ಮಾಡಬೇಡ ಎಂಬ ಕಟ್ಟಳೆಗಳಿಂದ ಸ್ವತಂತ್ರವಾಗಿರುವದಕ್ಕೆ ಇಷ್ಟಪಡದಿರುವವನು ಯಾವನಿದ್ದಾನೆ? ಅದು ಸಾಧ್ಯವೇ ಆಗಿದ್ದಲ್ಲಿ, ಎಲ್ಲಾ ಜನರು ತಮ್ಮಿಷ್ಟದ ದಾರಿಯನ್ನು ಹಿಡಿಯುತ್ತಿದ್ದರು, ತಮಗೆ ಇಷ್ಟವಾಗುವದನ್ನು ಮಾಡುವವರಾಗಿ, ಯಾರಿಗೂ ಉತ್ತರಿಸುವ ಅಗತ್ಯವಿಲ್ಲದವರಾಗಿ ಇರುತ್ತಿದ್ದರು. ಹೇಗೂ, ಅಂಥ ಒಂದು ದಾರಿಯನ್ನು ಅನುಸರಿಸುವದು ಹಿತಕರವಾಗುವದಿಲ್ಲ. ಮನುಷ್ಯನು ಎಷ್ಟು ಅಧಿಕವಾಗಿ ತನಗೆ ತಾನೇ ದೇವರಾಗಿರಬೇಕೆಂದು ಮತ್ತು ಸತ್ಯ ದೇವರಿಂದ ಸ್ವತಂತ್ರನಾಗಿ ಬದುಕಬೇಕೆಂದು ಬಯಸುತ್ತಾನೋ, ಅಷ್ಟೇ

ಅಧಿಕವಾಗಿ ಆತನು ಸೈತಾನನಂತೆ ಆಗುವನು. ಮನುಷ್ಯನನ್ನು ಅವನಿಷ್ಟದಂತೆ ಬದುಕಲು ಬಿಟ್ಟು ಬಿಟ್ಟಲ್ಲಿ, ಶೀಘ್ರವೇ ಆತನು ಪಾಪದ ವಿನಾಶಕಾರಿ ದಾಸತ್ವಕ್ಕೆ ಸಿಕ್ಕಿಕೊಂಡ ಗುಲಾಮನಾಗುತ್ತಾನೆ (ಪ್ರಳಯದ ತನಕವೂ ಕಾಯಿನ ಮತ್ತು ಆತನ ಸಂತತಿಯವರು ಮಾಡಿದ ರೀತಿಯಲ್ಲಿಯೇ; 4:8, 23, 24; 6:4, 5, 11-13).

*"ನಾನು ದೇವರಲ್ಲಿ ವಿಶ್ವಾಸವಿಡುವೆನೋ?"* ನಿಷೇಧಿಸಲ್ಪಟ್ಟ ಮರವು ಸಂಬಂಧದ ಕುರಿತು ಒಂದು ಪರೀಕ್ಷೆಯನ್ನು ಮುಂದಿಟ್ಟಿತ್ತು. "ಒಳ್ಳೇದರ ಕೆಟ್ಟದ್ದರ ಅರುಹು" ಎಂದರೆ ಸಮಸ್ತವನ್ನೂ ತಿಳಿದುಕೊಳ್ಳುವ ಸಾಮರ್ಥ್ಯ, ದೇವರಿಗೆ ಮಾತ್ರವೇ ಇರುವಂಥ ರೀತಿಯ ಜ್ಞಾನ ಎಂದಾಗಬಹುದು. ಮನುಷ್ಯನಿಗೆ ಅಂತಹ ಜ್ಞಾನವನ್ನು ಪಡೆದುಕೊಳ್ಳುವದಕ್ಕೆ ಸಾಧ್ಯವೇ ಇರುವದಿಲ್ಲ - ಆದರೆ ಆತನಿಗೆ ಸಾಧ್ಯವಾಗುವದಾದರೂ, ಆತನು ಅದನ್ನು ನಿಭಾಯಿಸುವದಕ್ಕೆ ಅಶಕ್ತನಾಗುವನು. ಹಾಗಾದರೆ, ನಿಷೇಧಿಸಲ್ಪಟ್ಟಿದ್ದ ಮರವು ಮನುಷ್ಯನು ದೇವರೊಂದಿಗೆ ಹೊಂದಿರುವ ಸಂಬಂಧವನ್ನು ಪ್ರತಿನಿಧಿಸುತ್ತದೆ, ಅದರಲ್ಲಿ ವಿಶ್ವಾಸವು ಅಡಕವಾಗಿರುತ್ತಷ್ಟೆ. ಮನುಷ್ಯನು ದೇವರಲ್ಲಿ ವಿಶ್ವಾಸವಿಡುವನೋ, ಅಥವಾ ಆತನು ಒಳ್ಳೇಯ ಹಾಗೂ ಪ್ರೀತಿಸ್ವರೂಪಿ ದೇವರಾಗಿದ್ದು ತನಗೆ ಅತ್ಯುತ್ತಮವಾದದ್ದನ್ನೇ ಮಾಡುವನು ಎಂಬುದಾಗಿ ನಂಬುತ್ತಾನೋ, ಅಥವಾ ಅವನು ಆತನನ್ನು ಹೊಟ್ಟೆಕಿಚ್ಚುಳ್ಳ ದೇವರು, ಏದೆನ್ ತೋಟದಲ್ಲಿ ಸರ್ಪವು ಅಭಿಪ್ರಾಯ ಪಟ್ಟ ರೀತಿಯಲ್ಲಿ ಮನುಷ್ಯನನ್ನು ಅದ್ಭುತವಾದ ಅನುಭವದಿಂದ ವಂಚಿತಗೊಳಿಸುವನು ಎಂಬುದಾಗಿ ಕಾಣುವನೋ?

ದೇವರಲ್ಲಿ ವಿಶ್ವಾಸವಿಡುವದು ಆತನೊಂದಿಗೆ ಮನುಷ್ಯನು ಸಂಬಂಧವನ್ನಿಟ್ಟುಕೊಳ್ಳಲು ಯಾವಾಗಲೂ ಒಂದು ಮೂಲಭೂತ ವಿಷಯವಾಗಿರತ್ತದೆ. ಅದು ಬೈಬಲಿನ ಉದಾಹರಣೆಗಳಲ್ಲಿ ವಿಶೇಷವಾಗಿ ಸಾಭಿತುಗೊಂಡಿರುತ್ತದೆ.

ನೋಹನು - ನೋಹನು ಎಲ್ಲಾ ಮಾನವರನ್ನು ನಾಶಗೊಳಿಸುವದಕ್ಕೆ ಭೂಮಿಯ ಮೇಲೆ ಪ್ರಳಯವು ಬರಲಿದೆ ಎಂಬ ದೇವರ ಎಚ್ಚರಿಕೆಯನ್ನು ವಿಶ್ವಾಸಿಸಿದನು. ಹಾಗೆ ಮಾಡುವ ಮೂಲಕ, ಆತನು ತನ್ನ ಇಡೀ ಸಮಾಜದವರಲ್ಲಿದ್ದ ಸರ್ವಸಾಧಾರಣವಾದ ಜ್ಞಾನ ಮತ್ತು ತಿಳುವಳಿಕೆಗಳಿಗೆ ವಿರುದ್ಧವಾಗಿ ಸಾಗಬೇಕಾಗಿತ್ತು (ಮತ್ತಾಯ 24:35-39; ಇಬ್ರಿಯ 11:7; 2 ಪೇತ್ರ 3:3-7).

ಮೋಶೆ - ಮೋಶೆಯು ಸಹ ದೇವರಲ್ಲಿ ವಿಶ್ವಾಸಿಸುವದಕ್ಕೆ ನಿರ್ಣಯಿಸಿಕೊಂಡನು. ಆತನು ಐಗುಪ್ತಕ್ಕೆ ಹಿಂದಿರುಗಿ ಹೋಗಿ ಇಬ್ರಿಯ ಜನರನ್ನು ದಾಸತ್ವದೊಳಗಿಂದ ಬಿಡಿಸುವ ಕೆಲಸವನ್ನು ಮಾಡುವದಕ್ಕಾಗಿ ಮಾನವ ದೃಷ್ಟಿಕೋನದಿಂದ ಸತ್ಯವಾಗಿರುವಂಥ ಎಲ್ಲದರ ವಿರುದ್ಧವಾಗಿ ಆತನು ಸಾಗಬೇಕಾಗಿತ್ತು. ಅಂತೂ, ಆತನು ನ್ಯಾಯಕ್ಕೆ ತಪ್ಪಿಸಿಕೊಂಡು ಓಡಾಡುತ್ತಿದ್ದ ಅಪರಾಧಿಯಾಗಿದ್ದನಷ್ಟೆ, ಐಗುಪ್ತವು ಜಗತ್ತಿನಲ್ಲಿಯೇ ಅತ್ಯಂಥ ಶಕ್ತಿಶಾಲಿ ದೇಶವಾಗಿತ್ತು, ಮತ್ತು ಫರೋಹನು ನಾಲ್ವತ್ತು ವರ್ಷಗಳ ಕಾಲ ಅರಣ್ಯದಲ್ಲಿ ಕುರಿಗಳನ್ನು ಮೇಯಿಸುತ್ತಿದ್ದ ವ್ಯಕ್ತಿಯೊಬ್ಬನ ಮಾತುಗಳಿಗೆ ಎಂದಿಗೂ ಕಿವಿಗೊಡುವ ಮನುಷ್ಯನಾಗಿರಲಿಲ್ಲ. ದೇವರು ಅವರನ್ನು ದಾಸತ್ವದೊಳಗಿಂದ ಬಿಡಿಸುವನು ಎಂಬುದಕ್ಕೆ ಆತನು ಇಬ್ರಿಯರಿಗೆ ಯಾವ ಖಾತ್ರಿಯನ್ನು ಕೊಡುವದಕ್ಕೆ ಸಾಧ್ಯವಿತ್ತು? (ನೋಡಿರಿ ವಿಮೋಚನಕಾಂಡ 3:16-4:31; 6:1-9.) ಬಿಡುಗಡೆಯ ಪ್ರಕ್ರಿಯೆಯಲ್ಲಿ ಇಡುವ ಪ್ರತಿಯೊಂದು ಹೆಜ್ಜೆಯಲ್ಲಿಯೂ ವಿಶ್ವಾಸವು ಬೇಕಾಗಿತ್ತು: ಐಗುಪ್ತದವರ ಮೇಲೆ ಬಂದಂಥ ಉಪದ್ರವಗಳಿಂದ ಇಸ್ರಾಯೇಲ್ಯರನ್ನು ರಕ್ಷಿಸುವಂತೆ ದೇವರಲ್ಲಿ ವಿಶ್ವಾಸವಿಡುವುದು (ವಿಮೋಚನಕಾಂಡ 8:1-12:36), ಫರೋಹನ ಸೈನ್ಯದವರ ರೌದ್ರದಿಂದ ತಪ್ಪಿಸುವಂತೆ, ಮತ್ತು ಅವರನ್ನು ಬೆನ್ನಟ್ಟಿದ್ದವರನ್ನು ಮುಳುಗಿಸಿ ಬಿಟ್ಟ

ಸಮುದ್ರದಿಂದ ರಕ್ಷಿಸುವಂತೆ ದೇವರಲ್ಲಿ ವಿಶ್ವಾಸಿಸುವುದು (ವಿಮೋಚನಕಾಂಡ 14:10-31). ಅರಣ್ಯದಲ್ಲಿ, ಅವರು ನಾಶಗೊಳ್ಳದಂತೆ ಬದುಕುಳಿಯುವದಕ್ಕೆ ದೇವರು ನೀರು, ಮನ್ನಾ, ಮತ್ತು ಬೆಳವಕ್ಕಿಗಳನ್ನು ಒದಗಿಸುವನೆಂದು ಮೋಶೆ ಹಾಗೂ ಜನರು ಆತನಲ್ಲಿ ವಿಶ್ವಾಸವಿಡಬೇಕಾಗಿತ್ತು. ಸೀನಾಯಿ ಪರ್ವತಕ್ಕೆ ಹೋಗುವ ಮಾರ್ಗದಲ್ಲಿ ತಮ್ಮ ಮೇಲೆ ಹೊಂಚು ಹಾಕಿ ದಾಳಿ ಮಾಡಿದ ಅಮಾಲೇಕ್ಯರ ಮೇಲೆ ಜಯವನ್ನು ಒದಗಿಸುವಂತೆ ಅವರು ದೇವರಲ್ಲಿ ವಿಶ್ವಾಸವಿಡಬೇಕಾಗಿತ್ತು (ವಿಮೋಚನಕಾಂಡ 15:22-17:13; ಇಬ್ರಿಯ 11:24-29).

ಪುನಃ ಪುನಃ, ಯೆಹೋವನು ಇಸ್ರಾಯೇಲ್ಯರ ಪ್ರೀತಿಸ್ವರೂಪಿ ದೇವರಂತೆ ತನ್ನ ಹೃದಯದಲ್ಲಿ ಕೇವಲ ಅವರಿಗೆ ಅತ್ಯುತ್ತಮವಾದದ್ದನ್ನೇ ಬಯಸುವವನೆಂಬುದಾಗಿ ತನ್ನ ಸ್ವಭಾವವನ್ನು ತೋರಿಸಿ ಕೊಟ್ಟಿದ್ದನು. ಹಾಗಿದ್ದರೂ, ಅವರು ಆಗಾಗ ಪದೇ ಪದೇ ಆತನ ವಿರುದ್ಧವಾಗಿ ಗುಣಗುಟ್ಟಿದರು, ತಮ್ಮನ್ನು ಅರಣ್ಯದಲ್ಲಿ ಸಾಯುವಂತೆ ಮಾಡುವದಕ್ಕಾಗಿಯೇ ಆತನು ಐಗುಪ್ತದಿಂದ ತಮ್ಮನ್ನು ಬಿಡಿಸಿದನೆಂಬುದಾಗಿ ವಾದಿಸುತ್ತಿದ್ದರು. ಅಂತಿಮವಾಗಿ, ಅವರು ವಾಗ್ದಾನ ಮಾಡಲ್ಪಟ್ಟ ದೇಶದ ಗಡಿಯಲ್ಲಿ ಬಿಡಾರ ಹಾಕಿಕೊಂಡವರಾಗಿ ದೇವರು ತಮಗೆ ಜಯವನ್ನು ಕೊಡುವನೆಂಬುದಾಗಿ ಅವರು ವಿಶ್ವಾಸಿಸಿದ ಕಾರಣದಿಂದ ಆ ದೇಶದೊಳಗೆ ಪ್ರವೇಶಿಸಲು ನಿರಾಕರಿಸಿದ ವೇಳೆ, ಯೆಹೋವನು ಮೋಶೆಗೆ ಹೀಗೆ ಹೇಳಿದನು, "ಈ ಜನರು ಇನ್ನು ಎಷ್ಟರ ಮಟ್ಟಿಗೆ ನನ್ನನ್ನು ಅಲಕ್ಷ್ಯಮಾಡುವರೋ; ನಾನು ನಡಿಸಿದ ಎಲ್ಲಾ ಮಹತ್ಕಾರ್ಯಗಳನ್ನು ಇವರು ಪ್ರತ್ಯಕ್ಷವಾಗಿ ನೋಡಿದಾಗ್ಯೂ ಇನ್ನು ಎಷ್ಟು ದಿನ ನನ್ನನ್ನು ನಂಬದೆ ಇರುವರೋ." ಅರಣ್ಯಕಾಂಡ 14:11ರಲ್ಲಿ "ನಂಬಿಕೆ" ಎಂಬುದು "ವಿಶ್ವಾಸ" ಎಂಬ ಸೂಚ್ಯಾರ್ಥ ಹೊಂದಿದೆ. ಜನರು ಬುದ್ಧಿಯಿಂದ ದೇವರಲ್ಲಿ ನಂಬಿಕೆಯಿಟ್ಟಿದ್ದರು, ಮತ್ತು ಆತನು ಮಹಾ ಅದ್ಭುತಗಳನ್ನು ಮಾಡಿದ್ದಾನೆಂಬುದನ್ನು ಬಲ್ಲವರಾಗಿದ್ದರು; ಆದರೆ ಆಗಲೂ ಅವರು ಆತನಲ್ಲಿ ವಿಶ್ವಾಸವನ್ನಿಡಲಿಲ್ಲ, ಯಾಕೆಂದರೆ ಅವರು ತಮ್ಮ ಜೀವಿತಗಳನ್ನು ಮತ್ತು ಭವಿಷ್ಯತ್ತನ್ನು ಆತನ ಕೈಗಳಲ್ಲಿ ಕಾಪಾಡಲ್ಪಡುವಂತೆ ಒಪ್ಪಿಸುವದಕ್ಕೆ ಮನಸ್ಸಿಲ್ಲದವಾಗಿದ್ದರು.

ಆತನ ವೈಯಕ್ತಿಕ ಸೇವೆಯ ವೇಳೆಯಲ್ಲಿ, ಯೇಸುವು ಯೆಹೂದ್ಯರಲ್ಲಿ ಸಹ ಅದೇ ರೀತಿಯಲ್ಲಿ ವಿಶ್ವಾಸದ ಕೊರತೆಯಿರುವದನ್ನು ಗಮನಿಸಿದನು. ಪಸ್ಕ ಹಬ್ಬದ ವೇಳೆಯಲ್ಲಿ, ಬಹು ಜನರು "ಆತನು ಮಾಡಿದ ಸೂಚಕಕಾರ್ಯಗಳನ್ನು ನೋಡಿ ಆತನ ಹೆಸರಿನಲ್ಲಿ ನಂಬಿಕೆಯಿಟ್ಟರು [ἐπίστευσαν, *ಎಪಿಸ್ಟೆವುಸನ]*. ಆದರೆ ಯೇಸು ಎಲ್ಲರನ್ನೂ ಬಲ್ಲವನಾದ್ದರಿಂದ ಅವರಿಗೆ ವಶವಾಗಲಿಲ್ಲ [ἐπίστευεν, *ಎಪಿಸ್ಟೆವುಯೆನ]"* (ಯೋಹಾನ 2:23, 24). ಯೋಹಾನನು ಬಳಸಿರುವ ಮೊದಲ ಕ್ರಿಯಾಪದವು ಅನಿಶ್ಚಿತ ಭೂತಕಾಲ ರೂಪದಲ್ಲಿರುತ್ತದೆ, ಸಾಮಾನ್ಯವಾಗಿ "ಕ್ರಿಯೆಯ ಸಂದರ್ಭ," ಒಂದು ವಿಧವಾದ ಕ್ಷಣಿಕ ನಂಬಿಕೆ ಎಂದರ್ಥವಾಗುತ್ತದೆ. ಇದು ಸಮರ್ಪಣೆಯನ್ನೊಳಗೊಂಡಿರುವದಿಲ್ಲ, ಆದ್ದರಿಂದ ಇದು ಒಂದು ರಕ್ಷಣೆಯನ್ನುಂಟು ಮಾಡುವ ನಂಬಿಕೆ ಆಗಿರುವದಿಲ್ಲ. ಎರಡನೆಯ ಪದವು ಅನೇಕ ಸಾರಿ "ನಂಬಿಕೆಯಿಡು" ಎಂದು ಅನುವಾದಿಸಲ್ಪಡುವ ಅದೇ ಪದದಿಂದ ಬಂದದ್ದಾಗಿದೆ; ಹೇಗೂ, ಅಪೂರ್ಣ ಕಾಲರೂಪದಲ್ಲಿ, ಇದು ನಂಬಿಕೆಯಿಡುವ, ವಿಶ್ವಾಸಿಸುವ, ಒಪ್ಪಿಸಿ ಕೊಡುವ, ಅಥವಾ ತನ್ನನ್ನು ಸಮರ್ಪಿಸಿಕೊಳ್ಳುವ ನಿರಂತರವಾದ ಕ್ರಿಯೆಯನ್ನು ಸೂಚಿಸುತ್ತದೆ. ಯೇಸುವಿಹೆ ಅವರ ನಂಬಿಕೆಯಲ್ಲಿ ನಂಬಿಕೆಯಿರಲಿಲ್ಲ ಅಥವಾ ಯೇಸುವು ಅವರಿಗೆ ತನ್ನನ್ನು ಒಪ್ಪಿಸಿಕೊಳ್ಳದವನಾಗಿದ್ದನು ಯಾಕೆಂದರೆ ಅವರು ತಮ್ಮನ್ನು ಆತನಿಗೆ ಒಪ್ಪಿಸಿಕೊಳ್ಳದವರಾಗಿದ್ದರು (ಅಥವಾ ಅರ್ಪಿಸಿಕೊಳ್ಳದವರು) ಎಂಬುದಾಗಿ ಯೋಹಾನನು ಹೇಳುತ್ತಿದ್ದಾನೆ. ರಕ್ಷಣೆಯುಂಟು ಮಾಡುವ ನಂಬಿಕೆಯೆಂದರೆ ಕೇವಲ ಆತನು

ಇದ್ದಾನೆಂಬುದನ್ನು ಅಥವಾ ಅದ್ಭುತಗಳನ್ನು ಕುರಿತು ಮಾನಸಿಕವಾಗಿ ಒಪ್ಪಿಕೊಳ್ಳುವದಷ್ಟೇ ಆಗಿರುವದಿಲ್ಲ; ಅದಕ್ಕೆ ವಿಶ್ವಾಸಿಸುವದು ಮತ್ತು ಒಬ್ಬನು ತನ್ನನ್ನು ಕ್ರಿಸ್ತನಿಗೆ ಅರ್ಪಿಸಿಕೊಳ್ಳುವದು ಅಗತ್ಯ.[32]

ಇತಿಹಾಸದುದ್ದಕ್ಕೂ ನಡೆದಿರುವ ಪ್ರಕಾರವೇ, ಈ ವಿಧವಾದ ನಂಬಿಕೆಯ ವಿವಾದಾಂಶವು ಆದಾಮ ಮತ್ತು ಹವ್ವಳನ್ನು ಎದುರುಗೊಂಡಿರುತ್ತದೆ. ದೇವರು ತಮ್ಮ ಸೃಷ್ಟಿಕರ್ತನು ಮತ್ತು ತಮ್ಮ ಜೀವಿತಗಳಿಗಾಗಿ, ಅವರ ಪರಿಸರ, ಮತ್ತು ಅವರಿಗೆ ಒದಗಿಸಲ್ಪಟ್ಟಿರುವದೆಲ್ಲಕ್ಕೂ ಅವರು ಆತನಿಗೆ ಋಣಸ್ಥರಾಗಿದ್ದಾರೆ ಎಂಬುದನ್ನು ಅರಿತವರಾಗಿದ್ದರು. ಅವರು ಹೀಗಿದ್ದಾಗ್ಯೂ ತಮ್ಮ ತೀರ್ಮಾನಗಳನ್ನು ತಾವೇ ಮಾಡಿಕೊಳ್ಳುವದಕ್ಕೆ ಬಯಸಿದ್ದರು, ಅದು ದೇವರಿಗೆ ವಿಧೇಯರಾಗುವದಕ್ಕೆ ಮತ್ತು ತಮಗೆ ಏನು ಅತ್ಯುತ್ತಮವೋ ಅದನ್ನು ಆತನು ಬಲ್ಲವನಾಗಿದ್ದಾನೆಂಬ ವಿಶ್ವಾಸವನ್ನಿಡುವದಕ್ಕೆ ವಿರುದ್ಧವಾಗಿತ್ತು.

*"ನಾನು ದೇವರ ಆಜ್ಞೆಗಳಿಗೆ ವಿಧೇಯನಾಗುವೆನೋ?"* ನಿಷೇಧಿಸಲ್ಪಟ್ಟ ಮರವು ಒಂದು ಆಜ್ಞೆಯ ವಿಷಯದಲ್ಲಿ ಪರೀಕ್ಷೆಯನ್ನು ಮುಂದಿಟ್ಟಿತ್ತು. ಈ ಪ್ರಕರಣದಲ್ಲಿ, ಪ್ರಥಮ ದಂಪತಿಗಳಿಗೆ ಎದುರಾದ ಪರೀಕ್ಷೆಯು ನಕಾರಾತ್ಮಕವಾದದ್ದಾಗಿತ್ತು: ನಿಷೇಧಿಸಲ್ಪಟ್ಟ ಸಂಗತಿ. ಅವರಿಗೆ ಇಂಥಿಂಥದ್ದನ್ನು ಮಾಡಬಾರದೆಂದು, ಒಳ್ಳೇದರ ಕೆಟ್ಟದ್ದರ ಅರುಹನ್ನುಂಟು ಮಾಡುವ ಮರದ ಹಣ್ಣನ್ನು ತಿನ್ನಬಾರದೆಂದು ಹೇಳಲಾಗಿತ್ತು. ಪರೀಕ್ಷೆಯ ಮಹತ್ವಪೂರ್ಣತೆಯು ನಿಷೇಧಿಸಲ್ಪಟ್ಟ ಕ್ರಿಯೆಯಲ್ಲಿರಲಿಲ್ಲ, ಯಾಕೆಂದರೆ ಈ ಮರದ ಹಣ್ಣನ್ನು ತಿನ್ನುವುದು ಅನೈತಿಕವಾಗಿರಲಿಲ್ಲ ಅಥವಾ ಸ್ವಭಾವತಃ ಕೆಟ್ಟದ್ದಾಗಿರಲಿಲ್ಲ. 6ನೇ ವಚನವು ಹೀಗೆ ಹೇಳುತ್ತದೆ, ಸ್ತ್ರೀಯು "ಆ ಮರದ ಹಣ್ಣು ತಿನ್ನುವದಕ್ಕೆ ಉತ್ತಮವಾಗಿಯೂ ನೋಡುವದಕ್ಕೆ ರಮ್ಯವಾಗಿಯೂ ಜ್ಞಾನೋದಯಕ್ಕೆ ಅಪೇಕ್ಷಿಸತಕ್ಕದ್ದಾಗಿಯೂ ಇದೆ ಎಂದು ತಿಳಿದಾಗ" ಆಕೆಯು ಹಣ್ಣುಗಳಲ್ಲಿ ಕೆಲವನ್ನು ತೆಗೆದುಕೊಂಡು ತಿಂದಳು. ಬಳಿಕ ಆಕೆಯು ತನ್ನ ಗಂಡನು ಸವಿಯಲಿ ಎಂದು ಅದರಲ್ಲಿ ಕೆಲವೊಂದನ್ನು ಆತನಿಗೆ ತಂದಳು. ಹಣ್ಣು ವಿಷಕಾರಿ ಆಗಲಿ ಅಥವಾ ಕೊಳೆತದ್ದಾಗಲಿ ಆಗಿರಲಿಲ್ಲ, ಆದರೆ ಅದು ಅಪೇಕ್ಷಿಸತಕ್ಕದ್ದಾಗಿಯೂ ರುಚಿಕರವಾಗಿಯೂ ಇತ್ತು.

ನಿಷೇಧದ ಅಂಶವು ಏನಾಗಿತ್ತೆಂದರೆ ದೇವರು ಆ ನಿಷೇಧಾಜ್ಞೆಯನ್ನು ಕೊಟ್ಟಿದ್ದನು ಎಂಬುದೆ. ಮನುಷ್ಯನಿಗಾಗಿ ಸೇವಿಸುವದಕ್ಕೆ ಯಾವುದು ಸರಿ ಅಥವಾ ತಪ್ಪು ಎಂಬುದನ್ನು ನಿರ್ಧರಿಸುವ ಹಕ್ಕು ದೇವರಿಗಷ್ಟೇ ಇರುತ್ತದೆ. ದೇವರ ಕಟ್ಟಳೆಗಳು ಆತನ ಹೊರಗೆ ಅಥವಾ ಆತನನ್ನು ಮೀರಿದ ಸರಿ ಅಥವಾ ತಪ್ಪಿನ ನಿಯಮಗಳಿಂದ ಆಳಲ್ಪಡುವದಿಲ್ಲ. ದೇವರು ಒಂದು ಸಂಗತಿಯನ್ನು ಮಾಡುವಂತೆ ಮನುಷ್ಯನಿಗೆ ಹೇಳುವದಾದರೆ ಅದು ಸರಿ ಮತ್ತು ಆತನು ಅದನ್ನು ನಿಷೇಧಿಸುವದಾದರೆ ಅದು ತಪ್ಪು ಎಂದಾಗುತ್ತದೆ; ಆತನು ಬೇರೆ ಇನ್ನಾವದೇ ಅಂತಿಮ ಮಾನದಂಡವನ್ನು ಸ್ಥಾಪಿಸಿರುವದಿಲ್ಲ.

ಒಳ್ಳೇದರ ಕೆಟ್ಟದ್ದರ ಅರುಹನ್ನು ಹುಟ್ಟಿಸುವ ಮರದ ಹಣ್ಣನ್ನು ತಿನ್ನಬಾರದೆಂಬ ಆಜ್ಞೆಯು ಮನುಷ್ಯನು ದೇವರನ್ನು ವಿಶ್ವಾಸಿಸುವನೋ ಮತ್ತು ಆತನ ಸಂಗಡದ ಸಂಬಂಧವನ್ನು ಮೌಲ್ಯ ಮಾಡುವನೋ ಎಂದು ಪರೀಕ್ಷಿಸುವದಕ್ಕಾಗಿಯೇ ಆಗಿತ್ತು. ಮೇರೆಗಳನ್ನು ಗುರುತಿಸದಿದ್ದರೆ, ತಾನು ಉಂಟು ಮಾಡಿದ್ದ ಮಾನವರು ಶೀಘ್ರವೇ ತಮ್ಮನ್ನು ವಿಶ್ವದ ಕೇಂದ್ರಬಿಂದು ಎಂದು ಭಾವಿಸಿಕೊಳ್ಳುವರೆಂಬುದು ದೇವರಿಗೆ ಗೊತ್ತಿತ್ತು; ಅವರ ಜೀವಿತಗಳು ಅವರ ಮೇಲೆಯೇ ಕೇಂದ್ರೀಕರಿಸಲ್ಪಟ್ಟಿರುತ್ತಿದ್ದವೇ, ಹೊರತು ಆತನ ಮೇಲಲ್ಲ; ಮತ್ತು ಎಲ್ಲವೂ ಅವರ ಬಯಕೆಯಗಳು ಹಾಗೂ ಇಷ್ಟಗಳ ಸುತ್ತವೇ ಸುತ್ತತಕ್ಕದ್ದೆಂದು ಭಾವಿಸುವರು. ಮನುಷ್ಯನ ಮುಖ್ಯ ಗಮನವು ತನ್ನೊಳಗೆ ತಿರುಗಿಕೊಂಡು ಬಿಟ್ಟರೆ, ಆತನು ಕೇವಲ ತನ್ನ ಬಗ್ಗೆಯೇ

ಯೋಚಿಸುವನು ಮತ್ತು ಬೇರೆಯವರನ್ನು ತನ್ನ ಸ್ವಾರ್ಥ ಇಚ್ಛೆಗಳನ್ನು ಸಂತೃಪ್ತಿ ಪಡಿಸಿಕೊಳ್ಳಲು ಬಳಸಿಕೊಳ್ಳುವನು. ಆತನು ತನ್ನ ಸುತ್ತಲಿರುವವರ ಕಷ್ಟಗಳ ಬಗ್ಗೆ ಸಂವೇದನೆಯಿಲ್ಲದವನಾಗುವನು. ಕ್ಲುಪ್ತವಾಗಿ ಹೇಳುವದಾದರೆ, ದೇವರಂತೆ ಆಗುವದರ ಬದಲಾಗಿ, ಆತನು ಸೈತಾನನಂತೆ ಆಗುವನು.

ದಶಾಜ್ಞೆಗಳನ್ನು ಅನೇಕ ಸಾರಿ ಹೆತ್ತವರು ತಮ್ಮ ಮಕ್ಕಳನ್ನು ಗಂಭೀರವಾದ ಸಮಸ್ಯೆಗಳಿಗೆ ಒಳಗಾಗದಂತೆ ಕಾಪಾಡುವದಕ್ಕಾಗಿ ಉಲ್ಲೇಖಿಸುವ ಸ್ವೇಚ್ಛಾನುಸಾರದ ನಿಯಮಗಳು ಅಥವಾ ಕಟ್ಟಳೆಗಳು ಎಂದು ಕಾಣಲ್ಪಡುತ್ತವೆ. "ಒಳ್ಳೇದರ ಕೆಟ್ಟದ್ದರ ಅರುಹನ್ನು ಹುಟ್ಟಿಸುವ ಮರದ" ಹಣ್ಣನ್ನು ತಿನ್ನಬಾರದೆಂದು ದೇವರು ನಿಷೇಧಿಸಿದ್ದಕ್ಕಾಗಿ ದೇವರಿಗಿರುವ ಉದ್ದೇಶಗಳ ಬಗ್ಗೆ ಸರ್ಪವು ಆದಾಮ ಮತ್ತು ಹವ್ವಳರಿಗೆ ಅಕ್ಷೇಪಾರ್ಹವೆಂದು ಹೇಳಿದ ರೀತಿಯಲ್ಲಿಯೇ, ಮಕ್ಕಳು ಕೆಲವು ಸಾರಿ ತಮ್ಮ ಮೇಲೆ ನೈತಿಕ ನಿಮಯಗಳನ್ನು ಹೇರುವದರಲ್ಲಿ ಹೆತ್ತವರಿಗಿರುವ ಉದ್ದೇಶಗಳ ಬಗ್ಗೆ ಪ್ರಶ್ನಿಸುವವರಾಗಿರುತ್ತಾರೆ. ಸ್ವೇಚ್ಛಾಚಾರದ ಆಜ್ಞೆಗಳಿಗೆ ತದ್ವಿರುದ್ಧವಾಗಿ, ನೈತಿಕ ಅಥವಾ ನೀತಿಯ ಕಟ್ಟಳೆಗಳು ದೇವರ ಸ್ವಭಾವ ಮತ್ತು ಜೀವಿತದಿಂದ ಹೊರಹೊಮ್ಮುತ್ತವೆ. ಒಂದು ನೈತಿಕ ನೆಲೆಗಟ್ಟಿನಿಂದ ನೋಡುವದಾದರೆ, ಆತನು ತನ್ನೊಳಗೆ ನಿತ್ಯವಾಗಿ ಸಾಮಂಜಸ್ಯತೆಯುಳ್ಳವನಾಗಿದ್ದಾನೆ. ಯಾಕೋಬನು ಹೇಳಿದ್ದೇನೆಂದರೆ ದೇವರಲ್ಲಿ "ಚಂಚಲತ್ವವೇನೂ ಇಲ್ಲ, ವ್ಯತ್ಯಾಸದ ಸೂಚನೆಯೂ ಇಲ್ಲ" (ಯಾಕೋಬ 1:17). ದಶಾಜ್ಞೆಗಳಂತಹ ಕಟ್ಟಳೆಗಳ ಹಿಂದಿರುವ ತತ್ವಗಳು ನಿತ್ಯಕ್ಕೂ ಸತ್ಯವಾಗಿರುತ್ತವೆ ಯಾಕೆಂದರೆ ಅವುಗಳು ಸ್ವತಃ ದೇವರ ಸ್ವಭಾವವನ್ನೇ ಪ್ರತಿಫಲಿಸುತ್ತವೆ.

ದೇವರು ಮನುಷ್ಯನಿಗೆ ತೋಟದಲ್ಲಿ ಒಂದು ಆಜ್ಞೆಯನ್ನು ಕೊಟ್ಟನು. ಪ್ರಥಮ ದಂಪತಿಗಳು ಅದನ್ನು ಸ್ವೇಚ್ಛಾನುಸಾರದ ಆಜ್ಞೆ ಎಂದು ಪರಿಗಣಿಸಿ ಅದಕ್ಕೆ ಅವಿಧೇಯರಾದಾಗ, ಫಲಿತವು ವಿನಾಶಕರವಾಗಿತ್ತು. ಅದು ಸುಳ್ಳಾಡುವಂತೆ, ಕಾರಣಗಳನ್ನು ಕೊಡುವಂತೆ, ಮತ್ತು ತಪ್ಪನ್ನು ಒಬ್ಬರಿಗೊಬ್ಬರ ಮೇಲೆ ಹಾಕಿಕೊಳ್ಳುವಂತೆ, ಸರ್ಪದ ಕಡೆಗೆ, ಮತ್ತು ಪುನಃ ದೇವರ ಮೇಲೆಯೇ ತಪ್ಪು ಹೊರಿಸುವಂತೆ ನಡಿಸಿತ್ತು. ಎಲ್ಲಾ ಪಾಪವು, ಅದು ಸ್ವೇಚ್ಛಾನುಸಾರದ್ದೆಂದು ತೋರುವಂಥ ಒಂದು ಆಜ್ಞೆಯ ವಿರುದ್ಧವಾಗಿರಲಿ ಅಥವಾ ನೈತಿಕ ಹಾಗೂ ನೀತಿಯ ಆಜ್ಞೆಗಳ ವಿರುದ್ಧವಾಗಿರಲಿ, ಯಾವದೇ ಪಾಪವು ಸತ್ಯವನ್ನು ತಿರುಚುವದಾಗಿರುತ್ತದೆ. ಆದಾಮ ಮತ್ತು ಹವ್ವಳರು ದೇವರಿಗೆ, ತಮ್ಮ ವಿಷಯದಲ್ಲಿ, ಅಥವಾ ಒಬ್ಬರಿಗೊಬ್ಬರಿಗೆ "ಸತ್ಯವಾಗಿ" ನಡೆದುಕೊಳ್ಳಲಿಲ್ಲ ಯಾಕೆಂದರೆ ಅವರು ತಮ್ಮ ನಡವಳಿಕೆಗೆ ನೆಪಗಳನ್ನು ಹೇಳುವವರಾದರು.

ಮನುಷ್ಯನು ತನ್ನೊಳಗೆ ಮತ್ತು ಮಾನವ ಸಂಬಂಧಗಳಲ್ಲಿ ಸಾಮರಸ್ಯವನ್ನು ಬಯಸುವದಾದರೆ ಆತನು ಹೇಗೆ ಜೀವಿಸಬೇಕೆಂಬ ರೀತಿಗೆ ಯೇಸುವಿನ ಸತ್ಯ ಹಾಗೂ ಪ್ರಾಮಾಣಿಕತೆಯ ಜೀವಿತವು ಒಂದು ದೃಢೀಕರಣವಾಗಿರುತ್ತದೆ. ಯಾವದೇ ಮನೆಯಾಗಲಿ ಅಥವಾ ಸಮಾಜವಾಗಲಿ ಮಾನವ ಜೀವಿಗಳ ನಡುವೆ ಸತ್ಯದ ಮೇಲೆ ನಿಂತಿರುವ ಹೊರತು ದೀರ್ಘಕಾಲ ಉಳಿಯಲಾರದು. "ಧರ್ಮಶಾಸ್ತ್ರದಲ್ಲಿ ಗೌರವವಾದದ್ದನ್ನು" (ಮತ್ತಾಯ 23:23) ಮತ್ತು "ಮುಖ್ಯವಾದದ್ದು ಮತ್ತು ಮೊದಲನೆಯದು" (ಮತ್ತಾಯ 22:38) ಎಂಬುದು ಜನರು ಹೇಗೆ ಜೀವಿಸಬೇಕೆಂದು ಸೃಷ್ಟಿಸಲ್ಪಟ್ಟರೆಂಬುದನ್ನು ಪ್ರತಿಫಲಿಸುತ್ತದೆ. ನಾವು ದೇವರುಗಳಾಗಿರಬೇಕೆಂದು ಅಥವಾ ಮುಖ್ಯ ಆಕರ್ಷಣೆಯ ಕೇಂದ್ರವಾಗಿರಬೇಕೆಂದಾಗಲಿ ಸಹ ಉಂಟು ಮಾಡಲ್ಪಡಲಿಲ್ಲ. ನಮ್ಮ ಜೀವಿತದ ಬಹುಪಾಲನ್ನು ನಮ್ಮನ್ನೇ ಮೆಚ್ಚಿಸಿಕೊಳ್ಳುವದರಲ್ಲಿ ಕಳೆಯುವದರ ಬದಲಾಗಿ, ನಮ್ಮ ಜೀವಿತಗಳಿಗಾಗಿರುವ ಪ್ರಾಥಮಿಕ ಆಜ್ಞೆಗಳು ಯಾವವೆಂದರೆ ದೇವರನ್ನು ಪ್ರೀತಿಸುವದು (ಆತನನ್ನು ನಮ್ಮ ಜೀವಿತದ ಕೇಂದ್ರಸ್ಥಾನದಲ್ಲಿರಿಸುವುದು) ಮತ್ತು

ನಮ್ಮ ನೆರೆಯವರನ್ನು ನಮ್ಮಂತೆಯೇ ಪ್ರೀತಿಸುವದು. ಇದಕ್ಕೆ ಮೊದಲು ಮೇಲ್ಮುಖವಾಗಿ ದೇವರ ಕಡೆಗೆ ಮತ್ತು ಬಳಿಕ ಕೆಳಮುಖವಾಗಿ ನಮ್ಮ ಜೊತೆಯ ಮನುಷ್ಯನ ಕಡೆಗೆ ತಿರುಗಿಕೊಂಡಿರುವಂಥ ಜೀವಿತಗಳ ಅಗತ್ಯವಿರುತ್ತದೆ. ನಾವು ಪರಿಶುದ್ಧತೆಯನ್ನು, ನೀತಿಯನ್ನು, ಕರುಣೆ, ಮತ್ತು ಕನಿಕರಗಳನ್ನು ಅನುದಿನವೂ ಆಚರಿಸುವವರಾಗಿರತಕ್ಕದ್ದು. ನಾವು ಲೋಕದಲ್ಲಿ ಕರ್ತನ ಸ್ವಭಾವ ಮತ್ತು ಗುಣಸ್ವಭಾವಗಳನ್ನು ಪ್ರತಿಬಿಂಬಿಸುವವರಾಗಿರಬೇಕು, ಹೀಗೆ ನಮಗೆ ಎಂಥ ಅದ್ಭುತವಾದ ದೇವರು ಇದ್ದಾನೆಂಬುದನ್ನು ಜನರು ಗ್ರಹಿಸಿಕೊಂಡು ಆತನನ್ನು ಮಹಿಮೆಪಡಿಸುವಂತಾಗುವದು (ಮತ್ತಾಯ 5:16, 33–48; ಲೂಕ 6:35, 36).

## ದೇವರನ್ನು ಆರಿಸಿಕೊಳ್ಳುವುದು - ಜೀವವನ್ನು ಆರಿಸಿಕೊಳ್ಳುವುದು (3:1-13)

ಆದಾಮ ಮತ್ತು ಹವ್ವಳರು ನಿಷೇಧಿಸಲ್ಪಟ್ಟ ಮರದ ಕಡೆಗೆ ನೋಡಿದಾಗ, ಅವರಿಗೆ ಒಂದು ಜೀವನ್ಮರಣದ ತೀರ್ಮಾನವು ಎದುರಾಗಿತ್ತು. ಜನರು ಜೀವವನ್ನು ಬಯಸುತ್ತಾರೆ – ಆದರೆ ಬಹಳಷ್ಟು ಮಂದಿ ಅದನ್ನು ತಮ್ಮಿಷ್ಟದ ಪ್ರಕಾರವಾಗಿ ಇರಬೇಕೆಂದು ಬಯಸುತ್ತಾರೆ. ಅವರು ದೇವರ ಮಾರ್ಗವು ತಮಗೆ ತಕ್ಕದ್ದೆಂದು ತೋರುವಷ್ಟು ಕಾಲ ಅದನ್ನು ಅಂಗೀಕರಿಸಿಕೊಳ್ಳಲು ಬಯಸುತ್ತಾರೆ: ಅದರ ಬೇಡಿಕೆಗಳು ಅಷ್ಟೇನೂ ಉನ್ನತವಾಗಿಲ್ಲಾದರೆ, ಅವರು ಈಗಲೂ ತಮಗೆ ಇಷ್ಟವಾಗುವದನ್ನು ಮಾಡಲು ಶಕ್ತರಾಗಿದ್ದರೆ ಮತ್ತು ಅವರ ದಾರಿಗಳನ್ನು ಅವರೇ ರಚಿಸಿಕೊಳ್ಳಲು ಸಾಧ್ಯವಿರುವದಾದರೆ ಅದನ್ನು ಸ್ವೀಕರಿಸಿಕೊಳ್ಳುವರು. ಆದಾಮ ಮತ್ತು ಹವ್ವಳರು ಈ ವಿಷಯದಲ್ಲಿಯೇ ಹೋರಾಟವನ್ನು ಅನುಭವಿಸಬೇಕಾಗಿ ಬಂದಿತ್ತು ಯಾಕೆಂದರೆ ಸರ್ಪವು ದೇವರ ಮಾರ್ಗವನ್ನು ನ್ಯಾಯಯುತವಲ್ಲವೆಂಬಂತೆ ಕಾಣುವ ಹಾಗೆ ಮಾಡಿದ್ದನು. ಶೋಧಕನ ಪ್ರಕಾರವಾಗಿ, ಅವರು ಮರಣದ ವಿಷಯವಾಗಿ ದೇವರ ಮಾತನ್ನು ಅಪಾರ್ಥವನ್ನಾದರೂ ಮಾಡಿಕೊಂಡಿರಬೇಕು ಅಥವಾ ದೇವರಾದರೂ ಸುಳ್ಳನ್ನು ಹೇಳಿರಬಹುದು ಯಾಕೆಂದರೆ ನಿಷೇಧಿಸಲ್ಪಟ್ಟ ಮರದ ಹಣ್ಣನ್ನು ತಿಂದರೆ ಅದು ಅವನನ್ನು ದೇವರಂತೆ ಮಾಡುವದೆಂದು ಅವನಿಗೆ ಗೊತ್ತಿರುತ್ತದೆ ಎಂಬದೆ.

ಕೇವಲ ಎರಡೇ ದಾರಿಗಳನ್ನು - ಜೀವ ಅಥವಾ ಮರಣ - ಹೊಂದಿರುವದು ಅತಿ ಕಠೋರವೆಂದು ಕಾಣಿಸುತ್ತದೆಂಬ ಸೂಚ್ಯಾರ್ಥವು ಬರುವಂತೆ ಸರ್ಪವು ಮಾಡಿತ್ತು. ಕೇವಲ ಈ ಎರಡೇ ಆಯ್ಕೆಗಳ ವಿಷಯದಲ್ಲಿ ಆದಾಮನು ದೇವರ ಅಪ್ಪಣೆಗಳನ್ನು ಕೇಳಿಸಿಕೊಂಡಿದ್ದನಾದರೂ, ದೇವರು ಸತ್ಯವನ್ನು ಹೇಳುತ್ತಿಲ್ಲ, ಸರ್ಪವೇ ಸತ್ಯವನ್ನು ನುಡಿದಿರುತ್ತದೆ ಎಂಬುದಾಗಿ ಆತನು ಹವ್ವಳ ಮೂಲಕವಾಗಿ ಮನವರಿಕೆಗೊಂಡಿದ್ದನು. ಆದಾಮ ಮತ್ತು ಹವ್ವಳರು ಹಣ್ಣನ್ನು ತೆಗೆದುಕೊಂದು ತಿಂದಾಗ, ಅವರು ತಮಗರಿವಿಲ್ಲದೆಯೇ ಮರಣದ ದಾರಿಯನ್ನು ಆರಿಸಿಕೊಂಡಿದ್ದರು. ಮಾನವರಿಗೆ ಯಾವಾಗಲೂ ಎದುರಾಗಿರುವ ಮೂಲಭೂತ ಆಯ್ಕೆಯು ಇದೇ ಆಗಿರುತ್ತದೆ. ಇದು ನಮ್ಮೊಬ್ಬರನ್ನು ನಿರ್ಧಾರವನ್ನು ಮಾಡುವಂತೆ ಕರೆ ಕೊಡುತ್ತದೆ: ಜೀವವೋ ಅಥವಾ ಮರಣವೋ, ನಮಗೆ ಯಾವುದು ಬೇಕು?

ತನ್ನ ಮಕ್ಕಳು ಜೀವಕ್ಕೆ ನಡಿಸುವಂಥ ತನ್ನ ವಾಕ್ಯಗಳಿಗೆ ವಿಧೇಯರಾಗಬೇಕೆಂದು ದೇವರು ಬಯಸುತ್ತಾನೆ. ಕೆಲವು ಸಮಯಗಳಲ್ಲಿ, ಆತನ ಅಪ್ಪಣೆಗಳು ಕಠಿಣವಾಗಿ ಕಾಣಿಸಬಹುದು, ಶಾಸ್ತ್ರಗಳೊಳಗೆ ಹಲವಾರು ಉದಾಹರಣೆಗಳಲ್ಲಿ ಅದನ್ನು ನೋಡುತ್ತೇವೆ.

*ಇಸ್ರಾಯೇಲ್ಯರು ಪಸ್ಕದ ಕುರಿಯನ್ನು ಸಿದ್ಧಪಡಿಸಿ ರಕ್ತವನ್ನು ತಮ್ಮ ಬಾಗಿಲುಗಳ ನಿಲುವುಗಂಬಗಳಿಗೆ ಮತ್ತು ಮೇಲಿನ ಪಟ್ಟಿಗಳಿಗೆ ಲೇಪಿಸಿದವರಾಗಿ ತಮ್ಮ ಮನೆಯೊಳಗೆ ರಾತ್ರಿ*

*ಊಟವನ್ನು ಮಾಡಬೇಕಾಗಿತ್ತು.* ಈ ದೈವಿಕ ಸಲಹೆಯನ್ನು ಅನುಸರಿಸುವವರಿಗೆ ಜೀವದ ವಾಗ್ದಾನ ಮಾಡಲ್ಪಟ್ಟಿತ್ತು; ಆದರೆ ಅದನ್ನು ಅನುಸರಿಸದವರ ಚೊಚ್ಚಲ ಮಕ್ಕಳಿಗೆ ಮರಣವು ಬರಲಿತ್ತು, ಇದು ಮನುಷ್ಯ ಹಾಗೂ ಪ್ರಾಣಿಗಳೆರಡಕ್ಕೂ ಅನ್ವಯವಾಗುವದಾಗಿತ್ತು (ನೋಡಿರಿ ವಿಮೋಚನಕಾಂಡ 12:1-14, 28-30). ಕಡ್ಡಾಯವಾದ ಮಾನವ ದೃಷ್ಟಿಕೋನದಿಂದ ನೋಡುವದಾದರೆ, ಆ ಅಪ್ಪಣೆಗಳು ಅರ್ಥವಿಲ್ಲದವುಗಳಾಗಿ ಕಂಡಿರಬಹುದಾಗಿದೆ. ಹೇಗೂ, ಎಚ್ಚರಿಕೆಯು ಸತ್ಯವೆಂದು ಸಾಭಿತಾಗಿತ್ತು: ರಕ್ತವನ್ನು ಬಾಗಿಲುಗಳಿಗೆ ಲೇಪಿಸಿಕೊಂಡವರು, ಪಸ್ಕದ ರಾತ್ರಿ ಬೋಜನ ಮಾಡಿದವರು ಮಾತ್ರವೇ ಯೆಹೋವನ ನ್ಯಾಯತೀರ್ಪಿನಿಂದ ತಪ್ಪಿಸಿಕೊಂಡಿದ್ದರು.

*ಇಸ್ರಾಯೇಲ್ಯರು ಐಗುಪ್ತವನ್ನು ಬಿಟ್ಟು ಹೊರಡುತ್ತಿರುವ ವೇಳೆ, ಫರೋಹನ ಹೃದಯವು ಕಠಿಣಗೊಂಡಿತ್ತು.* ಆತನು ಅವರನ್ನು ಸಮುದ್ರದ ಕಡೆಯ ವರೆಗೂ ಬೆನ್ನತ್ತಿ ಹೋಗಿದ್ದನು, ಅವರಿಗೆ ತಪ್ಪಿಸಿಕೊಳ್ಳುವದಕ್ಕೆ ಯಾವ ದಾರಿಯೂ ಕಾಣಿಸಲಿಲ್ಲ. ಮೋಶೆಯು ತನ್ನ ಕೋಲನ್ನು ಚಾಚಿ ಜನರನ್ನು ಸಮುದ್ರದ ಕಡೆಗೆ ಸಾಗುವಂತೆ ಮಾಡಬೇಕೆಂಬುದು ದೇವರು ಆತನಿಗೆ ಕೊಟ್ಟ ಅಪ್ಪಣೆಯಾಗಿತ್ತು. ಮತ್ತೊಂದಾವರ್ತಿ, ಅದು ಜೀವವೋ ಅಥವಾ ಮರಣವೋ ಎಂದಾಗಿತ್ತು; ಆದರೆ ಅದೊಂದು ವಿರೋಧಾಭಾಸದ ಆಯ್ಕೆಯಾಗಿತ್ತು: ಸಮುದ್ರದ ದಡದೊಳಗೆ ಸಾಗುವುದು, ನೋಡುವದಕ್ಕೆ ನಿಶ್ಚಿತವಾದ ಮರಣ ಎಂಬಂತೆ ಕಂಡಾಗ್ಯೂ ವಾಸ್ತವಿಕದಲ್ಲಿ ಅದುವೇ ಜೀವದ ದಾರಿಯಾಗಿತ್ತು. ಫರೋಹನನ ಸೈನ್ಯದವರಿಗೆ ಶರಣಾಗಿ ಪುನಃ ಐಗುಪ್ತಕ್ಕೆ ಹಿಂದಿರುಗುವದು ಸಾಧ್ಯವಿರುವ ಏಕೈಕ ಜೀವದ ದಾರಿಯನ್ನು ಒದಗಿಸುವದೆನೋ ಎಂಬಂತೆ ಕಂಡಿತ್ತು, ಆದರೆ ಅದು ನಿಜಕ್ಕೂ ಒಂದು ಮರಣದ ದಾರಿಯೇ ಆಗಿರಬಹುದಾಗಿತ್ತು.

*ಶೀಘ್ರದಲ್ಲೇ ವಾಗ್ದಾನ ದೇಶವನ್ನು ಪ್ರವೇಶಿಸಲಿದ್ದ ಇಸ್ರಾಯೇಲ್ಯರಿಗೆ ಮೋಶೆಯು ವಿದಾಯ ಭಾಷಣವನ್ನು ಮಾಡಿದ ವೇಳೆಯಲ್ಲಿ, ಆತನು ಅವರಿಗೆ ಬೇರೆ ದೇವರುಗಳನ್ನು ಆರಾಧಿಸಬಾರದೆಂದು ಎಚ್ಚರಿಸಿದನು.* ಅವರು ಆ ಶೋಧನೆಗೆ ವಶವಾಗುವದಾದರೆ, ಅವರು ಶೀಘ್ರದಲ್ಲಿಯೇ ಸ್ವಾಧೀನಪಡಿಸಿಕೊಳ್ಳಲಿರುವ ದೇಶದಿಂದ ನಾಶವಾಗಿ ಹೋಗುವರು. ಮೋಶೆಯು ತನ್ನ ಭಾಷಣದ ಮುಕ್ತಾಯದಲ್ಲಿ ಹೀಗೆ ಹೇಳಿದನು,

> ನಾನು ಜೀವಮರಣಗಳನ್ನೂ ಆಶೀರ್ವಾದಶಾಪಗಳನ್ನೂ ಈಗ ನಿಮ್ಮ ಮುಂದೆ ಇಟ್ಟಿದ್ದೇನೆ; ಇದಕ್ಕೆ ಭೂಮ್ಯಾಕಾಶಗಳು ಸಾಕ್ಷಿಗಳಾಗಿರಲಿ. ಆದದರಿಂದ ನೀವೂ ನಿಮ್ಮ ಸಂತತಿಯವರೂ ಬದುಕಿಕೊಳ್ಳುವಂತೆ ಜೀವವನ್ನೇ ಆದುಕೊಳ್ಳಿರಿ; ನಿಮ್ಮ ದೇವರಾದ ಯೆಹೋವನನ್ನು ಪ್ರೀತಿಸಿ ಆತನ ಮಾತಿಗೆ ವಿಧೇಯರಾಗಿರ್ರಿ, ಆತನನ್ನು ಹೊಂದಿಕೊಂಡೇ ಇರ್ರಿ. ಯೆಹೋವನು ನಿಮ್ಮ ಪಿತೃಗಳಾದ ಅಬ್ರಹಾಮ್ ಇಸಾಕ್ ಯಾಕೋಬರಿಗೆ ಪ್ರಮಾಣ ಮಾಡಿಕೊಟ್ಟ ದೇಶದಲ್ಲಿ ನೀವು ಬದುಕಿಕೊಳ್ಳುವದಕ್ಕೂ ಬಹುಕಾಲ ಇರುವದಕ್ಕೂ ಆತನೇ ಆಧಾರ (ಧರ್ಮೋಪದೇಶಕಾಂಡ 30:19, 20).

ಮರಣ ಮತ್ತು ಶಾಪಗಳನ್ನು ಆರಿಸಿಕೊಳ್ಳದೆ, ಆತನ ಸ್ವರಕ್ಕೆ ವಿಧೇಯರಾಗಿ, ಮತ್ತು ಆತನನ್ನು ಗಟ್ಟಿಯಾಗಿ ಹಿಡಿದುಕೊಂಡಿರುವವರಾಗಿ ಜೀವ ಮತ್ತು ಆಶೀರ್ವಾದಗಳನ್ನು ಆರಿಸಿಕೊಳ್ಳಬೇಕೆಂದು ಪ್ರೀತಿಯುಳ್ಳ ಯೆಹೋವನು ಜನರನ್ನು ಬೇಡಿಕೊಂಡನು. ಹಾಗೆ ಮಾಡುವ ಮೂಲಕ ಅವರು ವಾಗ್ದಾನ ದೇಶದಲ್ಲಿ ಹೆಚ್ಚು ದಿನ ಹಾಗೂ ದೀರ್ಘಾಯುಷ್ಯವನ್ನು ಅನುಭವಿಸುವರು ಮತ್ತು ಬಹಿಷ್ಕಾರ, ಮರಣ, ಹಾಗೂ ಶಾಪಗಳಿಂದ ದೂರವಿರುವರು. ಈ ವಾಕ್ಯಭಾಗವು ಆದಾಮ ಮತ್ತು ಹವ್ವಳರ ಅನುಭವವನ್ನು ಪ್ರತಿಧ್ವನಿಸುವಂತೆ ಕಾಣಿಸುತ್ತದೆ,

ಅವರು ಇಸ್ರಾಯೇಲ್ಯರಿಗೆ ಮೋಶೆಯು ಏನು ಬುದ್ಧಿವಾದ ಹೇಳಿದನೋ ಅದಕ್ಕೆ ತದ್ವಿರುದ್ಧವಾದದ್ದನ್ನೇ ಮಾಡಿದ್ದರು. ಅವರು ದೀರ್ಘಾಯುಷ್ಯವನ್ನು ಮತ್ತು ತೋಟದಲ್ಲಿನ ಆಶೀರ್ವಾದಗಳನ್ನು ಕಳೆದುಕೊಂಡಿದ್ದರು ಮತ್ತು ದೇವರಿಗೆ ಅವಿಧೇಯರಾಗುವ ಮೂಲಕ ಮರಣ ಹಾಗೂ ಶಾಪಗಳನ್ನು ಆರಿಸಿಕೊಂಡಿದ್ದರು.

*ಯೇಸುವಿನ ಸೇವೆಯ ವೇಳೆಯಲ್ಲಿ, ಆತನು ಇಕ್ಕಟ್ಟಾದ ದಾರಿಯು ಜೀವಕ್ಕೆ ಮತ್ತು ಅಗಲವಾದ ದಾರಿಯು ನಾಶನಕ್ಕೆ (ಮರಣ) ನಡಿಸುತ್ತದೆಂದು ಕಲಿಸಿದನು* (ಮತ್ತಾಯ 7:13, 14). "ಆತನ ಮಗನನ್ನು ನಂಬುವವನಿಗೆ ನಿತ್ಯಜೀವ ಉಂಟು; ಮಗನಿಗೆ ಒಳಗಾಗದವನು ಜೀವವನ್ನು ಕಾಣುವದೇ ಇಲ್ಲ; ದೇವರ ಕೋಪವು ಅವನ ಮೇಲೆ ನೆಲೆಗೊಂಡಿರುವದು" (ಯೋಹಾನ 3:36). ಕ್ರಿಸ್ತನನ್ನು ಕಳುಹಿಸಿದ ದೇವರ ಸ್ವರವನ್ನು ಆಲಿಸಿ "ನಂಬುವವನು" "ನಿತ್ಯಜೀವವನ್ನು ಹೊಂದಿದ್ದಾನೆ. ಅವನು ತೀರ್ಪಿಗೆ ಗುರಿಯಾಗುವದಿಲ್ಲ; ಮರಣದಿಂದ ಪಾರಾಗಿ ಜೀವಕ್ಕೆ ಸೇರಿದ್ದಾನೆ" (ಯೋಹಾನ 5:24). ಯೇಸುವು ಜೀವದ ದಾರಿಯಾಗಿದ್ದಾನೆ (ಯೋಹಾನ 14:6), ಆದರೆ ಆತನಲ್ಲಿ ನಂಬಿಕೆಯಿಡುವದಕ್ಕೆ ನಿರಾಕರಿಸುವವರು ತಮ್ಮ ಪಾಪಗಳಲ್ಲಿಯೇ ಸಾಯುವರು (ಕಳೆದು ಹೋಗುವರು). ಆತನು ಹೋಗುವಲ್ಲಿಗೆ, ಅಂದರೆ ಪರಲೋಕಕ್ಕೆ ಅವರು ಹೋಗಲು ಸಾಧ್ಯವಿಲ್ಲ (ಯೋಹಾನ 8:21, 24).

ಜೀವ ಮತ್ತು ಮರಣಗಳ ನಡುವಿನ ಆಯ್ಕೆ ನಮಗೆ ಎದುರಾಗುವಾಗ, ನಾವು ಜೀವವನ್ನು ಆರಿಸಿಕೊಳ್ಳುವಂತೆ ಒತ್ತಾಯಿಸಲ್ಪಡುತ್ತೇವೆ. ನಾವು ಮರಣಿಸಬಾರದೆಂದು ಯೇಸುವು ಮರಣಿಸಿದನು. ಆತನಲ್ಲಿರುವ ಜೀವವನ್ನು ಆರಿಸಿಕೊಳ್ಳೋಣ.

### ಗರ್ವದ ಪಾಪ (3:5, 6)

ಗರ್ವವು ದೇವರ ವಿರುದ್ಧವಾಗಿರುವ ಅವಿಧೇಯತೆಯ ಅತ್ಯಂಥ ಬಾಹ್ಯ ಕ್ರಿಯೆಗಳ ಹಿಂದೆ ಇರುವಂಥ ಮೂಲಭೂತವಾದ ಪಾಪವೆಂದು ಕಾಣಿಸುತ್ತದೆ. ಇದು ತೂರ್ ದೇಶದ ಅರಸನ ವಿರುದ್ಧದ ಕುಚೋದ್ಯದ ವಿರುದ್ಧ ಮಾತುಗಳಲ್ಲಿ ನಾಟಕೀಯವಾಗಿ ವ್ಯಕ್ತಪಡಿಸಲ್ಪಟ್ಟಿದೆ, ಆತನು ತನ್ನ ಹೃದಯದಲ್ಲಿ ಹೀಗಂದುಕೊಂಡನು, "ಆಹಾ, ನಾನು ದೇವರು, ಸಮುದ್ರ ಮಧ್ಯದಲ್ಲಿ ದೇವರ ಆಸನವನ್ನೇ ಹತ್ತಿದ್ದೇನೆ," ಆದರೆ ಅವನಿಗೆ ಹೀಗೆ ಹೇಳಲಾಯಿತು, "ನೀನು ನಿನ್ನ ಮನಸ್ಸನ್ನು ದೇವರ ಮನಸ್ಸಿನಷ್ಟು ಹೆಚ್ಚಿಸಿಕೊಂಡದೇನು? ನೀನು ಎಂದಿಗೂ ದೇವರಲ್ಲ, ನೀನು ನರಪ್ರಾಣಿಯೇ" (ಯೆಹೆಜ್ಕೇಲ 28:2). ಯೆಹೆಜ್ಕೇಲನು ಈ ಅನ್ಯಧರ್ಮಿಯ ಅರಸನನ್ನು ಏದೆನ್ ತೋಟದಲ್ಲಿದ್ದ ಪ್ರಥಮ ದಂಪತಿಗಳಿಗೆ ಹೋಲಿಕೆ ಮಾಡುವಕ್ಕಾಗಿ ಅತ್ಯಂಥ ಸಾಂಕೇತಿಕ ಭಾಷೆಯನ್ನು ಬಳಸಿದನು, ಅವರು ದೇವರಂತೆ ಜ್ಞಾನಿಗಳಾಗಿರಬೇಕೆಂದು ಬಯಸಿದ್ದರಿಂದಾಗಿ ಪಾಪವನ್ನು ಮಾಡಿದ್ದರು[33]: "ದೇವರ ಉದ್ಯಾನವನವಾದ ಏದೆನಿನಲ್ಲಿ ನೀನಿದ್ದಿ; ... ನಿನ್ನ ಸೃಷ್ಟಿಯ ದಿನದಿಂದ ನಿನ್ನಲ್ಲಿ ಅಪರಾಧವು ಸಿಕ್ಕುವ ತನಕ ನಿನ್ನ ನಡತೆಯು ನಿರ್ದೋಷವಾಗಿ ಕಾಣುತಿತ್ತು" (ಯೆಹೆಜ್ಕೇಲ 28:13–15).

ಪ್ರವಾದಿಯು ಇದಾದ ನಂತರ ಅರಸನ ಗರ್ವಭರಿತ ಹೃದಯ ಕುರಿತು ಮತ್ತೊಂದು ಹೇಳಿಕೆಯನ್ನು ಕೊಟ್ಟನು; "ನೀನು ನಿನ್ನ ಸೊಬಗಿನ ನಿಮಿತ್ತ ಉಬ್ಬಿದ ಮನಸ್ಸುಳ್ಳವನಾಗಿ ನಿನ್ನ ಮೆರೆತದಿಂದ ನಿನ್ನ ಬುದ್ಧಿಯನ್ನು ಹಾಳುಮಾಡಿಕೊಂಡಿ; ಇದರಿಂದ ನಾನು ನಿನ್ನನ್ನು ನೆಲಕ್ಕೆ ದೊಬ್ಬಿ ನೀನು ಅರಸರಿಗೆ ನೋಟವಾಗುವಂತೆ ಅವರ ಕಣ್ಣಮುಂದೆ ಹಾಕಿದೆನು" (ಯೆಹೆಜ್ಕೇಲ 28:17). ಆದದರಿಂದ, ದೇವರು ಈ ದುಷ್ಟ ಅರಸನ ಮೇಲೆ ದೈವಿಕ ದಂಡನೆಯನ್ನು ನುಡಿಯುವವನಾಗಿ, ಆತನು ತನ್ನ ಸಾಂಕೇತಿಕವಾದ ಏದೆನ್ ತೋಟವನ್ನು ಕಳೆದುಕೊಂಡು

ದೇವರುಗಳ ನಡುವೆ ಇರುವ ತನ್ನ ಎತ್ತರವಾದ ಸಿಂಹಾಸನದಿಂದ ಕಿತ್ತು ಭೂಮಿಗೆ ದೊಬ್ಬಲ್ಪಡುವನು ಎಂದು ಹೇಳಿದನು. ಅರಸನಿಗೆ "ನಿನಗೆ ಹತರಾದವರ ಗತಿ ಸಂಭವಿಸುವದು" ಎಂಬ ದಂಡನೆಯ ತೀರ್ಪು ನೀಡಲ್ಪಟ್ಟಿತು (ಯೆಹೆಜ್ಕೇಲ 28:8; ನೋಡಿರಿ 28:10, 19).

ಯೇಸುವು ಹೇಳಿದ ಹಾಗೆ, ಇದು ಆದಿಯಿಂದಲೂ ಮನುಷ್ಯರನ್ನು ಮರಳುಗೊಳಿಸಿರುವಂಥ ಸುಳ್ಳು ಆಗಿರುತ್ತದೆ (ನೋಡಿರಿ ಯೋಹಾನ 8:44): ಗರ್ವದಿಂದ ಉಬ್ಬಿದವರಾಗಿ, ಮಾನವರು ದೇವರಿಂದ ನಮಗೆ ಸ್ವಾತಂತ್ರ್ಯ ಸಿಕ್ಕಿರುತ್ತೆಂದು ಘೋಷಿಸಿಕೊಳ್ಳಬಲ್ಲರು ಮತ್ತು ತಮ್ಮ ಜೀವಿತದ ಗತಿಯನ್ನು ತಾವೇ ರೂಪಸಿಕೊಳ್ಳಬಲ್ಲರು ಎಂಬುದಾಗಿ ಯೋಚಿಸುತ್ತಾರೆ. ಅವರು ನಿರ್ಭೀತಿಯಿಂದ - ತಮ್ಮ ಅವಿಧೇಯತೆಗೆ ದಂಡನೆಯಾಗುವದೆಂಬ ಭಯವಿಲ್ಲದೆ - ಪಾಪವನ್ನು ಮಾಡಬಲ್ಲರು ಎಂದು ಯೋಚಿಸಿಕೊಳ್ಳುತ್ತಾರೆ. ಹೇಗೂ, ಪುನಃ ಪುನಃ, "ನಿಮ್ಮ ಪಾಪವು ನಿಮ್ಮನ್ನು ಹಿಡಿಯುವ ತನ ಹುಡುಕಿಕೊಂಡೇ ಬರುವದು" (ಅರಣ್ಯಕಾಂಡ 32:23) ಎಂಬದಕ್ಕೆ ಮಾನವ ಅನುಭವವು ಸಾಕ್ಷಿಯಾಗಿರುತ್ತದೆ. ಮಹಾ ದುರಂತವು ಏನೆಂದರೆ ಪಾಪದ ಸಂಬಳವು ಬಿಡುಗಡೆ ಮತ್ತು ಜೀವಗಳಾಗಿರುವದಿಲ್ಲ, ಆದರೆ ಅಂತಿಮವಾಗಿ ಶ್ರಮೆ ಮತ್ತು ಮರಣಗಳೇ ಆಗಿರುತ್ತದೆ (ರೋಮಾ 6:23), ಅವುಗಳು ಎಲ್ಲಾ ಮಾನವರಿಗೂ ವ್ಯಾಪಿಸಿಕೊಂಡಿರುತ್ತವೆ (ರೋಮಾ 5:12).

---

## ಅಡಿಟಿಪ್ಪಣಿಗಳು

[1]Robert L. Alden, "נָחָשׁ," in *TWOT*, 2:571. [2]ಈ ಕಥೆಯಲ್ಲಿ, ಅರೆ-ದೈವಿಕ ಅರಸನಾಗಿದ್ದ ಗಿಲ್ಗಾಮೇಶನು, ತನ್ನ ವೃದ್ಧಾಪ್ಯದಲ್ಲಿ ಪುನಃ ಯೌವನಸ್ಥನಾಗುವದಕ್ಕಾಗಿ ತಿನ್ನಬೇಕೆಂದು ಗಿಡವೊಂದನ್ನು ಹುಡುಕುವದಕ್ಕಾಗಿ ಸಮುದ್ರದ ತಳಕ್ಕೆ ಪ್ರಯಾಣ ಮಾಡಿದ್ದನು. ಆತನು ಗಿಡದ ಸಮೇತ ಮರಳಿ ಬರುವ ವೇಳೆ, ಆತನು ಆಳವಾದ ಕೊಳದಲ್ಲಿ ತನ್ನನ್ನು ತಂಪುಗೊಳಿಸಿಕೊಳ್ಳಲು ನಿರ್ಧರಿಸಿದನು. ಆತನು ನೀರಿನಲ್ಲಿ ಆನಂದಿಸುತ್ತಿರುವ ವೇಳೆ, ಒಂದು ಸರ್ಪವು ಗಿಡದ ಸುವಾನೆಯನ್ನು ಮೂಸಿ ಅದನ್ನು ಅವನಿಂದ ಕಸಿದುಕೊಂಡಿತ್ತು ಮತ್ತು ಅದನ್ನು ಸೇವಿಸಿ ಬಿಟ್ಟಿತ್ತು. ಅದರ ಫಲಿತವಾಗಿ, ಆ ಜೀವಿಯು ತನ್ನ ಚರ್ಮವನ್ನು ಕಳಚಿಕೊಂಡು ನವಯೌವನವನ್ನು ಪಡೆದುಕೊಂಡಿತ್ತು. (*The Epic of Gilgamesh* 11.263–296.) [3]Wisdom of Solomon 2:23, 24 (NRSV). [4]Ronald B. Allen, "עָרוּם," in *TWOT*, 2:697–98. [5]ಪೌಲನು ರೋಮಾ 5:12-19ರಲ್ಲಿ ಪ್ರಥಮ ಪಾಪದ ಅಂತಿಮ ದೋಷಾರೋಪವನ್ನು ಆದಾಮನ ಮೇಲೆ ಹೊರಿಸಿದನು. [6]ದೇವರ ಮೂಲ ಆಜ್ಞೆಯು ಮರವನ್ನು ಮುಟ್ಟಕೂಡದೆಂಬ ನಿಷೇಧವನ್ನು ಒಳಗೊಂಡಿರುವದು ಸಾಧ್ಯವಿದೆ, ಆದರೆ ಲೇಖಕನು 3:3ರ ತನಕವೂ ಈ ವಿವರವನ್ನು ಪ್ರಟಕಗೊಳಿಸದಿರುವದಕ್ಕೆ ಉದ್ದೇಶಪೂರ್ವಕವಾಗಿ ನಿರ್ಧಿರಿಸಿಕೊಂಡನು. ಹೇಗೂ, ಹವ್ವಳ ಪ್ರತಿಕ್ರಿಯೆಯನ್ನು ದೇವರ ಆಜ್ಞೆಯ ಉತ್ಪ್ರೇಕ್ಷೆಗೊಳಿಸುವಿಕೆ ಎಂದು ಅರ್ಥನಿರೂಪಣೆ ಮಾಡುವದು ಹೆಚ್ಚು ಸ್ವಾಭಾವಿಕವಾಗಿರುತ್ತದೆ. [7]Robert L. Alden, "תַּאֲוָה," in *TWOT*, 1:18. [8]Ludwig Koehler and Walter Baumgartner, *The Hebrew and Aramaic Lexicon of the Old Testament*, study ed., trans. and ed. M. E. J. Richardson (Boston: Brill, 2001), 2:1083. [9]ಇದು ಅನಂತರದಲ್ಲಿ ದೇವರು ಕಾಯಿನನಿಗೆ ಕೇಳಿದ ಅದೇ ವಿಧವಾದ ಪ್ರಶ್ನೆಯಾಗಿರುತ್ತದೆ, ಆತನು ಹೇಳಿದ್ದೇನೆಂದರೆ, "ನಿನ್ನ ತಮ್ಮನಾದ ಹೇಬೆಲನು ಎಲ್ಲಿ" (4:9). ಅಣ್ಣನು ತನ್ನ ತಮ್ಮನನ್ನು ಕೊಲೆ ಮಾಡಿದ್ದಾನೆಂದು ಮತ್ತು ಆತನ ದೇಹವನ್ನು ಭೂಮಿಯಲ್ಲಿ ಬಚ್ಚಿಟ್ಟು ತನ್ನ ಪಾಪವನ್ನು ಮರೆಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದಾನೆಂಬುದು ಯೆಹೋವನಿಗೆ ಗೊತ್ತಿತ್ತು. ಆದದರಿಂದ, ಹೇಬೆಲನು ಎಲ್ಲಿದ್ದಾನೆಂಬುದು ನನಗೆ ಗೊತ್ತಿಲ್ಲ ಎಂದು ಹೇಳಿದಾಗ, ದೇವರು ಅವನಿಗೆ ಹೀಗೆ ಹೇಳಿದನು, "ನಿನ್ನ ತಮ್ಮನ ರಕ್ತವು ಭೂಮಿಯ ಕಡೆಯಿಂದ ನನ್ನನ್ನು ಕೂಗುತ್ತದೆ" (4:10). [10]Kenneth A. Mathews, *Genesis 1—11:26*, The New American Commentary, vol. 1A (Nashville: Broadman & Holman Publishers, 1996), 241.

[11]Victor P. Hamilton, *The Book of Genesis: Chapters 1—17*, The New International Commentary on the Old Testament (Grand Rapids, Mich.: Wm. B. Eerdmans Publishing Co., 1990), 194. [12]H. C. Leupold, *Exposition of Genesis*, vol. 1 (N.p.: Wartburg Press, 1942; reprint,

Grand Rapids, Mich.: Baker Book House, 1953), 160. [13]"Targum of Palestine," in *The Targums*, trans. J. W. Etheridge (New York: KTAV Publishing House, 1968), 166. ಅದರ ಜೊತೆಗೆ, Josephusನು ಹೇಳಿದ್ದೇನೆಂದರೆ ದೇವರು "ಅವನಿಗೆ ತನ್ನ ಕಾಲುಗಳ ಬಳಕೆ ಮಾಡದಂತೆ ಮಾಡಿದನು" (Josephus *Antiquities* 1.1.4). [14]Derek Kidner, *Genesis: An Introduction and Commentary*, The Tyndale Old Testament Commentaries (Downers Grove, Ill.: Inter-Varsity Press, 1967), 70. [15]Walter C. Kaiser, "זֶרַע," in *TWOT*, 1:253. [16]Hamilton, *The Book of Genesis: Chapters 1—17*, 197. [17]H. D. Preuss, "זֶרַע," in *Theological Dictionary of the Old Testament*, trans. David E. Green, ed. G. Johannes Botterweck and Helmer Ringgren (Grand Rapids, Mich.: Wm. B. Eerdmans Publishing Co., 1980), 4:150. [18]ಈ ವಚನವನ್ನು ಭಾವಾನುವಾದಗೊಳಿಸುತ್ತಾ, Targum of Jerusalem ಹೀಗೆ ಹೇಳುತ್ತದೆ, "ಹಾಗಿದ್ದರೂ ಸ್ತ್ರೀಯ ಪುತ್ರರಿಗೆ ಔಷಧವು ಇರಲಿದೆ, ಆದರೆ ಸರ್ಪವೇ, ನಿನಗೆ ಯಾವ ಔಷಧವು ಇರುವದಿಲ್ಲ; ಹಿಮ್ಮಡಿಗೆ ಮೆಶಿಹಾ [ಮೆಸ್ಸೀಯ] ಕಾಲದಲ್ಲಿ ಒಂದು ಪರಿಹಾರೋಪಾಯವು ಸಿಕ್ಕುವುದು." The Targum of Palestine ಸಹ ಇದೇ ರೀತಿಯ ಮಾತುಗಳನ್ನು ಹೊಂದಿರುತ್ತದೆ. (*The Targums*, 166.) [19]Jack P. Lewis, "The Woman's Seed (Gen. 3:15)," *Journal of the Evangelical Theological Society* 34, no. 3 (September 1991): 319. [20]William Sanford LaSor, "Prophecy, Inspiration, and *Sensus Plenior*," *Tyndale Bulletin* 29 (1978): 57.

[21]Gordon J. Wenham, "Genesis," in *New Bible Commentary: 21st Century Edition*, ed. G. J. Wenham, J. A. Motyer, D. A. Carson, and R. T. France (Downers Grove, Ill.: Inter-Varsity Press, 1994), 63. [22]Victor P. Hamilton, "תְּשׁוּקָה," in *TWOT*, 2:913. [23]Koehler and Baumgartner, 1:647. [24]Mark S. Howell, "Paradise Lost (Genesis 3—4)," in *Harding University Lectures* (1991): 35. [25]Jacob M. Myers, "Dress and Ornaments," in *The Interpreter's Dictionary of the Bible*, ed. George Arthur Buttrick (Nashville: Abingdon Press, 1962), 1:869. [26]ಈ ಹೇಳಿಕೆಯು ಪಾಪ ಮಾಡಿದ ದೇವದೂತರನ್ನು ಕೈ ಬಿಟ್ಟಿರುತ್ತದೆ (2 ಪೇತ್ರ 2:4; ಯೂದ 6). [27]Hermann J. Austel, "שָׁלַח," in *TWOT*, 2:927–28. [28]Mathews, 257. [29]ಬಹಳಷ್ಟು ಕಾಲದ ನಂತರ, ದೇವದರ್ಶನ ಗುಡಾರ ಮತ್ತು ದೇವಾಲಯದ ಪ್ರವೇಶ ದ್ವಾರಗಳು ಪೂರ್ವ ದಿಕ್ಕಿನ ಕಡೆಗೆ ಇದ್ದವು. [30]ಪ್ರಾಚೀನ ಮಧ್ಯಪ್ರಾಚ್ಯದಲ್ಲಿ, ಸಂಯುಕ್ತಶೈಲಿಯ ಪ್ರಿಮೆಗಳು ಸ್ಥಳಗಳನ್ನು ಮತ್ತು ದೇವಾಲಯಗಳನ್ನು "ಕಾವಲು" ಕಾಯುತ್ತಿದ್ದವು. ಇವುಗಳಿಗೆ ಅನೇಕ ಸಾರಿ ಮನುಷ್ಯನ ಮುಖ, ಒಂದು ಹದ್ದಿನ ರೆಕ್ಕೆಗಳು, ಮತ್ತು ಒಂದು ಹೋರಿ ಅಥವಾ ಸಿಂಹದ ದೇಹವಿರುತ್ತಿತ್ತು. (ನೋಡಿರಿ David L. Roper, *Revelation 12—22*, Truth for Today Commentary [Searcy, Ark.: Resource Publications, 2002], 435.) ಅಷ್ಟುಮಾತ್ರವಲ್ಲದೆ, ರೆಕ್ಕೆಯುಳ್ಳ ಜೀವಿಗಳು ಒಂದು ಪವಿತ್ರ ಮರಕ್ಕೆ ಕಾವಲಾಗಿರುವದು ಪ್ರಾಚೀನ ಮಧ್ಯಪ್ರಾಚ್ಯದಲ್ಲಿ ಒಂದು ಸರ್ವಸಾಮಾನ್ಯವಾಗಿರುವ ದೃಶ್ಯವಾಗಿತ್ತು. (See John H. Walton, "Genesis," in *Zondervan Illustrated Bible Backgrounds Commentary*, vol. 1, *Genesis, Exodus, Leviticus, Numbers, Deuteronomy*, ed. John H. Walton [Grand Rapids, Mich.: Zondervan, 2009], 2, 3, 37.)

[31]ಅರಣ್ಯಕಾಂಡ 22:23, 31, 33ರಲ್ಲಿ ಕತ್ತಿಯನ್ನು ಹಿಡಿದಿದ್ದ ದೇವದೂತನೊಬ್ಬನು ಬೀಳಾಮನ ದಾರಿಗೆ ಅಡ್ಡವಾಗಿ ನಿಂತಿದ್ದನು. ಧರ್ಮೋಪದೇಶಕಾಂಡ 32:41, 42 ವಚನಗಳು ದೇವರ ನ್ಯಾಯ ಮತ್ತು ಆತನ ವೈರಿಗಳ ಮೇಲಿನ ಆತನ ಪ್ರತೀಕಾರಕ್ಕೆ ಸಂಬಂಧಪಟ್ಟಂತೆ ಒಂದು "ತಳತಳಿಸುವ ಕತ್ತಿ" ಕುರಿತಾಗಿ ಮಾತಾಡುತ್ತವೆ. [32]ಮೂಲ ಗ್ರೀಕ್ ಹಸ್ತಪ್ರತಿಗಳಲ್ಲಿ ಅಧ್ಯಾಯಗಳ ವಿಭಾಗಗಳಿರುವದಿಲ್ಲ; ಯೋಹಾನ 2:23-25ರಲ್ಲಿನ ಯೋಚನೆಯು ಯೋಹಾನ 3ನೇ ಅಧ್ಯಾಯದಲ್ಲಿ ಮುಂದುವರೆಯುತ್ತದಾದ್ದರಿಂದ, ಯೋಹಾನನು ಯಾವ ಯೆರೂಸಲೇಮಿನಲ್ಲಿರುವ ಯೆಹೂದ್ಯರ ಕುರಿತು ಮಾತಾಡುತ್ತಿದ್ದಾನೋ ಅವರಿಗೆ ನಿಕೊದೇಮನು ಒಂಧು ಉದಾಹರಣೆಯಾಗಿದ್ದನು ಎಂಬುದರಲ್ಲಿ ಸಂದೇಹವಿಲ್ಲ. ಯೇಸುವು ಅದ್ಭುತಗಳನ್ನು ಮಾಡಿದ್ದರಿಂದಾಗಿ ಆತನು ದೇವರಿಂದ ಕಳುಹಿಸಲ್ಪಟ್ಟ ಮನುಷ್ಯನೆಂಬುದನ್ನು ಈತನು ನಂಬಿದ್ದನು; ಆದರೆ ಕನಿಷ್ಠ ಈ ಹಂತದಲ್ಲಿ, ಈತನಲ್ಲಿ ರಕ್ಷಣೆಯುಂಟು ಮಾಡುವ ನಂಬಿಕೆಯು ಇರಲಿಲ್ಲ ಯಾಕೆಂದರೆ ಆತನು "ನಂಬುವದಕ್ಕೆ" ಮನಸ್ಸುಳ್ಳವನಾಗಿರಲಿಲ್ಲ, ಅಂದರೆ, ತನ್ನನ್ನು ಯೇಸುವಿಗೆ ಅರ್ಪಿಸಿಕೊಂಡು ಹೊಸದಾಗಿ ಹುಟ್ಟುವದಕ್ಕೆ ಸಿದ್ಧನಿರಲಿಲ್ಲ (ಯೋಹಾನ 3:1-5). [33]ದೇವರಂತೆ ಆಗಬೇಕೆಂಬ ಬಯಕೆಯು ಯೆಶಾಯ 14:4-23ರಲ್ಲಿ ಸಹ ಕಂಡು ಬರುತ್ತದೆ. ಅಲ್ಲಿ, ಪ್ರವಾದಿಯು ಬಾಬೆಲಿನ ರಾಜನ ಕುರಿತಾಗಿ ಅದೇ ರೀತಿಯ ವರ್ಣನೆಯನ್ನು ಮಾಡುತ್ತಾನೆ, ಆತನು ತನ್ನ ಕ್ರೂರವಾದ ವಿಜಯಗಳಿಂದ ಬಹುಪಾಲು ಪ್ರಾಚೀನ ಮಧ್ಯಪ್ರಾಚ್ಯವನ್ನು ನಾಶಗೊಳಿಸಿದ್ದನು. ಗರ್ವ ಮತ್ತು ದುರಹಂಕಾರದಿಂದ ಉಬ್ಬಿಕೊಂಡು ಆತನು "ದೇವರ ನಕ್ಷತ್ರಗಳಿಗಿಂತ ಮೇಲೆ" ಆಕಾಶದಲ್ಲಿ ತನ್ನ ಸಿಂಹಾಸನವನ್ನು ಏರಿಸಿದನು; ಆದರೆ ಎತ್ತರದಿಂದ ಬೀಳಲಿದ್ದನು ಮತ್ತು "ಪಾತಾಳಕ್ಕೆ, ಅಧೋಲೋಕದ ಅಗಾಧಸ್ಥಳಗಳಿಗೆ ತಳ್ಳಲ್ಪಡಲಿದ್ದನು" (ಯೆಶಾಯ 14:13, 15).